## ಅಧ್ಯಾಯ 3

# ತಿಮೊಥೆಯನ ಭೇಟಿಯಿಂದಾದ ಪ್ರೋತ್ಸಾಹ

### ಥೆಸಲೋನಿಕದಲ್ಲಿ ತಿಮೊಥೆಯನಿಗಿದ್ದ ಧ್ಯೇಯ (3:1-5)

**[1]ಆದದರಿಂದ ಇನ್ನ ತಡೆಯಲಾರದೆ ನಾವು ಅಥೇನೆಯಲ್ಲಿ ಒಬ್ಬೊಂಟಿಗರಾಗಿಯೇ ಇರುವದು ಒಳ್ಳೇದೆಂದು ಯೋಚಿಸಿ [2]ನಿಮ್ಮ ಮೇಲೆ ಬಂದಿರುವ ಸಂಕಟಗಳಲ್ಲಿ ಒಬ್ಬರೂ ಚಂಚಲರಾಗದಂತೆ ನಿಮ್ಮನ್ನು ದೃಢಪಡಿಸುವದಕ್ಕೂ ನಿಮ್ಮ ನಂಬಿಕೆಯ ವೃದ್ಧಿಗಾಗಿ ಪ್ರಬೋಧಿಸುವದಕ್ಕೂ ನಮ್ಮ ಸಹೋದರನೂ ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿದೆವು. [3]ಸಂಕಟಗಳನ್ನು ಅನುಭವಿಸುವದಕ್ಕಾಗಿ ನಾವು ನೇಮಿಸಲ್ಪಟ್ಟವರೆಂದು ನೀವೇ ಬಲ್ಲಿರಷ್ಟೆ. [4]ನಾವು ನಿಮ್ಮ ಬಳಿಯಲ್ಲಿದ್ದಾಗ ಸಂಕಟವನ್ನು ಅನುಭವಿಸಲೇಬೇಕೆಂದು ಮುಂದಾಗಿ ಹೇಳಿದೆವಲ್ಲಾ; ಅದರಂತೆ ಆಯಿತು, ನಿಮ್ಮ ಅನುಭವಕ್ಕೂ ಬಂತು. [5]ಆದದರಿಂದ ನಾನು ಇನ್ನು ತಡೆಯಲಾರದೆ ಒಂದು ವೇಳೆ ಶೋಧಕನು ನಿಮ್ಮನ್ನು ಶೋಧಿಸಿದ್ದರಿಂದ ನಮ್ಮ ಪ್ರಯಾಸವು ವ್ಯರ್ಥವಾಯಿತೋ ಏನೋ ಎಂದು ನಿಮ್ಮ ನಂಬಿಕೆಯ ವಿಷಯದಲ್ಲಿ ತಿಳುಕೊಳ್ಳುವದಕ್ಕೆ ಅವನನ್ನು ಕಳುಹಿಸಿದೆನು.**

**ವಚನ 1. ಆದದರಿಂದ** ಎಂಬುದು ಪೌಲನು ಥೆಸಲೋನಿಕದವರನ್ನು ನೋಡಬೇಕು ಮತ್ತು ಅವರ ಬಗ್ಗೆ ತಿಳಿದುಕೊಳ್ಳಬೇಕು ಎಂಬ ತನ್ನ "ಅತ್ಯಾಶೆಯನ್ನು" ಸೂಚಿಸುತ್ತಿದ್ದಾನೆಂಬುದನ್ನು (2:17) ತೋರಿಸುತ್ತದೆ. **ಇನ್ನು ತಡೆಯಲಾರದೆ** [στέγω, *stegō*] **ನಾವು.** "στέγω ಎಂಬ ಕ್ರಿಯಾಪದವು 'ಮುಚ್ಚಿಟ್ಟುಕೊಳ್ಳು' ಎಂಬ ಅರ್ಥವನ್ನು ಮಾತ್ರವೇ ಕೊಡುವದಿಲ್ಲ; . . . ಅದು 'ಒಂದನ್ನು ತಡೆದುಕೊಳ್ಳಲು,' ಸಹಿಸಿಕೊಳ್ಳು ಎಂಬ ಅರ್ಥವನ್ನು ಸಹ ಕೊಡುತ್ತದೆ."[1] ಪೌಲನ "ಅತ್ಯಾಶೆ"ಯು ಎಷ್ಟೊಂದು ಅಧಿಕಗೊಂಡಿತೆಂದರೆ, ತಾನು ಅಥೇನೆಯಲ್ಲಿಯೇ ಉಳಿದುಕೊಂಡಿರುವ ವೇಳೆ ಅವರನ್ನು ಕುರಿತು ನೋಡಿಕೊಂಡು ಬರುವದಕ್ಕೂ ಅವರಿಂದ ತನಗೆ ಸುದ್ಧಿಯನ್ನು ತೆಗೆದುಕೊಂಡು ಬರುವದಕ್ಕೂ ತಿಮೊಥೆಯನನ್ನು ಕಳುಹಿಸಿ ಕೊಡುವದೇ **ಒಳ್ಳೇದೆಂದು ಯೋಚಿಸಿದನು.** ಈ ಸಹೋದರರು

ಕ್ರಿಸ್ತನಂಬಿಕೆಯಲ್ಲಿ ಎಳೆಯವರಾಗಿದ್ದರು, ಅವರ ಸ್ವದೇಶದವರ ಕೈಗಳಲ್ಲಿ ಬಾಧೆಯನ್ನನುಭವಿಸುತ್ತಿದ್ದರು (2:14), ಮತ್ತು ಅವರನ್ನು ಪ್ರೋತ್ಸಾಹಪಡಿಸುವದಕ್ಕೆ ಯಾರೊಬ್ಬರೂ ಅವರ ಬಳಿಗೆ ಹಿಂದಿರುಗಲಿಲ್ಲವಾದರೆ ಅವರು ಒತ್ತಡದಲ್ಲಿ ಸೋತು ಹೋಗಿ ಬಿಡಬಹುದೇನೋ ಎಂದು ಪೌಲನು ಹೆದರಿದ್ದನು.

ಈ ವಾಸ್ತವಾಂಶವು ಅಪೊಸ್ತಲರ ಕೃತ್ಯಗು ಪುಸ್ತಕದಲ್ಲಿ ಬರೆಯಲ್ಪಡದಂಥ ಪೌಲನ ಪ್ರಯಾಣಗಳ ಇತಿಹಾಸದಲ್ಲಿನ ಮತ್ತೊಂದು ವಿವರವನ್ನು ಕೊಡುವದಾಗಿರುತ್ತದೆ. ಸ್ಪಷ್ಟವಾಗಿ ತೋರುವ ಪ್ರಕಾರ, ಸೀಲ ಮತ್ತು ತಿಮೊಥೆಯರು ಅಥೇನೆಯದ ತನಕ ಅವನನ್ನು ಹಿಂಬಾಲಿಸಿದ ಬಳಿಕ (ಅಪೊಸ್ತಲರ ಕೃತ್ಯಗಳು 17:14, 15), ಅವರು ಆತನೊಂದಿಗೆ ಸ್ವಲ್ಪ ಕಾಲದ ವರೆಗೆ ಉಳಿದುಕೊಂಡರು. ನಂತರ, ಪೌಲನು ತಿಮೊಥೆಯನನ್ನು ಪುನಃ ಥೆಸಲೋನಿಕಕ್ಕೆ ಕಳುಹಿಸಿ ಕೊಟ್ಟನು (ವ. 2). ಪೌಲನು **ಅಥೇನೆಯಲ್ಲಿ ಒಬ್ಬೊಂಟಿಗರಾಗಿಯೇ** [καταλείπω, *kataleipō*, "ಹಿಂದಕ್ಕೆ ಬಿಡಲ್ಪಡು," ಅಥವಾ "ಕೈ ಬಿಡಲ್ಪಡು"][2] ಇದ್ದನಾದ್ದರಿಂದ ಬಹುಶಃ ಸೀಲನನ್ನು ಸಹ ಆ ಪ್ರಾಂತ್ಯಕ್ಕೆ (ಪ್ರಾಯಶಃ ಬೆರೋಯಕ್ಕೆ) ಹಿಂದಿರುಗಿ ಕಳುಹಿಸಲ್ಪಟ್ಟಿರಬೇಕು ಎಂಬದಾಗಿ ನಾವು ವಾದಿಸಬಹುದು. ಅಪೊಸ್ತಲನು ವಿಗ್ರಹಾರಾಧಕ ಜನಾಂಗದವರ ಪರಿಸರದಲ್ಲಿದ್ದನು ಮತ್ತು ಅಲ್ಲಿ ಕ್ರಿಸ್ತನ ಬ್ಗಗೆ ಕೇಳಿಸಿಕೊಳ್ಳುವವರನ್ನು ಕಂಡುಕೊಳ್ಳುವದು ಕಷ್ಟಕರವಾಗಿರುತ್ತಿತ್ತು. ಆದ್ದರಿಂದ ಆತನಿಗೆ ಅಲ್ಲಿ, ವಿಶೇಷವಾಗಿ ಇಂಥ ಪರಿಸ್ಥಿತಿಯಲ್ಲಿ ಸಹಾಯವನ್ನು ಪಡೆಯಲು ಇಷ್ಟಪಟ್ಟಿರುತ್ತಿದ್ದನು, ಆದರೆ ಆತನು ಅವರ ಹಿತಕ್ಕೋಸ್ಕರ ಬೆಲೆಯನ್ನು ತೆತ್ತುವದಕ್ಕೆ ಸಿದ್ಧನಿದ್ದನು. ಆತನು ಅಥೇನೆಯಲ್ಲಿ ಒಂದು ರೀತಿಯಾದ ನಕಾರಾತ್ಮಕ ಅನುಭವವನ್ನು ಹೊಂದಿದ ಬಳಿಕ, ಕೊರಿಂಥಕ್ಕೆ ಹೋದನು, ಅಲ್ಲಿ "ಮಕೆದೋನ್ಯದಿಂದ" (ಥೆಸಲೋನಿಕ ಮತ್ತು ಬೆರೋಯ ಪಟ್ಟಣಗಳಿದ್ದಂಥ ಸ್ಥಳ) ಜೊತೆಯಾಗಿ ಬಂದಿದ್ದ ಸೀಲ ಮತ್ತು ತಿಮೊಥೆಯರು ಆತನೊಂದಿಗೆ ಕೂಡಿಕೊಂಡರು (ಅಪೊಸ್ತಲರ ಕೃತ್ಯಗಳು 18:1-5).

**ವಚನ 2.** ಪೌಲನು **ತಿಮೊಥೆಯನನ್ನು ಸಹೋದರನು** ಎಂದು ಕರೆಯುತ್ತಾನೆ, ಪುನಃ ಇಲ್ಲಿ ಕುಟುಂಬದ ಭಾವವನ್ನು ಎತ್ತಿ ತೋರಿಸುತ್ತಾನೆ ಮತ್ತು ತಾನು ಆತನಿಗಿಂತ ಉನ್ನತದವೇನಾಗಿರಲಿಲ್ಲ ಎಂಬುದನ್ನು ತೋರ್ಪಡಿಸುತ್ತಾನೆ. ಆತನು **ದೇವರ ಸೇವಕನೂ ಆಗಿರುವ** ಎಂದು ಬಣ್ಣಿಸಲ್ಪಟ್ಟಿದ್ದಾನೆ. ಇದು ಒಂದು ಅತ್ಯಂಥ ಪ್ರಶಂಸನೀಯವಾದ ವರ್ಣನೆಯಾಗಿದೆ, ಅದು ತಿಮೊಥೆಯನು ಪೌಲನ ಅಥವಾ ಬೇರೆ ಯಾವದೇ ಮನುಷ್ಯನ ಸೇವಕನಾಗಿರಲಿಲ್ಲ; ಬದಲಾಗಿ ಆತನು ದೇವರ ಉದ್ಯೋಗದಲ್ಲಿ ದೇವರ ಸಂಗಡಿಗನಾಗಿದ್ದನು ಎಂಬುದನ್ನು ಒತ್ತಿ ಹೇಳುತ್ತದೆ. ಈ ವಚನದಲ್ಲಿ "ಉದ್ಯೋಗಿ" ಎಂಬುದು ಗ್ರೀಕ್ ನ συνεργός (*sunergos*) ಎಂಬ ಪದದಿಂದ ಬಂದಿರುತ್ತದೆ. ಹೇಗೂ, ಕೆಲವು ಹಸ್ತಪ್ರತಿಗಳಲ್ಲಿ διάκονος (*diakonos*)[3] ಎಂದಿರುತ್ತದೆ. *Diakonos* ಎಂಬುದು ರೋಮಾ 16:1ರಲ್ಲಿ "ಸಭಾಸೇವಕಳು" (RSV) ಎಂದು ಅನುವಾದಿಸಲ್ಪಟ್ಟಿರುವ ಅದೇ ಪದವಾಗಿರುತ್ತದೆ, ಮತ್ತು ಅದೇ ಪದವು 1 ತಿಮೊಥೆ 3:8ರಲ್ಲಿ ಬಳಸಲ್ಪಟ್ಟಿದೆ. ಹೇಗೂ, ಅದೊಂದು ಹುದ್ದೆ ಎಂದು ತೋರಿಸುವ ಯಾವದೇ ಅರ್ಹತೆಗಳು ಇರುವದಿಲ್ಲ, ಅದು ಕೆಲಸಗಾರ, ಅಥವಾ ಸೇವಕ ಎಂಬ ಸರಳ ಅರ್ಥವನ್ನಷ್ಟೆ ಹೊಂದಿದೆ. ತಿಮೊಥೆಯನು

**ಕ್ರಿಸ್ತನ ಸುವಾರ್ತೆಯಲ್ಲಿ** "ಉದ್ಯೋಗಿ" ಆಗಿದ್ದಾನೆ. ಸುವಾರ್ತಿಕನ ಕೆಲಸವು "ಸುವಾರ್ತೆಯ ಉದ್ಯೋಗದಲ್ಲಿ", ಕ್ರಿಸ್ತನು ಪಾಪಿಗಳನ್ನು ಕೊಂಡುಕೊಳ್ಳುವದಕ್ಕೆ ಮರಣಿಸಿದನು ಎಂಬ ಶುಭವಾರ್ತೆಯಲ್ಲಿ ಇರುತ್ತದೆ. ಪೌಲನು ತಿಮೊಥೆಯನನ್ನು ಅವಶ್ಯಕ್ಕಿಂತ ಉನ್ನತವಾಗಿ ಶ್ಲಾಘಿಸಿದನು, ಬಹುಶಃ ಅವರು ಪೌಲನ ಸ್ಥಳದಲ್ಲಿ ಈತನು ಬಂದಿದ್ದಾನಲ್ಲಾ ಎಂದು ಲಘುವಾಗಿ ತೆಗೆದುಕೊಳ್ಳಬಾರದೆಂಬ ಕಾರಣಕ್ಕಾಗಿ ಇರಬಹುದು.

ತಿಮೊಥೆಯನು ಥೆಸಲೋನಿಕದವರನ್ನು **ದೃಢಪಡಿಸುವದಕ್ಕೆ** ಕಳುಹಿಸಲ್ಪಟ್ಟಿದ್ದನು. "ದೃಢಪಡಿಸು" ಎಂಬುದು ಗ್ರೀಕ್‌ನ στηρίζω (*stērizō*) ಎಂಬ ಪದದಿಂದ ಬರುತ್ತದೆ, ಅದರ "ಅರ್ಥವು 'ನೆಲೆಗೊಳಿಸು,' 'ತ್ವರಿತಪಡಿಸು' ಎಂದಾಗಿದೆ . . . ಮತ್ತು ಪರಿವರ್ತನೆಗೊಂಡವರಿಗೆ ಏನು ಅಗತ್ಯವೆಂಬುದನ್ನು-ಅವರನ್ನು ನಂಬಿಕೆಯಲ್ಲಿ ಅಚಲವಾಗಿ ನೆಲೆಗೊಳಿಸುವಂತೆ ಮಾಡುವ ಬೆಂಬಲ-ನಿಖರವಾಗಿ ವ್ಯಕ್ತಪಡಿಸುತ್ತದೆ."[4] ಅಲ್ಲದೆ ತಿಮೊಥೆಯನು [ಅವರನ್ನು] **ನಂಬಿಕೆಯ ವೃದ್ಧಿಗಾಗಿ ಬೋಧಿಸುವದಕ್ಕೆ** (1:8; 3:5-7; 5:8 ರೊಂದಿಗೆ ಹೋಲಿಸಿರಿ), ಅವರನ್ನು ಉತ್ಸಾಹಗೊಳಿಸಲು ಅಥವಾ "ಧೈರ್ಯ ತಂದುಕೊಳ್ಳುವಂತೆ" ಮಾಡುವದಕ್ಕೆ ಸಹ ಕಳುಹಿಸಲ್ಪಟ್ಟನು.

**ವಚನ 3.** ಅವರನ್ನು ಪ್ರೋತ್ಸಾಹಿಸುವದಕ್ಕೂ, ಅವರು **ಚಂಚಲರಾಗದಂತೆ,** ಅಥವಾ ದೇವರ ಸಮೀಪದ ಸ್ಥಾನದಿಂದ ಕೀಳಲ್ಪಟ್ಟವರಾಗದಂತೆ ಮತ್ತು RSVಯು ಹೇಳುವಂತೆ **ಬಂದಿರುವ ಸಂಕಟಗಳಲ್ಲಿ** ವಿಚಲಿತರಾಗಿ ದೇವರಿಂದ ದೂರವಾದ ಸ್ಥಾನಕ್ಕೆ "ಹೋಗದಂತೆ" ಅವರನ್ನು ದೃಢಪಡಿಸುವದಕ್ಕೂ ತಿಮೊಥೆಯನು ಕಳುಹಿಸಲ್ಪಟ್ಟಿದ್ದನು. "ಬಂದಿರುವ ಸಂಕಟಗಳು" 2:14ರಲ್ಲಿ ಪ್ರಸ್ತಾಪಿಸಲ್ಪಟ್ಟಿರುವಂಥ "[ಅವರ] ಸ್ವದೇಶದವರಿಂದ" ಅನುಭವಿಸಿದ ಸಂಕಷ್ಟಗಳಾಗಿದ್ದವು. ತಮಗೆ ಸಂಕಟಗಳು ಬರುವವೆಂಬುದು ಅವರಿಗೆ ಮುಂಚೆಯೇ ತಿಳಿದಿತ್ತು, ಯಾಕೆಂದರೆ ತಾನು ಅವರಿಗೆ ಅವುಗಳನ್ನು ನಿರೀಕ್ಷಿಸಬೇಕೆಂದು ಮುಂದಾಗಿ ಹೇಳಿದ್ದನೆಂಬುದನ್ನು ನಂತರದ ವಚನದಲ್ಲಿ ಪೌಲನು ತಿಳಿಸುತ್ತಾನೆ. ಅಂಥ ಸಂಕಟಗಳು ಯಾವಾಗಲೂ ಶಾರೀರಿಕವಾದವುಗಳಾಗಿರುವದಿಲ್ಲ, ಆದರೆ ಎಲ್ಲರಂತೆಯೇ ನಡೆದುಕೊಳ್ಳಬೇಕೆಂಬ ಒತ್ತಡದಿಂದ ಸಹ ಕೆಲವು ಸಾರಿ ಉಂಟಾಗುತ್ತದೆ. ಇದೇ ಭಾವನೆಯನ್ನು 2 ತಿಮೊಥೆ 3:12ರಲ್ಲಿ ಕಾಣಬಹುದು (ಯೋಹಾನ 15:19; ಮತ್ತಾಯ 10:34 ರೊಂದಿಗೆ ಹೋಲಿಸಿರಿ).

**ವಚನ 4. ನಾವು ನಿಮ್ಮ ಬಳಿಯಲ್ಲಿದ್ದಾಗ . . . ಮುಂದಾಗಿ ಹೇಳಿದೆವಲ್ಲಾ** ಎಂಬುದು ಗ್ರೀಕ್‌ನ προελέγομεν (*proelegomen*) ಎಂಬ ಪದದಿಂದ ಬಂದದ್ದು, ಅದು προλέγω (*prolegō*) ಎಂಬುದರ ಅಪೂರ್ಣ ರೂಪವಾಗಿರುತ್ತದೆ. ಅಪೂರ್ಣ ಕ್ರಿಯಾಪದಗಳು ಪುನರಾವರ್ತಿತ ಕ್ರಿಯೆಯನ್ನು ಸೂಚಿಸಬಹುದು, ಅದು NASBಯಲ್ಲಿನ "ನಿಮಗೆ ಹೇಳುತ್ತಲೇ ಇದ್ದೆವು" ಎಂಬುದನ್ನು ದೃಢೀಕರಿಸುತ್ತದೆ. ಹಿಂಸೆಯು ಬರುವದೆಂಬದಾಗಿ ಆತನು ಅವರಿಗೆ ಸತತವಾಗಿ ಎಚ್ಚರಿಕೆ ಕೊಟ್ಟಿದ್ದನು. ಹೇಗೂ, ಒಬ್ಬ ವ್ಯಕ್ತಿಯು ಏನನ್ನು ವೈಯಕ್ತಿಕವಾಗಿ ಅನುಭವಿಸಿರುವದಿಲ್ಲವೋ ಅದು ಆತನಿಗೆ "ದಿಢೀರನೇ ಎದುರ್ಗೊಳ್ಳಬಹುದು" ಮತ್ತು ಆತನಿಗೆ ಮುಂಚೆಯೇ ಎಚ್ಚರಿಸಲ್ಪಟ್ಟಿದ್ದರೂ ಆತನಿಗೆ ಅದು ನಿರಾಶೆಯನ್ನುಂಟು ಮಾಡಬಲ್ಲದು. ಈ ವಿಷಯವಾಗಿಯೇ ಪೌಲನು ಹೆದರಿದ್ದನು.

**ವಚನ 5.** ಆತನ ಕಳವಳವು ಬಹಳವಾಗಿ ಹೆಚ್ಚುತ್ತಾ ಹೋದ ಹಾಗೆ ಆತನು **ಇನ್ನು ತಡೆಯಲಾರದೆ** ಹೋದನು, ಅವರು ಹೇಗಿರುವರೆಂಬುದನ್ನು ನೋಡಿಕೊಂಡು ಬರುವಂತೆ ಆತನು ತಿಮೊಥೆಯನನ್ನು ಕಳುಹಿಸಿದನು. **ಶೋಧಕನು** (ಸೈತಾನನು, ಮತ್ತಾಯ 4:3-5) ಅವರನ್ನು ವಂಚಿಸಿರಬಹುದೇನೋ ಮತ್ತು ಅವರನ್ನು ಬೀಳುವಂತೆ ಮಾಡುವ ಮೂಲಕ ಪೌಲನ ಪ್ರಯಾಸವನ್ನೆಲ್ಲಾ **ವ್ಯರ್ಥಗೊಳಿಸಿದನೇನೋ** ಎಂಬದಾಗಿ ಆತನು ಹೆದರಿದ್ದನು, ಹಾಗಾಗಿದ್ದಲ್ಲಿ ಥೆಸಲೋನಿಕದವರ ಆತ್ಮಗಳು ನಶಿಸಿ ಹೋಗುತ್ತಿದ್ದವು. (κενός [*kenos*], "ವ್ಯರ್ಥ" ವಿಷಯದಲ್ಲಿ 2:1ರ ಮೇಲಿನ ಚರ್ಚೆಯನ್ನು ನೋಡಿರಿ.)

ಅವರ ಬಗ್ಗೆ ತಾನು ಬಹಳವಾಗಿ ಮತ್ತು ವೈಯಕ್ತಿಕವಾಗಿ ಅವರ ವಿಷಯದಲ್ಲಿ ಕಳವಳಗೊಂಡಿದ್ದನು, ಮತ್ತು ಪೌಲನ ಮೇಲೆ ಆರೋಪಗಳನ್ನು ಮಾಡಿದ್ದವರು ಏನೇ ಹೇಳಿರಬಹುದಾದಾಗ್ಯೂ. ತಿಮೊಥೆಯನನ್ನು ಕಳುಹಿಸಿ ಕೊಡುವ ಯೋಚನೆಯು ಆತನದ್ದೇ ಆಗಿತ್ತೆಂಬುದನ್ನು ಒತ್ತಿ ಹೇಳುವದಕ್ಕೆ ಪೌಲನು ಇಲ್ಲಿ ಉತ್ತಮ ಪುರುಷ "ನಾನು" ಎಂಬ ಏಕವಚನವನ್ನು ಬಳಸುತ್ತಾನೆ. ಆತನು ಅವರನ್ನು ಮಧ್ಯದಲ್ಲಿಯೇ ಕೈ ಬಿಟ್ಟಿರ*ಲಿಲ್ಲ.*

## ತಿಮೊಥೆಯನಿಂದ ತರಲ್ಪಟ್ಟ ಸುದ್ದಿಯಿಂದ ಸಂತೋಷ (3:6-10)

**6ಆದರೆ ತಿಮೊಥೆಯನು ಈಗಲೇ ನಮ್ಮ ಬಳಿಗೆ ಬಂದು ನಿಮ್ಮ ವಿಶ್ವಾಸ ಪ್ರೀತಿಗಳ ವಿಷಯವಾಗಿ ಶುಭವರ್ತಮಾನವನ್ನು ಹೇಳಿ ನೀವು ನಮ್ಮನ್ನು ಯಾವಾಗಲೂ ಚೆನ್ನಾಗಿ ಜ್ಞಾಪಕಮಾಡಿಕೊಂಡು ನಾವು ನಿಮ್ಮನ್ನು ಹೇಗೋ ಹಾಗೆಯೇ ನೀವೂ ನಮ್ಮನ್ನು ನೋಡುವದಕ್ಕೆ ಅಪೇಕ್ಷಿಸುತ್ತೀರೆಂಬದನ್ನು ತಿಳಿಸಿದ್ದಾನೆ. 7ಸಹೋದರರೇ, ಇದನ್ನು ಕೇಳಿ ನಮ್ಮ ಎಲ್ಲಾ ಕೊರತೆಯಲ್ಲಿಯೂ ಸಂಕಟದಲ್ಲಿಯೂ ನಿಮ್ಮ ನಂಬಿಕೆಯ ಮೂಲಕ ನಮಗೆ ಆದರಣೆಯಾಯಿತು. 8ನೀವು ಕರ್ತನಲ್ಲಿ ದೃಢವಾಗಿ ನಿಂತಿದ್ದರೆ ನಮಗೆ ಜೀವಕಳೆ. 9ನಿಮ್ಮ ನಿಮಿತ್ತ ನಮ್ಮ ದೇವರ ಮುಂದೆ ನಮಗಿರುವ ಎಲ್ಲಾ ಸಂತೋಷಕ್ಕಾಗಿ ದೇವರಿಗೆ ತಕ್ಕಷ್ಟು ಸ್ತೋತ್ರಮಾಡುವದು ನಮ್ಮಿಂದ ಹೇಗಾದೀತು? 10ನಿಮ್ಮ ಮುಖವನ್ನು ನೋಡುವದಕ್ಕೂ ನಿಮ್ಮ ನಂಬಿಕೆಯ ಕೊರತೆಗಳನ್ನು ನೀಗುವದಕ್ಕೂ ನಮಗೆ ಅನುಕೂಲವಾಗಬೇಕೆಂದು ನಾವು ಹಗಲಿರುಳು ದೇವರನ್ನು ಅತ್ಯಂತವಾಗಿ ಬೇಡುವವರಾಗಿದ್ದೇವೆ.**

**ವಚನ 6.** ಪೌಲನು ಈ ಪತ್ರಿಕೆಯನ್ನು ಬರೆಯುವ ವೇಳೆ, ತಿಮೊಥೆಯನು "ಆಗಷ್ಟೆ" (NIV) ಥೆಸಲೋನಿಕದಿಂದ ಪ್ರಯಾಣಿಸಿ ಕೊರಿಂಥವನ್ನು ತಲುಪಿದ್ದನು, ತಿಮೊಥೆಯನು ಥೆಸಲೋನಿಕಕ್ಕೆ ಹೊರಟು ಹೋದ ಬಳಿಕ ಪೌಲನು ಅಥೇನೆಯಿಂದ ಇಲ್ಲಿಗೆ ಬಂದು ಇದ್ದನು (ಅಪೊಸ್ತಲರ ಕೃತ್ಯಗಳು 18:5). ತಿಮೊಥೆಯನು ಥೆಸಲೋನಿಕದವರ ವಿಷಯವಾಗಿ **ಶುಭವರ್ತಮಾನವನ್ನು** [ತನಗೆ] . . . **ತಿಳಿಸಿದ್ದಾನೆ** ಎಂಬದಾಗಿ ಪೌಲನು ಹೇಳುತ್ತಾನೆ. "ಶುಭವರ್ತಮಾನವನ್ನು . . . ತಿಳಿಸಿದ್ದಾನೆ" ಎಂಬುದು ಗ್ರೀಕ್‌ನ εὐαγγελίζω (*euangelizō*) ಎಂಬ ಪದದಿಂದ ಬಂದಿದ್ದು, ಅದು "ಶುಭವರ್ತಮಾನವನ್ನು ತಿಳಿಸು [ಅಥವಾ] ಸಾರು"[5] ಎಂದರ್ಥವನ್ನು ಹೊಂದಿದೆ. ಈ ಉಲ್ಲೇಖನವು ಒಬ್ಬೊಬ್ಬರೊಂದಿಗೆ

"ಶುಭವರ್ತಮಾನವನ್ನು" ಸಾರುವದನ್ನು ಈ ಪದವು ಸೂಚಿಸುತ್ತದೆಂಬುದಕ್ಕೆ ಒಂದು ಸ್ಪಷ್ಟವಾದ ನಿದರ್ಶನವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 8:4 ರೊಂದಿಗೆ ಹೋಲಿಸಿರಿ).

ಅದು ಅವರ **ವಿಶ್ವಾಸ ಪ್ರೀತಿಗಳ** ಅಥವಾ "ಧರ್ಮಕಾರ್ಯ"ದ (KJV) ವಿಷಯವಾದ ಶುಭವರ್ತಮಾನವಾಗಿತ್ತು. ಅವರ "ವಿಶ್ವಾಸ"ವೆಂಬುದು ದೇವರಲ್ಲಿ ಅವರಿಟ್ಟಿದ್ದ ಭರವಸವನ್ನು ಸೂಚಿಸುತ್ತದೆ, ಅದು "ಕೆಲಸ"ವನ್ನು ಉಂಟು ಮಾಡುತ್ತದೆ, ಮತ್ತು ಅವರ "ಪ್ರೀತಿ"ಯು "ಪ್ರಯಾಸ"ದಲ್ಲಿ ಫಲಿತವಾದಂಥ ವಿಧದ ಪ್ರೀತಿಯಾಗಿತ್ತು (1:3). ವಾಸ್ತವಾಂಶದಲ್ಲಿ, ನಿಜವಾದ ಪ್ರೀತಿಯು ಯಾವಾಗಲೂ ಒಂದಿಲ್ಲಾ ಒಂದು ರೀತಿಯ ಕ್ರಿಯೆಗೆ ನಡಿಸುತ್ತದೆ (1 ಯೋಹಾನ 4:10ರೊಂದಿಗೆ ಹೋಲಿಸಿರಿ). ಅಲ್ಲದೆ ತಿಮೊಥೆಯನಿಂದ ತರಲ್ಪಟ್ಟ ಶುಭವರ್ತಮಾನದಲ್ಲಿ ಥೆಸಲೋನಿಕದವರು ಪೌಲನ ಬಗ್ಗೆ **ಚೆನ್ನಾಗಿ ಜ್ಞಾಪಕಮಾಡಿಕೊಂಡ**ವರಾಗಿ ಇದ್ದರು ಎಂಬುದು ಸಹ ಸೇರಿತ್ತು. ಅಂದರೆ, ಪೌಲನು ಅವರನ್ನು "ಮೋಸಗೊಳಿಸುವ" (2:3; NIV) ಉದ್ದೇಶ ಹೊಂದಿದ್ದ ಸುಳ್ಳು ಬೋಧಕನಾಗಿದ್ದನೆಂಬದಾಗಿ ಪೌಲನ ಸಂದೇಹವಾದಿಗಳು ಥೆಸಲೋನಿಕದವರಿಗೆ ಮನವರಿಕೆ ಮಾಡುವದಕ್ಕೆ ಅಶಕ್ತರಾಗಿದ್ದರು ಎಂಬದೆ. ಅವರು ಈಗಲೂ ಅವರನ್ನು **ನೋಡುವದಕ್ಕೆ ಅಪೇಕ್ಷಿಸುತ್ತಿದ್ದರು** (2:17). ಬಹುಶಃ ಅವರು ತನ್ನ ಬಗ್ಗೆ ಏನಂದುಕೊಳ್ಳುತ್ತಾರೆಂಬ ಬಗ್ಗೆ ಮಾತ್ರವೇ ಪೌಲನು ಚಿಂತಿತನಾಗಿರಲಿಲ್ಲ. ಒಂದು ವೇಳೆ ಆತನ ಸಂದೇಹವಾದಿಗಳು ಆತನ ಬಗ್ಗೆ ಮಾಡಿದ ಕಠೋರವಾದ ಮೌಲ್ಯಮಾಪನವನ್ನು ಥೆಸಲೋನಿಕದವರೇನಾದರೂ ಅಂಗೀಕರಿಸಿದ್ದಾದಲ್ಲಿ, ಅವರು ಮನೋಭಾವ ಅಥವಾ ಸಿದ್ಧಾಂತ, ಅಥವಾ ಎರಡರ ವಿಷಯದಲ್ಲಿಯೂ ದಾರಿ ತಪ್ಪಿಸಲ್ಪಟ್ಟಿರುತ್ತಿದ್ದರು, ತಮ್ಮ ನಾಶನವನ್ನು ತಾವೇ ತಂದುಕೊಳ್ಳಬಹುದಾದ ಸಾಧ್ಯತೆಯು ಅತ್ಯಧಿಕವಾಗಿರುತ್ತದಲ್ಲಾ ಎಂಬ ಯೋಚನೆಯನ್ನು ಆತನು ಮಾಡುವವನಾಗಿದ್ದನು.

**ವಚನ 7.** ಪೌಲನು ತಿಮೊಥೆಯನ ತಿರಿಗಿ ಬರೋಣಕ್ಕಾಗಿ, ಮೊದಲು ಅಥೇನೆಯಲ್ಲಿ ಮತ್ತು ನಂತರ ಕೊರಿಂಥದಲ್ಲಿ ಕಾಯ್ದುಕೊಂಡಿರುವ ವೇಳೆ, ಆತನು **ಕೊರತೆಯನ್ನೂ** (ವೇದನೆಯನ್ನೂ) **ಸಂಕಟವನ್ನೂ** ಅನುಭವಿಸುತ್ತಿದ್ದನು. ಅಥೇನೆಯಲ್ಲಿ, ಅದು ನಿಸ್ಸಂಶಯವಾಗಿ ಪಟ್ಟಣದಲ್ಲಿದ್ದ ವ್ಯಾಪಕವಾಗಿದ್ದ ವಿಗ್ರಹಾರಾಧನೆಯ ಕುರಿತಾಗಿತ್ತು (ಅಪೊಸ್ತಲರ ಕೃತ್ಯಗಳು 17:16-18). ಕೊರಿಂಥದಲ್ಲಿ, ಅಲ್ಲಿ ವಾಸಿಸುತ್ತಿದ್ದ ಹಠಮಾರಿತನವುಳ್ಳ ಯೆಹೂದ್ಯರು ಆತನಿಗೆ "ವೇದನೆ" ಉಂಟಾಗುವಂತೆ ಮಾಡಿರಬೇಕು (ಅಪೊಸ್ತಲರ ಕೃತ್ಯಗಳು 18:5, 6). ಥೆಸಲೋನಿಕದವರ ನಂಬಿಗಸ್ತಿಕೆಯ ಕುರಿತಾಗಿ ತಿಮೊಥೆಯನ ಮೂಲಕ ಆಲಿಸಿದ ಬಳಿಕ, ಪೌಲನಿಗೆ ಅವರ **ನಂಬಿಕೆ**ಯ ನಿಮಿತ್ತವಾಗಿ, ಅಂದರೆ, ಒತ್ತಡ ಹಾಗೂ ಹಿಂಸೆಗಳ ಹೊರತಾಗಿಯೂ ದೇವರಲ್ಲಿ ಮತ್ತು ಆತನ ಮಾರ್ಗದಲ್ಲಿ ತಮ್ಮ ವಿಶ್ವಾಸವನ್ನು ಮುಂದುವರೆಸಿದ್ದನ್ನು ಕೇಳಿ **ಆದರಣೆಯಾಯಿತು**, ಅಥವಾ "ಧೈರ್ಯಗೊಂಡನು" (NIV).

"ಆದರಣೆಯಾಯಿತು" ಎಂಬುದು 2ನೇ ವಚನದಲ್ಲಿರುವ "ದೃಢಪಡಿಸುವದಕ್ಕೂ" ಎಂಬ ಪದದಂತೆಯೇ ಒಂದೇ ಗ್ರೀಕ್ ಪದದಿಂದ ಬಂದದ್ದಾಗಿದೆ, ಆ ಪದವು ಯಾವದೆಂದರೆ παρακαλέω (*parakaleō*) ಎಂಬುದು, ಅದರರ್ಥವು "ಪ್ರಬೋಧಿಸುವ ಮೂಲಕ ಸಹಾಯ

ಮತ್ತು ಅದರಿಂದ ಪ್ರೋತ್ಸಾಹಗೊಳ್ಳುವದು"[6] ಎಂದಾಗಿರುತ್ತದೆ. Georg Braumann ಹೇಳುವದೇನೆಂದರೆ "*parakaleō* ಎಂಬುದು ಹೊಸ ಒಡಂಬಡಿಕೆಯಲ್ಲಿ 109 ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಅದರರ್ಥವು ಏನೆಂದರೆ: (a) ಕರೆ ಮಾಡು, ಆಮಂತ್ರಿಸು, ಕೇಳು, ವಿನಂತಿಸು; (b) ಪ್ರಬೋಧಿಸು; (c) ಆದರಣೆ ಮಾಡು, ಪ್ರೋತ್ಸಾಹಿಸು. ನಾಮಪದವಾದ [παράκλησις] *paraklēsis* ಎಂಬುದರ ಅರ್ಥವು, ಪ್ರಬೋಧನೆ, ಪ್ರೋತ್ಸಾಹಿಸುವಿಕೆ, ಮನವಿ, ವಿನಂತಿಸು, ಆದರಣೆ ಮಾಡು, ಸಂತೈಸು."[7] ಅಕ್ಷರಶಃ, ಆತನಿಗೆ "ನಿಮ್ಮ ಕುರಿತಾಗಿ" ಅಲ್ಲ (NASB) ಆದರೆ "ನಿಮ್ಮ ಮೇಲೆ" (ἐφ᾽ ὑμῖν, *eph humin*) ಆದರಣೆಯಾಯಿತು ಎಂದು ಗ್ರೀಕ್ ವಾಕ್ಯವು ಹೇಳುತ್ತದೆ. "'ಮೇಲೆ' ಎಂಬುದು ಅಂತಹ ಸಂಬಂಧದೊಳಗೆ ಒಂದು ಅಸಹಜವಾದ ಉಪಸರ್ಗವಾಗುತ್ತದೆ, ಮತ್ತು ಅದರ ಮಹತ್ವಪೂರ್ಣತೆಯೇನೆಂದರೆ ಪೌಲನ ಹೊಸ ಬಲವು ಥೆಸಲೋನಿಕದವರ 'ಮೇಲೆ' ಭದ್ರವಾಗಿ ನೆಲೆಗೊಂಡಿತ್ತು ಎಂದಾಗುತ್ತದೆ. . . . [ಮತ್ತು] ಪೌಲನಿಗೆ ಕೊಡಲ್ಪಟ್ಟ ಹೊಸ ಬಲವು ತಾನಿದ್ದ ತೊಂದರೆಗಳನ್ನು ಮೀರಿ ಎದ್ದು ನಿಲ್ಲುವಂತೆ ಆತನನ್ನು ಶಕ್ತಗೊಳಿಸಿತು ಎಂಬ ಭಾವನೆಯು ಉಂಟಾಗುವಂತೆ ಅದು ಮಾಡುತ್ತದೆ."[8]

**ವಚನ 8. ಕರ್ತನಲ್ಲಿ ದೃಢವಾಗಿ ನಿಂತಿದ್ದರೆ** ಎಂಬುದು στήκω (*stēkō*) ಎಂಬ ಪದದಿಂದ ಬಂದಿದ್ದು, ಅದರರ್ಥವು ನಿಮ್ಮನ್ನು "ಭಂಗಕ್ಕೊಳಪಡುವಂತೆ" (3:3) ಮಾಡಿಕೊಳ್ಳಲು ನಿರಾಕರಿಸುವವರಾಗುವದು ಎಂದಾಗಿರುತ್ತದೆ. ಸಕಾರಾತ್ಮಕವಾಗಿ ಹೇಳುವದಾದರೆ, ಅದರರ್ಥವು "ಸ್ಥೈರಣೆಯನ್ನು" ತೋರುವದು ಎಂದಾಗಿರುತ್ತದೆ (1:3; NIV), ಹೀಗೆ "ಕೆಲಸ" ಮತ್ತು "ಪ್ರಯಾಸ"ದ ಲಕ್ಷಣಗಳನ್ನು ಹೊಂದಿರುವದು (1:2, 3). ಅದರರ್ಥವು ಸಂಕೋಚ ಮತ್ತು ಸಂದಿಗ್ಧತೆಯನ್ನು ತೋರಿಸುವದರ ಬದಲಾಗಿ "ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸಕ್ತಿಯಿಂದ ಮಾಡುವದು" ಎಂದಾಗಿರುತ್ತದೆ (1 ಕೊರಿಂಥ 15:58). *Stēkō* ಎಂಬುದು "[ἵστημι] *histēmi* ಎಂಬ ಪರಿಪೂರ್ಣತೆಯಿಂದ ಬೆಳವಣಿಗೊಂಡ ನಂತರದ ರೂಪವಾಗಿರುತ್ತದೆ, 'ದೃಢವಾಗಿ ನಿಂತಿರುವದನ್ನು' ಎಂಬ ಯೋಚನೆಯನ್ನು *histēmi* ಗಿಂತಲೂ ಉತ್ತಮವಾಗಿ ವ್ಯಕ್ತಪಡಿಸುವಾಗಿರುತ್ತದೆ, . . ."[9]

ಅವರು ಅಂಥ ವಿಧದಲ್ಲಿ ನಡೆದುಕೊಳ್ಳುತ್ತಿದ್ದಾರೆಂಬುದನ್ನು ಕೇಳಿದ ಪೌಲನು **ಜೀವಕಳೆ** ಹೊಂದುವಂತೆ ಕಾರಣವಾಯಿತು, ಅಂದರೆ, ಸುಮ್ಮನೆ ಆಯಾಸದಿಂದ ಹೆಜ್ಜೆ ಹಾಕುವಂತೆ ಅಲ್ಲ, ಆದರೆ ಆತನು ಸಂಭ್ರಮಿಸುವಂತೆ ಮತ್ತು ಸಂತೋಷಪಟ್ಟುಕೊಳ್ಳುವಂತೆ ಮಾಡಿತ್ತು. ಇದು ಪೌಲನ ಆತ್ಮೀಕತೆಯ ಬಗ್ಗೆ ಬಹಳಷ್ಟನ್ನು ನಮಗೆ ತಿಳಿಸುತ್ತದೆ. ಜನರು ಆತ್ಮೀಕವಾಗಿ ಪ್ರಗತಿ ಸಾಧಿಸುವದನ್ನು ನೋಡುವದರಿಂದಲೇ ಆತನಿಗೆ ನಿಜವಾದ ಸಂತೋಷ ಸಿಕ್ಕುತ್ತಿತ್ತು, ಅಂದರೆ ಆತನು ತನ್ನ "ಮನಸ್ಸನ್ನು ಮೇಲಿನವುಗಳ ಮೇಲೆ ಇಟ್ಟಿದ್ದನು" (ಕೊಲೊಸ್ಸೆ 3:1-4). ನಾವು ಪೌಲನ ರೀತಿಯಲ್ಲಿದ್ದೇವೋ? ಸಹೋದರರು ನಂಬಿಗಸ್ತರಾಗಿ ಉಳಿಯುವದನ್ನು ಮತ್ತು ಆತ್ಮೀಕವಾಗಿ ಬೆಳೆಯುವದನ್ನು ನೋಡಿ ನಾವು ನಮ್ಮ ಅತ್ಯಂಥ ದೊಡ್ಡ ಸಂತೋಷವನ್ನು ಪಡೆಯುತ್ತೇವೋ? ನಾವು ಯಾವಾಗ ಅತ್ಯಂಥ ಹೆಚ್ಚು ಪ್ರೋತ್ಸಾಹಗೊಳ್ಳುತ್ತೇವೆ? ಅದು ಸಭೆಯು ಮುನ್ನಡೆಯನ್ನು ಸಾಧಿಸುವಾಗಲೋ ಅಥವಾ ನಮ್ಮ ನೆಚ್ಚಿನ ಕ್ರೀಡಾ ತಂಡವು ಜಯವನ್ನು ಸಾಧಿಸುವಾಗಲೋ?

**ವಚನ 9.** ಪೌಲನು ಸತತವಾಗಿಯೂ ನಿಯತಕ್ರಮವಾಗಿಯೂ ಪ್ರಾರ್ಥಿಸುತ್ತಿದ್ದ ನೆಂಬುದರ ಬಗ್ಗೆ ನಾವು ಈಗಾಗಲೇ ನೋಡಿದ್ದೇವೆ, ಮತ್ತು ಈ ಪ್ರಾರ್ಥನೆಗಳಲ್ಲಿ ನಿರ್ದಿಷ್ಟವಾಗಿ ಥೆಸಲೋನಿಕದವರಿಗೋಸ್ಕರ ದೇವರಿಗೆ ಕೃತಜ್ಞತಾಸ್ತುತಿ ಸಲ್ಲಿಸುವದು ಸೇರಿರುತ್ತಿತ್ತು (1:2, 3ರ ಮೇಲಿನ ಚರ್ಚೆಯನ್ನು ನೋಡಿರಿ). ಇಲ್ಲಿ ಆತನು ಥೆಸಲೋನಿಕದವರನ್ನು ಆತ್ಮೀಕವಾಗಿ ಪೋಷಣೆ ಮಾಡಿದವನು, ಮತ್ತು ತನಗೆ ಪರೋಕ್ಷವಾಗಿ **ಎಲ್ಲಾ ಸಂತೋಷವನ್ನು** ಕೊಟ್ಟಾತನು ದೇವರೇ ಆತನು ಗ್ರಹಿಸಿಕೊಂಡನು, ಮತ್ತು **ದೇವರಿಗೆ . . . ಸ್ತೋತ್ರ ಮಾಡಿದನು**. ಹೇಗೂ, ಆತನ ಸಂತೋಷವು ಅತ್ಯಂಥ ಅಧಿಕವಾಗಿದ್ದು ಅದಕ್ಕೆ ತಕ್ಕಷ್ಟು ಸ್ತೋತ್ರವನ್ನು ತಾನು ದೇವರಿಗೆ ಮಾಡುವದಕ್ಕೆ ಆಗಲಿಲ್ಲ ಎಂಬದಾಗಿ ಭಾವಿಸಿಕೊಂಡನು. "ಗ್ರೀಕ್ ನಲ್ಲಿ ಅಕ್ಷರಶಃ ಹೀಗಿರುತ್ತದೆ, 'ಪ್ರತಿಯಾಗಿ ದೇವರಿಗೆ ನಾವು ಎಂಥ ಕೃತಜ್ಞತಾಸ್ತುತಿಯನ್ನು ಸಲ್ಲಿಸುವದಕ್ಕಾದೀತು?' ಅಲ್ಲಿ ಕ್ರಿಯಾಪದವು [ἀνταποδίδωμι] *antapodidōmi*, ಅನಿಶ್ಚಿತ ಭೂತಕಾಲ ಧಾತ್ವರ್ಥವಾಚಿಯಲ್ಲಿದ್ದು (cf. 2 ಥೆಸಲೋನಿಕ 1:6), 'ಕೊಡತಕ್ಕದ್ದನ್ನು ಹಿಂದಕ್ಕೆ ಕೊಡುವದು' ಎಂಬ ಅರ್ಥವನ್ನು ಹೊಂದಿದೆ."[10]

ಖಂಡಿತವಾಗಿಯೂ, ಆ ಎಲ್ಲಾ ಕೃತಜ್ಞತಾಸ್ತುತಿಗಳು ಅವರ **ನಿಮಿತ್ತ** ಎಂಬದನ್ನು ಥೆಸಲೋನಿಕದವರು ಪೌಲನ ಮಾತುಗಳಿಂದ ಓದಿದಾಗ ಅವರಿಗೆ ಒಂದು ಆದರದ ಭಾವವು ಉಂಟಾಗಿರಬಹುದಾಗಿದೆ (ವಚನಗಳು 6-10ರಲ್ಲಿ "ನೀವು" ಮತ್ತು "ನಿಮ್ಮ" ಎಂಬುದರ ಮೇಲೆ ಒತ್ತು ಕೊಡಲಾಗಿದೆ ಎಂಬುದನ್ನು ನೋಡಿರಿ). ಈ ಸಂತೋಷವು **ನಮ್ಮ ದೇವರ ಮುಂದೆ** ಅಥವಾ "ನಮ್ಮ ದೇವರ ಸನ್ನಿಧಿಯಲ್ಲಿ" (NIV) ಆಗಿತ್ತು ಎಂಬುದು ಸಹ ಗಮನಾರ್ಹವಾಗಿರುತ್ತದೆ. ಸ್ಪಷ್ಟವಾಗಿರುವ ಪ್ರಕಾರ, ತಾನು ಮತ್ತು ತನ್ನ ಸಂಗಡಿಗರು ಸಂತೋಷ ಪಟ್ಟದ್ದು ಸ್ವಾರ್ಥ ಕಾರಣಕ್ಕಾಗಿ ಅಲ್ಲ ಎಂಬುದು ಪೌಲನ ತಾತ್ಪರ್ಯವಾಗಿತ್ತು. ಬದಲಾಗಿ ಅದು ಅವರು "ದೇವರ ಮುಂದೆ" ಇದ್ದುಕೊಂಡವರಾಗಿ ತಮ್ಮನ್ನು ಸೂಕ್ಷ್ಮವಾಘಿ ಪರಿಶೀಲಿಸುವಂತೆ ಅನುಮತಿಸುವದಕ್ಕೆ ಸಂತೋಷವುಳ್ಳವರಾಗಿರುವ ಒಂದು ವಿಧವಾಗಿತ್ತು, ಯಾಕೆಂದರೆ ಅವರ ನಿಜವಾದ ಆಸಕ್ತಿಯ ತಮಗೆ ಮಾನವನ್ನು ತಂದುಕೊಳ್ಳುವದಾಗಿರಲಿಲ್ಲ ಆದರೆ ಥೆಸಲೋನಿಕದವರ ಆತ್ಮಗಳ ರಕ್ಷಣೆಯೇ ಆಗಿತ್ತು.

**ವಚನ 10.** ಪೌಲ ಮತ್ತು ಆತನ ಸಂಗಡಿಗರು **ಹಗಲಿರುಳು** ಪ್ರಾರ್ಥಿಸಿದರೆಂಬುದು ಪ್ರಾರ್ಥನೆಯ ಕುರಿತು ಅವರಿಗಿದ್ದ ಭಾವನೆಯ ಬಗ್ಗೆ ತಿಳಿಸುವದಾಗಿದೆ. ಅವರು ಅದರ ಪರಿಣಾಮಕಾರಿತ್ವದ ಬಗ್ಗೆ ನಿಸ್ಸಂಶಯವಾಗಿ ನಂಬಿದ್ದರು (ಯಾಕೋಬ 5:16ಕ್ಕೆ ಹೋಲಿಸಿರಿ). ಅವರು ಪ್ರಾರ್ಥಿಸುವ ವೇಳೆ, ಪೌಲನು ಮಾಡಿಕೊಂಡ ವಿಜ್ಞಾಪನೆಯು **ನಿಮ್ಮ ಮುಖವನ್ನು ನೋಡುವದಕ್ಕೆ** ಅಥವಾ ಅವರನ್ನು ಖುದ್ದಾಗಿ ಭೇಟಿ ಮಾಡಬೇಕು ಎಂಬದಾಗಿತ್ತು. ಆತನು ತಿಮೊಥೆಯನನ್ನು ಅವರ ಬಳಿಗೆ ಕಳುಹಿಸಿದ್ದನೆಂಬ ವಾಸ್ತವಾಂಶವು ಆತನಿಗೆ ಸಂತೃಪ್ತಿಯನ್ನು ತಂದಿರಲಿಲ್ಲ. ಆತನು ಈಗಲೂ **ಕೊರತೆಗಳನ್ನು ನೀಗುವದಕ್ಕೆ** [ಕ್ರಮ ಪಡಿಸುವದಕ್ಕೆ] ಅವರನ್ನು ಖುದ್ದಾಗಿ ಭೇಟಿ ಮಾಡಬೇಕೆಂದು ಇಚ್ಛೆಸುತ್ತಿದ್ದನು. ಅವರ ಕಲಿಕೆಯಲ್ಲಿ ಅಂತರಗಳಿದ್ದವು. "ನೀಗಿಸು" ಎಂಬದು καταρτίζω (*katartizō*) ಎಂಬ ಪದದಿಂದ ಬಂದಿದ್ದು, ಅದು ಬಲೆಗಳನ್ನು "ಸರಿಮಾಡುವದು" (ಮತ್ತಾಯ 4:21) ಅಥವಾ

ಮನುಷ್ಯರನ್ನು ಸರಿಮಾಡುವದು (ಗಲಾತ್ಯ 6:1) ಎಂದರ್ಥವನ್ನು ಕೊಡುತ್ತದೆ. *Katartizō* ಕುರಿತಾಗಿ A. T. Robertson ನೀಡುವ ವಿವರಣೆಯನ್ನು ನೋಡಿರಿ.[11]

ಥೆಸಲೋನಿಕದವರ ಕುರಿತಾಗಿ ತಿಮೊಥೆಯನು ನೀಡಿದ ವರದಿಯು ಒಟ್ಟಾರೆಯಾಗಿ ಒಳ್ಳೇದಾಗಿತ್ತು, ಆದರೆ ಅವರು "ಇನ್ನೂ ಹೆಚ್ಚಾಗಿ" ಪ್ರಗತಿಯನ್ನು ಸಾಧಿಸುವಂತಾಗಲು ಅವರಿಗೆ ಇನ್ನಷ್ಟು ಬೋಧನೆ ಮತ್ತು ಪರಿಪಕ್ವಗೊಳ್ಳುವಿಕೆ ಅಗತ್ಯವಿತ್ತು (4:1, 10). ಪೌಲನು ಅವರಿಗೆ ಕೊಡಬೇಕೆಂದು ಬಯಸಿದ ಈ ಹೆಚ್ಚಿನ ಬೋಧನೆಯು ಅವರ **ನಂಬಿಕೆ** ಕೊರತೆಗಳನ್ನು ನೀಗಿಸಿಕೊಳ್ಳುವಂತೆ ಸಹಾಯ ಮಾಡುವ ಉದ್ದೇಶಕ್ಕಾಗಿ ಆಗಿತ್ತು. ಈ ಸನ್ನಿವೇಶದಲ್ಲಿ, "ನಂಬಿಕೆ" ಎಂಬುದು ಬಹುಶಃ ಥೆಸಲೋನಿಕದವರು ನಂಬುತ್ತಿದ್ದ ಸಿದ್ಧಾಂತಗಳ ಮುಖ್ಯಭಾಗವನ್ನು ಸೂಚಿಸುವದಾಗಿದೆ, ಮತ್ತು ದೊಡ್ಡ ಕೊರತೆಗಳು ಎರಡನೆಯ ಬರೋಣದ ಸಿದ್ಧಾಂತದ ಕುರಿತಾದ ಅವರ ನಂಬಿಕೆಯಲ್ಲಿ ಇದ್ದಿರಬಹುದಾದ ಸಾಧ್ಯತೆಯು ಅಧಿಕವಾಗಿರುತ್ತದೆ. "ನಂಬಿಕೆ" ಎಂಬುದನ್ನು ಅದೇ ರೀತಿಯಲ್ಲಿ ಬಳಸಲ್ಪಟ್ಟಿರುವದನ್ನು ಯೂದನು 3ನೇ ವಚನದಲ್ಲಿ ಕಾಣಬಹುದು.

## ಪೌಲ ಹಾಗೂ ಆತನ ಜೊತೆಗೆಲಸದವರಿಂದ ಹಾರೈಕೆಗಳು ಮತ್ತು ಪ್ರಾರ್ಥನೆಗಳು (3:11–13)

**11ನಮ್ಮ ತಂದೆಯಾದ ದೇವರೂ ನಮ್ಮ ಕರ್ತನಾದ ಯೇಸುವೂ ನಮಗೆ ನಿಮ್ಮ ಬಳಿಗೆ ಬರುವದಕ್ಕೆ ಮಾರ್ಗವನ್ನು ಸರಾಗಮಾಡಲಿ.**

**12ನಿಮ್ಮಲ್ಲಿ ನಮ್ಮ ಪ್ರೀತಿಯು ಹೇಗೋ ಹಾಗೆಯೇ ನಿಮ್ಮ ಪ್ರೀತಿಯು ಒಬ್ಬರೊಬ್ಬರ ಮೇಲೆಯೂ ಎಲ್ಲಾ ಮನುಷ್ಯರ ಮೇಲೆಯೂ ಅಬೀವೃದ್ಧಿ ಹೊಂದಿ ಅತ್ಯಧಿಕವಾಗುವಂತೆ ಕರ್ತನು ಅನುಗ್ರಹಿಸಲಿ. 13ನಮ್ಮ ಕರ್ತನಾದ ಯೇಸು ನಿಮ್ಮ ಹೃದಯಗಳನ್ನು ದೃಢಪಡಿಸಿ ತನ್ನ ಎಲ್ಲಾ ಪರಿಶುದ್ಧ ಪರಿವಾರ ಸಮೇತ ಪ್ರತ್ಯಕ್ಷನಾದಾಗ ತಂದೆಯಾದ ದೇವರ ಸಮಕ್ಷಮದಲ್ಲಿ ನೀವು ಪರಿಶುದ್ಧರೂ ನಿರ್ದೋಷಿಗಳೂ ಆಗಿರುವಂತೆ ಮಾಡಲಿ.**

**ವಚನ 11.** ತಾನು ಥೆಸಲೋನಿಕಕ್ಕೆ ಹಿಂದಿರುಗಿ ಹೋಗುವದೇ ಆದಲ್ಲಿ ಅದು ಆತನ **ತಂದೆಯಾದ ದೇವರು** ಸ್ವತಃ ಪೌಲನ ಪ್ರಿಯವಾದ ಯಜಮಾನನಾಗಿರುವ **ಕರ್ತನಾದ ಯೇಸು**ವಿನ ಜೊತೆಗೂಡಿ [ಆತನಿಗೆ] **ಮಾರ್ಗವನ್ನು ಸರಾಗಮಾಡಿದ** ("ವಿಘ್ನಗಳನ್ನು ನೀಗಿಸುವ"; NIV) ನಿಮಿತ್ತದಿಂದಲೇ ಆಗಿರಲಿತ್ತು ಎಂಬುದನ್ನು ಪೌಲನು ಬಲ್ಲವನಾಗಿದ್ದನು. ಪೌಲನಿಗೆ ಹಿಂದಿರುಗಿ ಬರುವದಕ್ಕೆ "ಮಾರ್ಗವನ್ನು ಸರಾಗಮಾಡುವವರು" ಎಂದು ಇಬ್ಬರನ್ನು ಸಂಬಂಧಗೊಳಿಸಿರುವ ವಾಸ್ತವಾಂಶವು ತೋರಿಸುವದೇನೆಂದರೆ ಯೇಸುವು ಸಹ ದೈವಿಕನೆಂದು, ಮತ್ತು ಆ ಕಾರಣದಿಂದ ಆತನ ಹಿಂದಿರುಗಿ ಬರುವಿಕೆಗೆ ಅಭ್ಯಂತರ ಮಾಡಬಹುದಾದ ಯಾವದನ್ನೇ ಆಗಲಿ ತೆಗೆದು ಹಾಕುವದಕ್ಕೆ ಶಕ್ತನು ಎಂಬದಾಗಿ ಪೌಲನು ನಂಬಿದ್ದನು ಎಂಬದೆ. "ಸರಾಗಮಾಡು" ಎಂಬುದು κατευθύνω (*kateuthunō*) ಎಂಬದರಿಂದ ಬರುತ್ತದೆ, ಅದೊಂದು "ಹಳೇ ಕ್ರಿಯಾಪದವಾಗಿದ್ದು" ಅದರರ್ಥವು "[ಒಂದು] ನೇರವಾದ ಮಾರ್ಗವನ್ನು ಏರ್ಪಡಿಸು"[12] ಎಂದಾಗಿರುತ್ತದೆ. "ನಮ್ಮ ತಂದೆಯಾದ ದೇವರು"

ಎಂಬ ಪದಗಳು ಪೌಲನು ದೇವರೊಂದಿಗೆ ಅನುಭವಿಸುತ್ತಿದ್ದ ಪುತ್ರತ್ವವನ್ನು ಸೂಚಿಸುತ್ತದೆ.

ಥೆಸಲೋನಿಕಕ್ಕೆ ಹಿಂದಿರುಗಿ ಹೋಗಬೇಕೆಂಬ ಪೌಲನ ಪ್ರಾರ್ಥನೆಯು ಎಂದಾದರೂ ಉತ್ತರಿಸಲ್ಪಟ್ಟಿತೋ? ಅದು ಉತ್ತರಿಸಲ್ಪಟ್ಟಿತ್ತೆಂದು ತೋರುತ್ತದೆ. ಸುಮಾರು ಮೂರು ಅಥವಾ ನಾಲ್ಕು ವರ್ಷಗಳ ಬಳಿಕ ಆತನು ಥೆಸಲೋನಿಕವು ಇದ್ದಂಥ ಸ್ಥಳವಾದ ಮಕೆದೋನ್ಯದ ಮಾರ್ಗವಾಗಿ ಪ್ರಯಾಣಿಸಿದನು, ಮತ್ತು ಆ "ಸೀಮೆಯಲ್ಲಿ ಸಂಚಾರ ಮಾಡಿ . . . ಅಲ್ಲಿಯವರನ್ನು" ಅನೇಕ ಮಾತುಗಳಿಂದ ಧೈರ್ಯಪಡಿಸಿದನು (ಅಪೊಸ್ತಲರ ಕೃತ್ಯಗಳು 20:1, 2). ಆತನ ಭೇಟಿ ಕೊಟ್ಟ ಸ್ಥಳಗಳಲ್ಲಿ ಥೆಸಲೋನಿಕವು ಸಹ ಒಂದು ಸ್ಥಳವಾಗಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಅದರ ಜೊತೆಯಲ್ಲಿ, ಆತನು ಬಹುಶಃ ಇನ್ನೊಂದು ಸಾರಿ ಪುನಃ ಅಲ್ಲಿಗೆ ಹೋಗಿದ್ದನೆಂದು ತೋರುತ್ತದೆ (1 ತಿಮೊಥೆ 1:3).

**ವಚನ 12.** ಪೌಲನು ಅವರೊಂದಿಗೆ ಸಂಪರ್ಕವನ್ನ ಬೆಳೆಸಿದ ಪ್ರತಿ ಸಾರಿಯು ಅವರ ಮೇಲೆ ಪೌಲನ ಪ್ರೀತಿಯು (*agapē*, 1:3ರ ಮೇಲಿನ ಚರ್ಚೆಯನ್ನು ನೋಡಿರಿ) ಹೆಚ್ಚೆಚ್ಚು ಗಾಢವಾಗುತ್ತಲೇ ಹೋಯಿತು. ಅವರು ಸಹ ಆ ವಿಧವಾದ **ಪ್ರೀತಿ**ಯನ್ನು ಹೊಂದಿದವರೆಂಬ ಲಕ್ಷಣವುಳ್ಳವರಾಗಿದ್ದರು, ಆದರೆ ಅವರ ಪ್ರೀತಿಯು ತಾನು ಬರೆಯುವ ವೇಳೆಯಲ್ಲಿದ್ದ ಮಟ್ಟಕ್ಕಿಂತ ಇನ್ನಷ್ಟು ಉನ್ನತಕ್ಕೆ ಬೆಳೆಯಬೇಕೆಂದು, ಹೀಗೆ ಅದು **ಅತ್ಯಧಿಕವಾಗುವಂತಾಗಬೇಕು** ಅಥವಾ "ಉಕ್ಕಿ ಹರಿಯಬೇಕು" (NIV) ಎಂಬ ಬಯಕೆಯನ್ನು ಪೌಲನು ವ್ಯಕ್ತಪಡಿಸುತ್ತಾನೆ. ಅವರ ಪ್ರೀತಿಯು **ಒಬ್ಬರೊಬ್ಬರ ಮೇಲೆ,** ಅಂದರೆ, ಅಲ್ಲಿರುವ ಕ್ರೈಸ್ತರ ಮಧ್ಯದಲ್ಲಿ ಅಭಿವೃದ್ಧಿ ಹೊಂದುವಂತಾಗಲಿ ಎಂದು ಪ್ರಾರ್ಥಿಸಿದನು. ಪರಿಪಕ್ವವುಳ್ಳ ಕ್ರೈಸ್ತರು ಒಬ್ಬರನ್ನೊಬ್ಬರು ಪ್ರೀತಿಸುವರು ಮತ್ತು ಬಳಿಕ **ಎಲ್ಲಾ ಮನುಷ್ಯರನ್ನು** ಪ್ರೀತಿಸುವವರಾಗಿರುವರು (ನೋಡಿರಿ 1 ಯೋಹಾನ 4:7; ಗಲಾತ್ಯ 6:10). "ಅತ್ಯಧಿಕವಾಗುವಂತೆ" ಎಂಬ ಪದವು "ಅಭಿವೃದ್ಧಿ" ಎಂಬುದರ ತೀವ್ರಗೊಳಿಸುವಿಕೆಯಾಗಿರುತ್ತದೆಂದು ತೋರುತ್ತದೆ. ಇನ್ನೊಂದೆಡೆಯಲ್ಲಿ, David J. Williams ನಂಬುವ ಪ್ರಕಾರ, ಎರಡು ಪದಗಳ ಬಳಕೆಯು ಒತ್ತಿ ಹೇಳುವದಕ್ಕಾಗಿ ಆಗಿದ್ದು, ಆ ಸಂದರ್ಭದಲ್ಲಿ ಅವುಗಳು ಪರ್ಯಾಯ ಪದಗಳಾಗುತ್ತವೆ.[13]

ದೇವರ ನಿಜವಾದ ಪರಿಪಕ್ವತೆಯುಳ್ಳ ಮಗುವು ಅತ್ಯಂಥ ಬಂಡಾಯದ ವ್ಯಕ್ತಿಗಳ ಹಿತಾಸಕ್ತಿಯ ವಿಷಯದಲ್ಲಿ ಸಹ ಉದಾಸೀನತೆಯನ್ನು ತೋರುವದಿಲ್ಲ, ಯಾಕೆಂದರೆ ಎಲ್ಲಾ ಮನುಷ್ಯರು ಕ್ರೈಸ್ತರ ಪರಲೋಕದ ತಂದೆಯ ಸಂತಾನವಾಗಿರುತ್ತಾರೆ. ದೇವರು ಎಲ್ಲಾ ಮನುಷ್ಯರನ್ನು ಪ್ರೀತಿಸುತ್ತಾನೆ, ಮತ್ತು ನಮ್ಮ ಪ್ರೀತಿಗೆ ದೇವರನ್ನು ಒಂದು ಮಾದರಿಯಾಗಿ ಬಳಸಿಕೊಳ್ಳಬೇಕು (ನೋಡಿರಿ ಯೋಹಾನ 3:16; ಮತ್ತಾಯ 5:48). ವಾಸ್ತವಿಕದಲ್ಲಿ, ನಾವು ಎಲ್ಲಾ ಜನರನ್ನು ಪ್ರೀತಿಸುತ್ತೇವೋ? ನಾವು ಎಲ್ಲಾ ಜನರನ್ನು ಪ್ರೀತಿಸುತ್ತೇವೆಂದು ಪ್ರಾಮಾಣಿಕವಾಗಿ ಹೇಳಬಲ್ಲೆವೋ ಮತ್ತು ಅದಕ್ಕೆ ನಮ್ಮ ಜೀವಿತದಲ್ಲಿ ಪುರಾವೆಯನ್ನು ತೋರಿಸಬಲ್ಲೆವೋ? ನಾವು ದೇವರ ಸಂದೇಶವನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವದಕ್ಕೆ ಸಹಾಯ ಮಾಡುತ್ತಿದ್ದೇವೋ? ಹಾಗೆ ಮಾಡುವದು ನಾವು ಯಾರಿಗೆ ಬೋಧಿಸುತ್ತೇವೋ ಅವರಿಗೆ ಈ ಭೂಮಿಯ ಮೇಲೆ ಉತ್ತಮ ಜೀವಿತಗಳನ್ನು ನಡಿಸುವಂತೆಯೂ ನಿತ್ಯವಾಗಿ ರಕ್ಷಿಸಲ್ಪಡುವಂತೆಯೂ ಸಹಾಯವನ್ನು ಒದಗಿಸುವದು.

ನಿಶ್ಚಯವಾಗಿಯೂ, ಅವರಿಗೆ ಸುವಾರ್ತೆಯನ್ನು ನೀಡುವದು ನಮ್ಮ ಪ್ರೀತಿಯನ್ನು ತೋರ್ಪಡಿಸುವದಕ್ಕೆ ಉತ್ತಮ ದಾರಿಯಾಗಿರುತ್ತದೆ.

**ವಚನ 13.** ಖಂಡಿತವಾಗಿಯೂ, ಯಾವದೇ ವ್ಯಕ್ತಿ ಅಥವಾ ಗುಂಪಿಗೆ ಅಂತಿಮ ರಕ್ಷಣೆಯು ಕ್ರಮೇಣದಲ್ಲಿ ನಮ್ಮ **ಕರ್ತನಾದ ಯೇಸು ಪ್ರತ್ಯಕ್ಷನಾದಾಗ**, ಅಂದರೆ ಆತನ ಎರಡನೆಯ ಬರೋಣದಲ್ಲಿ ಬರುವದು (4:15ರೊಂದಿಗೆ ಹೋಲಿಸಿರಿ). ಆತನು ಎಲ್ಲಾ ಮನುಷ್ಯರಿಗೆ ನ್ಯಾಯತೀರಿಸುವದಕ್ಕೆ ಬರುವನು (ಯೋಹಾನ 5:22-30).

"ಪ್ರತ್ಯಕ್ಷನಾದಾಗ" ಎಂಬದಕ್ಕೆ ಬಳಸಿರುವ ಪದವು παρουσία (*parousia*). ಎಂದಾಗಿರುತ್ತದೆ. ಅದೇ ಪದವು 2:19ರಲ್ಲಿ ಕಾಣಿಸಿಕೊಂಡಿತು, ಆದರೆ ಈ ಸಂಭವದ ತನಕ ಕಾಯ್ದು ಅದರ ಬಗ್ಗೆ ಚರ್ಚಿಸುವದು ಉತ್ತಮವೆಂದು ತೋರಿತು. 2:19ರ ಕುರಿತಾದ ತನ್ನ ವ್ಯಾಖ್ಯೆಗಳಲ್ಲಿ Leon Morrisನು ಈ ಪದದ ಮೇಲೆ ಬೆಳಕನ್ನು ಚೆಲ್ಲುತ್ತಾನೆ:


> ಕ್ರೈಸ್ತ ಸಾಹಿತ್ಯದಲ್ಲಿ ಈ ಪ್ರಾಮುಖ್ಯವಾದ ಪದವು ಇದೇ ಮೊದಲ ಬಾರಿಗೆ ಕಾಣಿಸಿಕೊಳ್ಳುತ್ತದೆ. ಅದರ ಮೂಲಭೂತ ಅರ್ಥವು ಕೇವಲ "ಪ್ರಸನ್ನತೆ" ಎಂದಾಗಿರುತ್ತದೆ (1 ಕೊರಿಂಥ 16:17; 2 ಕೊರಿಂಥ 10:10ರಲ್ಲಿರುವಂತೆ). ಇದು "ಪ್ರಸನ್ನನಾಗಿರುವದಕ್ಕೆ ಬರುವದು," "ಆಗಮನ" ಎಂಬ ಅರ್ಥವನ್ನು ಎಬ್ಬಿಸುತ್ತದೆ (2 ಕೊರಿಂಥ 7:6 f.). ಜನರ ಸಾಮಾನ್ಯ ಭಾಷೆಯಲ್ಲಿ ಈ ಪದವು ಮಹಾನ್ ವ್ಯಕ್ತಿಯ, ಅರಸನೊಬ್ಬನ ಅಥವಾ ಒಬ್ಬ ಚಕ್ರವರ್ತಿಯ ಆಗಮನಕ್ಕೆ ಅನ್ವಯಗೊಳಿಸಲ್ಪಡುತ್ತಿತ್ತು, ಮತ್ತು ಅದು ರಾಜವಂಶಸ್ಥರ ಭೇಟಿಯನ್ನು ಸೂಚಿಸುವದಕ್ಕೆ ಸರ್ವಸಾಧಾರಣವಾಗಿ ಬಳಸುವ ಪದವಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಅದು ರಾಜವಂಶಸ್ಥ ಭೇಟಿಯನ್ನು, ನಮ್ಮ ಕರ್ತನ ಎರಡನೆಯ ಬರೋಣವನ್ನು ವ್ಯಕ್ತಪಡಿಸುವ ಒಂದು ತಾಂತ್ರಿಕ ಪದವಾಗಿ ಮಾರ್ಪಟ್ಟಿತು. ಹೊಸ ಒಡಂಬಡಿಕೆಯಿಂದ ಅದು ಸಾಮಾನ್ಯವಾಗಿ . . . ಕ್ರೈಸ್ತ ಸಾಹಿತ್ಯಗಳಿಗೆ ಹಸ್ತಾಂತರಿಸಲ್ಪಟ್ಟಿತು. ಆದ್ದರಿಂದ ಪೌಲನು ಇಲ್ಲಿ . . . ಕರ್ತನ ವಿಜಯೋತ್ಸಾಹದ ಪುನರಾಗಮನದ ವೈಶಿಷ್ಟ್ಯವಾದ ಬಿರುದಾದ ಆ ಪದವನ್ನು ಬಳಸುತ್ತಾನೆ. ಮತ್ತು ಪೌಲನು ಹೇಳುವದೇನೆಂದರೆ ಆ ಸಮಯದಲ್ಲಿ, ಥೆಸಲೋನಿಕದವರು ಆತನ ಭರವಸ ಮತ್ತು ಸಂತೋಷ ಹಾಗೂ ಹೊಗಳಿಕೊಳ್ಳುವ ಜಯಮಾಲೆ ಆಗುವರು ಎಂಬದೆ. ಒಬ್ಬ ಅರಸನ *parousia*ದ ವೇಳೆಯಲ್ಲಿ ಜನರು ಕೆಲವು ಸಾರಿ ಕಿರೀಟವನ್ನು ಒದಗಿಸುವ ಅವಶ್ಯಕತೆಯನ್ನು ಹೊಂದಿರುತ್ತಿದ್ದರೆಂಬುದು ಮಹತ್ವವಿಲ್ಲದ್ದೇನೂ ಆಗಿರುವದಿಲ್ಲ. ಆದರೆ ಈ ಅರಸನ ಬರೋಣದಂದು ಆತನ ಜನರೇ ಆತನ ಕಿರೀಟ ಆಗುವರು.[14]

ಪೌಲನು ಹೆಚ್ಚುಕಡಿಮೆ ಏಕಕಾಲಿಕವಾಗಿ ಪ್ರಸ್ತಾಪಿಸಿದ್ದೇನೆಂದರೆ, ಯೇಸುವು **ತನ್ನ ಎಲ್ಲಾ ಪರಿಶುದ್ಧ ಪರಿವಾರ** (ದೇವಜನರು) ಸಮೇತವಾಗಿ ಬರುವನು ಎಂಬದೆ. ಈ "ಪರಿಶುದ್ಧ ಪರಿವಾರದವರು" ಯಾರು? ಗ್ರೀಕ್ ಪದವು ἅγιοι (*hagioi*) ಎಂದಾಗಿದ್ದು, ಅದರ ಅಕ್ಷರಶಃ ಅರ್ಥವು "ಪರಿಶುದ್ಧರು" ಎಂದಾಗಿರುತ್ತದೆ. ಇವರು ಅಂತಿಮ ನ್ಯಾಯತೀರ್ಪಿನ ಮುಂಚೆ ಸತ್ತಿರುವಂಥ ವಿಧೇಯರಾದ ಜನರೋ, ಮತ್ತು ಅವರ ಆತ್ಮಗಳು ಕರ್ತನು ಬರುವ ವೇಳೆ ಆತನೊಂದಿಗೆ ಬರುವವೋ? ಅಥವಾ ಅವರು ಕರ್ತನ ಸಂಗಡ ಬರಲಿರುವ ದೇವದೂತರೋ? ಗ್ರೀಕ್ ಪದವು ವಿವಿಧ ಸನ್ನಿವೇಶಗಳಲ್ಲಿ ಎರಡೂ ವಿಧಗಳಲ್ಲಿ

ಭಾವಾನುವಾದವನ್ನು ಒದಗಿಸುವದು ಸರಿಯಾಗಿಯೇ ಇರುತ್ತದೆ. ಇಲ್ಲಿ, NASB, KJV, ಮತ್ತು RSV ತರ್ಜುಮೆಗಳು ಅದನ್ನು "ದೇವಜನರು" ಎಂದು ಅನುವಾದಿಸುತ್ತವೆ, ಅನುವಾದಕರು ಬಹುಶಃ ವಿಧೇಯತೆಯುಳ್ಳ ಜನರ ತತ್ವಕ್ಕೆ ಒಲವು ತೋರಿದರೆಂಬದನ್ನು ಸೂಚಿಸುತ್ತದೆ, ಅದೇ ವೇಳೆಯಲ್ಲಿ NIVಯು ಅದನ್ನು "ಪರಿಶುದ್ಧರು" ಎಂದು ಭಾವಾನುವಾದಗೊಳಿಸುತ್ತದೆ, ಹೀಗೆ ಅದನ್ನು "ವಿಧೇಯತೆಯುಳ್ಳ ಜನರು" ಅಥವಾ "ದೇವದೂತರು" ಎರಡರಲ್ಲಿ ಯಾವದನ್ನಾದರೂ ಅರ್ಥಮಾಡಿಕೊಳ್ಳುವದಕ್ಕೆ ಅವಕಾಶವನ್ನು ಒದಗಿಸುತ್ತದೆ. ಆತನ ಬರೋಣವನ್ನು ಬಣ್ಣಿಸುವಂಥ ಬೇರೆ ಸನ್ನಿವೇಶಗಳಲ್ಲಿ, "ಆತನೊಂದಿಗೆ" ಬರುವವರು ಗ್ರೀಕ್ ನ ἄγγελοι (*angeloi*) ಎಂಬ ಪದದಿಂದ ಬರುವ, ದೇವದೂತರು ಎಂಬುದು ಸ್ಪಷ್ಟವಾಗಿರುತ್ತದೆ (ಮತ್ತಾಯ 25:31; ಮಾರ್ಕ 8:38; 2 ಥೆಸಲೋನಿಕ 1:7), ಮತ್ತು ಈ ದೇವದೂತರು ಆಗಾಗ್ಗೆ "ಪರಿಶುದ್ಧರು" ಎಂದು ಬಣ್ಣಿಸಲ್ಪಟ್ಟಿರುತ್ತಾರಾದ್ದರಿಂದ (ಮಾರ್ಕ 8:38; ಲೂಕ 9:26), ಬಹು ಸಂಭವನೀಯವಾಗಿ ಇಲ್ಲಿ "ಪರಿಶುದ್ಧ ಪರಿವಾರ" ಎಂಬುದು ದೇವದೂತರು ಸೂಚಿಸುತ್ತದೆ. ಈ ಸಂಭಾವ್ಯತೆಗೆ ಇನ್ನಷ್ಟು ಪುಷ್ಠಿಯನ್ನು ಕೊಡುವದದೇನೆಂದರೆ ಪೌಲನು ಯೇಸುವಿನೊಂದಿಗೆ ಬರುವವರಿಂದ ಭೂಮಿಯ ಮೇಲಿರುವ ಕ್ರೈಸ್ತರನ್ನು ವ್ಯತ್ಯಾಸಗೊಳಿಸುತ್ತಿದ್ದಾನೆಂದು ತೋರುತ್ತದೆಂಬ ವಾಸ್ತವಾಂಶವೇ ಆಗಿದೆ.

ಈ ವ್ಯತ್ಯಾಸಗೊಳಿಸುವಿಕೆಯನ್ನು ಖಚಿತವೆಂಬಂತೆ ಪರಿಗಣಿಸಕೂಡದು, ಆದರೆ ಇವರು ಕೇವಲ ದೇವದೂತರೇ ಎಂಬ ಸಾಧ್ಯತೆಯು ಅಧಿಕವಾಗಿರುತ್ತದೆ. Morris ನು ದೇವದೂತರು ಮತ್ತು ದೇವಜನರು ಇಬ್ಬರನ್ನೂ ಸೇರ್ಪಡೆಗೊಳಿಸುವದಕ್ಕೆ ಆರಿಸಿಕೊಳ್ಳುತ್ತಾನೆ,[15] ಮತ್ತು J. W. McGarvey ಮತ್ತು Philip Y. Pendletonರು ದೇವಜನರು ಎಂಬುದಕ್ಕೆ ಬಾಗಿಲನ್ನು ತೆರೆದಿಡುತ್ತಾರೆ.[16] I. Howard Marshallನು ಇಲ್ಲಿ "ದೇವಜನರನ್ನು" ಸೇರ್ಪಡೆಗೊಳಿಸುವದು "ಕಷ್ಟಕರ"ವೆಂದು ಕಾಣುತ್ತಾನೆ. ಆತನು ಹೇಳಿದ್ದೇನೆಂದರೆ, "ವಿಶ್ವಾಸಿಗಳು ಕರ್ತನೊಂದಿಗೆ ಪುನರ್ಮಿಲನವನ್ನು ಹೊಂದುವದು ಆತನ ಬರೋಣಕ್ಕೆ ಮುಂಚೆ ಎಂಬುದಕ್ಕಿಂತಲೂ ಆತನ ಬರೋಣದ ನಂತರದಲ್ಲಿ ಸಂಭವಿಸುವ ಕಾರ್ಯವಾಗಿದೆ ಎಂಬದೆ."[17] ಇಲ್ಲಿ *hagioi* ಎಂಬುದರ ಅರ್ಥವು ಏನೇ ಆಗಿದ್ದರೂ ಸರಿಯೇ, ಯೇಸುವಿನ ಸಂಗಡ ಬರುವವರು "ಎಲ್ಲಾ" ವರ್ಗದವರು ಆಗಿರುತ್ತದೆ, ಆದರೆ ಅದೇ ವೇಳೆಯಲ್ಲಿ ಕೆಲವು ದೇವಜನರು ಭೂಮಿಯ ಮೇಲೆ ಇನ್ನೂ "ಬದುಕಿರುವರು."

**ಎತ್ತಲ್ಪಡುವಿಕೆ, ಸಹಸ್ರವರ್ಷಾಡಳಿತ, ಇತ್ಯಾದಿಗಳ ಕುರಿತ Lindseyಯ ನಿಲುವು.**[18]




Williamsನು "ಎತ್ತಲ್ಪಡುವಿಕೆ ವಾದಿಗಳು" ಈ ವಚನವನ್ನು ಹೇಗೆ ಬಳಸಿಕೊಳ್ಳುತ್ತಾರೆಂಬುದನ್ನು ವಿವರಿಸುತ್ತಾನೆ:

> ಇಂದು ಅನೇಕ ಕ್ರೈಸ್ತರಿಂದ ಅಂಗೀಕರಿಸಿಕೊಳ್ಳಲ್ಪಟ್ಟಿರುವ ಅಂತ್ಯ ಕಾಲದ ಚಿತ್ರಣಗಳಲ್ಲೊಂದೆಂದರೆ ಯೇಸುವಿನ ಪುನರಾಗಮನವು ಎರಡು ರೀತಿಯಲ್ಲಿರುತ್ತದೆಂಬದೆ: ಮೊದಲನೆಯದೆಂದರೆ ಆತನು ಸಭೆಯನ್ನು ಒಟ್ಟುಗೂಡಿಸುವದಕ್ಕೆ ರಹಸ್ಯದಲ್ಲಿ ಬರುತ್ತಾನೆ, ಎರಡನೆಯದೆಂದರೆ ಸಂಕಟ ಕಾಲ ಮುಗಿದ ಬಳಿಕ (ಈ ತತ್ವದ ಪ್ರಕಾರ, ಲೋಕವು ಮಾತ್ರವೇ ಅನುಭವಿಸುವದು ಎಂದಾಗಿರುತ್ತದೆ) ಎಲ್ಲರಿಗೂ ಕಾಣುವಂತೆ, ಲೋಕಕ್ಕೆ ನ್ಯಾಯತೀರಿಸಲು ಬರುತ್ತಾನೆ ಎಂಬದೆ. ಮೊದಲನೆಯ ಸಾರಿ ಹಿಂದಿರುಗಿ ಬರುವದನ್ನು ಎತ್ತಲ್ಪಡುವಿಕೆ ಎಂದು, ಎರಡನೆಯದ್ದನ್ನು ಪ್ರಕಟನೆ ಎಂದು ಕರೆಯುತ್ತಾರೆ. ಲ್ಯಾಟಿನ್ ಭಾಷೆಯ (*rapere*) ಎಂಬ ಪದಕ್ಕೆ ಸಮಾನವಾದ ἁρπάζω (*harpazō*) ಎಂಬ ಗ್ರೀಕ್ ಪದದಿಂದ "rapture" (ಎತ್ತಲ್ಪಡುವಿಕೆ) ಎಂಬ ಪದವು ಬಂದಿದ್ದು, ವಾಸ್ತವಿಕದಲ್ಲಿ ಅದು 4:17ರಲ್ಲಿ ಪೌಲನಿಂದ ಬಳಸಲ್ಪಟ್ಟ ಪದವಾಗಿರುತ್ತದೆ, "ನಾವು . . . ಫಕ್ಕನೆ ಒಯ್ಯಲ್ಪಡುವೆವು." ಹೇಗೂ, ಪೌಲನು ಆಧುನಿಕ ತತ್ವದ ಪ್ರಕಾರವಾಗಿ ಅಲ್ಲಿ ಬಳಸುತ್ತಿಲ್ಲ. . . . ತತ್ವವು ಬಹಳಷ್ಟು ಮಟ್ಟಿಗೆ ಈ ವಚನದಿಂದ ಅರ್ಥೈಸಿಕೊಳ್ಳಲಾದ ನಿರ್ಧಾರದ ಮೇಲೆ ಅವಲಂಭಿತವಾಗಿರುತ್ತದೆ. ಈ ವಚನವು ಹೇಳುವ ಪ್ರಕಾರ, ಯೇಸು ತನ್ನ ಪರಿಶುದ್ಧರೊಂದಿಗೆ ಬರಬೇಕೆಂದರೆ, ಆತನು ಮೊದಲು ಅವರನ್ನು ಕರಕೊಂಡು ಹೋಗುವದಕ್ಕೆ ಬಂದಿರಲೇ ಬೇಕಾಗಿರುತ್ತದೆಂದು ವಾದಿಸಲಾಗುತ್ತದೆ. ಈ ಚಿತ್ರಣವನ್ನು ಪುಷ್ಟೀಕರಿಸುವ ಇನ್ನಷ್ಟು ವಾಕ್ಯಭಾಗಗಳಿರುತ್ತದೆ (ಮಾರ್ಕ 13:27; ಪ್ರಕಟನೆ 11:11), ಆದರೆ ಅವುಗಳಲ್ಲಿ ಯಾವದೂ, ಎಲ್ಲವುಗಳಿಗಿಂತ ಕನಿಷ್ಠವಾದ 1 ಥೆಸಲೋನಿಕ 3:13 ಸಹ, ಈ ಅರ್ಥನಿರೂಪಣೆಗೆ ಅಧಿಕಾರಯುಕ್ತತೆ ಯನ್ನು ಒದಗಿಸಲಾರದು.[19]

ಯೇಸು ತನ್ನ ಸಂಗಡ ದೇವದೂತರನ್ನು ಕರೆದುಕೊಂಡು ಬಂದರೂ ಸರಿಯೇ ಅಥವಾ ಪರಿಶುದ್ಧರನ್ನು ಕರೆಕೊಂಡು ಬಂದರೂ ಸರಿಯೇ, ಥೆಸಲೋನಿಕದವರು **ದೇವರ ಸಮಕ್ಷಮದಲ್ಲಿ** (ಆತನ ನ್ಯಾಯತೀರ್ಪಿನ ಕಟಕಟೆಯಲ್ಲಿ) ಪರಿಶುದ್ಧರೂ [ಯೇಸುವಿನ

ರಕ್ತದಿಂದ ಪವಿತ್ರಗೊಳಿಸಲ್ಪಟ್ಟವರಾಗಿ, 1 ಯೋಹಾನ 1:7-10] ನಿರ್ದೋಷಿಗಳೂ (ದೋಷಿಗಳೆಂದು ಎಣಿಸಲ್ಪಡದವರಾಗಿ) ನಿಂತುಕೊಳ್ಳುವಂತಾಗಲು ದೇವರ ಅವರ **ಹೃದಯಗಳನ್ನು ದೃಢಪಡಿಸಲಿ** ಎಂಬದು ಪೌಲನ ಪ್ರಾರ್ಥನೆಯಾಗಿತ್ತು ಎಂಬುದು ಸ್ಪಷ್ಟವಾಗಿರುತ್ತದೆ. ಅಂತಿಮವಾದ ದೊಡ್ಡ ಪರೀಕ್ಷೆಗೋಸ್ಕರ ಸಿದ್ಧರಾಗುವಂತೆ ಥೆಸಲೋನಿಕದವರಿಗೆ ಸಹಾಯ ಮಾಡುವದಕ್ಕಾಗಿ ದೇವರು ಪೌಲ ಮತ್ತು ಆತನ ಸಹಚರರನ್ನು ಉಪಯೋಗಿಸುತ್ತಿದ್ದನು. ಅವರು ಆತನ ಬರೋಣದ ವೇಳೆ "ನಿರ್ದೋಷಿಗಳು" ಆಗಿರಬೇಕೆಂಬದು ಆತನ ಬಲವಾದ ಬಯಕೆಯಾಗಿತ್ತು.[20]

# ಅನ್ವಯಿಸುವಿಕೆ

## ಒಬ್ಬ ಪರಿಪಕ್ವವಿರುವ ಬೋಧಕನ ಪ್ರಾರ್ಥನೆ

ಅಧ್ಯಾಯ 3 ರಲ್ಲಿ, ಪೌಲನು ತಾನು ಥೆಸಲೋನಿಕದಲ್ಲಿ ಕಳೆದಿದ್ದ ಕೆಲವು ತಿಂಗಳುಗಳನ್ನು, ಥೆಸಲೋನಿಕದ ಸಭೆಯನ್ನು ಸ್ಥಾಪಿಸಿದ್ದನ್ನು ಮೆಲಕು ಹಾಕಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 17:1-9). ಪೌಲನು ಒಬ್ಬ ಪರಿಪಕ್ವತೆಯುಳ್ಳ ಬೋಧಕನಾಗಿದ್ದನು, ಮತ್ತು ಥೆಸಲೋನಿಕದ ಕ್ರೈಸ್ತರು ನಂಬಿಕೆಯಲ್ಲಿ ಇನ್ನೂ ತಾರುಣ್ಯರಾಗಿದ್ದರು. ಥೆಸಲೋನಿಕದಲ್ಲಿ ಸುವಾರ್ತೆಗೆ ಇದ್ದ ವಿರೋಧದ ಕಾರಣದಿಂದ, ಆತನು ಅಕಾಲಿಕವಾಗಿ ಥೆಸಲೋನಿಕವನ್ನು ಬಿಟ್ಟು ಹೋಗಬೇಕಾಯಿತು, ಮತ್ತು ಇದು ಆತನಿಗೆ ಚಿಂತೆಯನ್ನುಂಟು ಮಾಡಿತ್ತು. ಇಲ್ಲಿ ನಾವು ತಾನು ಪರಿವರ್ತನೆಗೆ ನಡಿಸಿದ ತಾರುಣ್ಯದಲ್ಲಿರುವ ಜನರಿಗಾಗಿ ಒಬ್ಬ ಪರಿಪಕ್ವವುಳ್ಳ ಬೋಧಕನಿಗಿರುವ ಕಳಕಳಿಯು ಹೇಗಿರುತ್ತದೆಂಬದನ್ನು ಕಾಣುತ್ತೇವೆ. ಬಹುಶಃ ಪೌಲನು ಥೆಸಲೋನಿಕದವರಿಗೋಸ್ಕರ ಹೊಂದಿದ್ದ ಪ್ರಾರ್ಥನೆಯು ಒಬ್ಬ ಬೋಧಕನಿಂದ ಬರೆಯಲ್ಪಟ್ಟ ಈ ಕೆಳಗಿನ ಅನಾಮದೇಯ ಪ್ರಾರ್ಥನೆಯಂತೆಯೇ ಇದ್ದಿರಬಹುದಾಗಿದೆ:

> ನನ್ನ ಕೈಗಳಲ್ಲಿ, ಓ ದೇವರೇ, ಎಲ್ಲಾ ಸಂಗತಿಗಳಲ್ಲಿಯೂ ಅತಿ ವಿರಳವಾದದ್ದನ್ನು, ಮನುಷ್ಯರ ಮನಸ್ಸು ಅಥವಾ ಹೃದಯವನ್ನು ಒಪ್ಪಿಸಿರುವಿ.
> ಮನುಷ್ಯನ ಆತ್ಮದಲ್ಲಿ ಅಡಕವಾಗಿರುವ ನಿನ್ನ ಸ್ವಂತ ಸ್ವರೂಪವನ್ನೇ ನನ್ನ ವಶಕ್ಕೆ ಕೊಟ್ಟಿರುವಿ.
> ನನಗೆ ನೀನು ಈ ದೈವಿಕ ವರವನ್ನು (ಸುವಾರ್ತೆಯ ಮೂಲಕ) ರೂಪಿಸುವದಕ್ಕೂ ಪರಿಪೂರ್ಣಗೊಳಿಸುವದಕ್ಕೂ ಶಕ್ತಿಯನ್ನು ಕೊಟ್ಟಿದ್ದೀ.
> ಈ ದೈವಿಕ ಸೃಷ್ಟಿಗೆ ನಿನ್ನ ಸಂದೇಶವನ್ನು ತಿಳಿಸುವದು ಒಂದು ಅದ್ಭುತವಾದ ಕೆಲಸವಾಗಿದೆ.
> ನೀನು ಕೊಟ್ಟಿರುವ ಅರಿಯಲಾಗದಂಥ ವರವನ್ನು ಗೌರವಪೂರ್ವಕವಾಗಿ ಸ್ಪರ್ಶಿಸುವದಕ್ಕೆ ನನಗೆ ಪ್ರಜ್ಞೆಯಿರುವ ಹಾಗೆ ಕೃಪೆಯನ್ನು ಒದಗಿಸು.
> ನೀನು ನನಗೆ ವಹಿಸಿರುವ ಕೆಲಸವನ್ನು ದೃಷ್ಟಿಸಿದ ಹಾಗೆ ಚಕಿತಗೊಂಡದ್ದಾಗಿ

ನನ್ನ ಆತ್ಮದ ಗಮನವಿಲ್ಲದಿರುವಿಕೆಯು ಇನ್ನಷ್ಟು ಆಳಕ್ಕೆ ಹೋಗಲಿ.
ನನ್ನನ್ನು ಬಲ್ಲವರೆಲ್ಲರೂ ನಿನ್ನನ್ನು ತಿಳಿಯಲಿ ಮತ್ತು ನಿನ್ನ ದೈವಿಕ ಪ್ರೀತಿಯಿಂದ ಉದ್ದಾತ್ತರಾಗಿಸಲ್ಪಡಲಿ.
ಓ ದೇವರೇ, ಈ ವಹಿಸಿದ ಕೆಲಸಕ್ಕೆ ನನ್ನನ್ನು ಯೋಗ್ಯನನ್ನಾಗಿಸು. EE

## ಸಹೋದರರನ್ನು ದೃಢಪಡಿಸುದು ಮತ್ತು ಪ್ರೋತ್ಸಾಹಿಸುವದು (3:2)

2ನೇ ವಚನದಲ್ಲಿ, ಪೌಲನು ಹೀಗೆ ಬರೆದನು, ". . . ಒಬ್ಬರೂ ಚಂಚಲರಾಗದಂತೆ ನಿಮ್ಮನ್ನು ದೃಢಪಡಿಸುವದಕ್ಕೂ ನಿಮ್ಮ ನಂಬಿಕೆಯ ವೃದ್ಧಿಗಾಗಿ ಪ್ರಬೋಧಿಸುವದಕ್ಕೂ ನಮ್ಮ ಸಹೋದರನೂ ಕ್ರಿಸ್ತನ ಸುವಾರ್ತೆಯ ಉದ್ಯೋಗದಲ್ಲಿ ದೇವರ ಸೇವಕನೂ ಆಗಿರುವ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿದೆವು." ಥೆಸಲೋನಿಕ ಸಭೆಯು ಸಂಕಟಗಳನ್ನು ಸಹಿಸಿಕೊಳ್ಳಬೇಕೆಂಬದು ಪೌಲನ ಬಲವಾದ ಬಯಕೆಯಾಗಿತ್ತು.

ಥೆಸಲೋನಿಕದವರು ತಮಗೆ ಬಂದ ಸಂಕಟಗಳ ಕಾರಣದಿಂದ ಬಿದ್ದು ಹೋಗುವರೋ ಏನೋ ಎಂದು ಹೆದರಿದ್ದನು (ವ. 5). ಆದದರಿಂದ, ಸಹೋದರರ ಕುರಿತು ಕೇವಲ ಯೋಚಿಸುತ್ತಾ ಏನೂ ಮಾಡದಂತೆ ಕುಳಿತುಕೊಳ್ಳುವ ಬದಲಾಗಿ, ಆತನು ಸಹಾಯವನ್ನು ಒದಗಿಸುವದಕ್ಕೆ ಯಾವದೋ ಒಂದನ್ನು ಮಾಡಿದನು. ಆತನ ಪ್ರಾಣವು ಅಪಾಯಕ್ಕೊಳಗಾಗುವ ಸಾಧ್ಯತೆಯಿದ್ದದರಿಂದ ಆತನು ಆ ಪಟ್ಟಣಕ್ಕೆ ಹಿಂದಿರುಗುವಕ್ಕಾಗಲಿಲ್ಲ; ಆದ್ದರಿಂದ ಆತನು ಸಹೋದರರ ಬಳಿಗೆ ತಿಮೊಥೆಯನ್ನು ಹಿಂದಕ್ಕೆ ಕಳುಹಿಸಿದನು. ಥೆಸಲೋನಿಕದವರಿಗೆ ತಿಮೊಥೆಯನ ಪರಿಚಯವಿತ್ತು ಆದರೆ ಅಲ್ಲಿದ್ದ ಯೆಹೂದ್ಯರಿಗೆ ಅವನ ಪರಿಚಯವಿರಲಿಲ್ಲ. ಆತನೊಬ್ಬ ನಂಬಿಗಸ್ತನಾದ ಕೆಲಸಗಾರನಾಗಿದ್ದನು, ಒಬ್ಬ "ಸಹೋದರನೂ" ಮತ್ತು "ಸುವಾರ್ತೆಯ ಉದ್ಯೋಗದಲ್ಲಿ ಸೇವರ ಸೇವಕನೂ" ಆಗಿದ್ದನು (ವ. 2). ತಿಮೊಥೆಯನು ಕ್ರಿಸ್ತನ ಸುವಾರ್ತೆಯನ್ನು, ಆತನು ಹೇಗೆ ಮನುಷ್ಯರನ್ನು ರಕ್ಷಿಸುವದಕ್ಕೆ ಸತ್ತನು ಎಂಬದರ ಕುರಿತು ಸಾರುವವನಾಗಿದ್ದನು. ಪೌಲನಿಗಿದ್ದ ಸಂದಿಗ್ಧತೆಗೆ ತಿಮೊಥೆಯನು ಒಂದು ಕಾರ್ಯಸಾಧ್ಯವಾದ ಒಂದು ಪರಿಹಾರವಾಗಿದ್ದನು.

ಆತನು ತಿಮೊಥೆಯನನ್ನು "ದೃಢಪಡಿಸುವದಕ್ಕೂ ಪ್ರಬೋಧಿಸುವದಕ್ಕೂ" ಕಳುಹಿಸಲಿದ್ದನು. ಆತನು ಪೌಲನ ಗುರಿಗಳನ್ನು ಹೇಗೆ ಸಾಧಿಸಲಿದ್ದನು? ಬೈಬಲ್ ನಮಗೆ ಬಹು ಸ್ಪಷ್ಟವಾಗಿ ಅದರ ಬಗ್ಗೆ ತಿಳಿಸುವದಿಲ್ಲ, ಆದರೆ ತಿಮೊಥೆಯನು ಸಾರ್ವಜನಿಕವಾಗಿ ಪ್ರಸಂಗಿಸಿದನು ಮತ್ತು ವೈಯಕ್ತಿಕವಾಗಿ ಅವರನ್ನು ಪ್ರೋತ್ಸಾಹಿಸುವದಕ್ಕಾಗಿ ವಿವಿಧ ಸದಸ್ಯರೊಂದಿಗೆ ಸಂಭಾಷಿಸಿದನೆಂಬುದನ್ನು ನಾವು ಕಲ್ಪಿಸಿಕೊಂಡು ನೋಡಬಹುದಾಗಿದೆ.

ಪೌಲ ಮತ್ತು ತಿಮೊಥೆ ಇಬ್ಬರೂ ಸಭೆಯನ್ನು ದೃಢಪಡಿಸುವದಕ್ಕೂ ಪ್ರಬೋಧಿಸುವದಕ್ಕೂ ಇಷ್ಟ ಪಟ್ಟರು. ಹೇಗೂ, ಪ್ರೋತ್ಸಾಹದ ಅಗತ್ಯವು ಕೇವಲ ಥೆಸಲೋನಿಕದವರಿಗೆ ಮಾತ್ರವೇ ಇರಲಿಲ್ಲ. ಎಲ್ಲಾ ಸಭೆಗಳಲ್ಲಿಯೂ ನಿಜವಾದ ಅಗತ್ಯತೆಗಳಿರುವ ಜನರಿರುತ್ತಾರೆ. ಆ ಅಗತ್ಯತೆಗಳನ್ನು ನೋಡಿಕೊಳ್ಳುವದಕ್ಕೆ ನಾವು ಹೇಗೆ ಪ್ರಯತ್ನವನ್ನು ಮಾಡುವವರಾಗಿದ್ದೇವೆ? ಕೆಲವರಿಗೆ ಅವರನ್ನು ಯಾರಾದರೂ ಭೇಟಿ ಮಾಡಬೇಕು ಎಂಬ ಅಗತ್ಯತೆಯಿರಬಹುದು. ಹೊಸದಾಗಿ ಪರಿವರ್ತನೆಗೊಂಡವರೊಬ್ಬರಿಗೆ

ಮಾರ್ಗದರ್ಶನದ ಅಗತ್ಯವಿರಬಹುದು. ಒಬ್ಬ ಹೊಸ ಸದಸ್ಯನು ಸಭೆಯ ಕೆಲಸದಲ್ಲಿ ಭಾಗಿಯಾಗಬೇಕಾದ ಅಗತ್ಯವಿರಬಹುದು. ಪೌಲ ಮತ್ತು ತಿಮೊಥೆಯರ ಹಾಗೆಯೇ, ನಾವು ಸಹ "ನಮ್ಮ ಪ್ರಯಾಸವು ವ್ಯರ್ಥವಾಗಿ ಹೋಗದ" ಹಾಗೆ ನಮಗೆ ಸಾಧ್ಯವಾದಷ್ಟು ದೃಢಪಡಿಸುವಿಕೆಯನ್ನು ಮತ್ತು ಪ್ರಬೋಧನೆಯನ್ನು ಮಾಡುವಂತಾಗಲಿ (ವ. 5). EE

## ಸ್ಥಳೀಯ ಬೋಧನೆ ಮತ್ತು ಉಪದೇಶ (3:1-3)

ಥೆಸಲೋನಿಕದವರ ಮೇಲೆ ಇದ್ದ ಅಗಾಧವಾದ ಕಳಕಳಿಯಿಂದಾಗಿ, ಪೌಲನು ಅವರ ಬಳಿಗೆ ತಿಮೊಥೆಯನನ್ನು ಕಳುಹಿಸಿದನು. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ಪೌಲನು ತನ್ನ ಸಂಗಡ ಅಥೇನೆ ವರೆಗೆ ಬಂದಿದ್ದ ಬೆರೋಯದವರಿಗೆ ಬೆರೋಯಕ್ಕೆ ಹಿಂದಿರುಗಿ ಹೋಗಿ ತಿಮೊಥೆ ಮತ್ತು ಸೀಲರನ್ನು ತನ್ನ ಬಳಿಗೆ ಕಳುಹಿಸಿ ಕೊಡಬೇಕೆಂದು ಅಪ್ಪಣೆ ಕೊಟ್ಟಿದ್ದೊಂದಿಗೆ ಇದು ಸಂಬಂಧಿಸಲ್ಪಟ್ಟಿದೆ (ಅಪೊಸ್ತಲರ ಕೃತ್ಯಗಳು 17:15). ಸ್ಪಷ್ಟವಾಗಿರುವ ಹಾಗೆ, ಸೀಲ ಮತ್ತು ತಿಮೊಥೆ ಇಬ್ಬರೂ ತನ್ನೊಂದಿಗೆ ಕೊರಿಂಥಕ್ಕೆ ಬರಬೇಕೆಂಬುದು ಪೌಲನ ಬಯಕೆಯಾಗಿತ್ತು, ಆದರೆ ಆತನು ಅವರಿಬ್ಬರಲ್ಲಿ ಒಬ್ಬನನ್ನೂ ಕರಕೊಂಡು ಹೋಗಲಾಗಲಿಲ್ಲ. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ತಿಮೊಥೆಯನು ಪೌಲನ ಬಳಿಗೆ ಬಂದು ಅನಂತರದಲ್ಲಿ ಪೌಲನಿಂದ ಥೆಸಲೋನಿಕಕ್ಕೆ ಕಳುಹಿಸಲ್ಪಟ್ಟ ಕುರಿತಾಗಿ ಲೂಕನು ಹೇಳುವದಿಲ್ಲ.

ಅಪೊಸ್ತಲರ ಕೃತ್ಯಗಳು 17:15, ಪೌಲನು ಬೆರೋಯದ ಸಹೋದರರ ಜೊತೆಗೂಡಿ ಅಥೇನೆಗೆ ಹೋದನು ಮತ್ತು ಅಲ್ಲಿ ಒಬ್ಬಂಟಿಗನಾಗಿ ಬಿಡಲ್ಪಟ್ಟಿದ್ದನು. ಪೌಲನು ತಿಮೊಥೆಯನನ್ನು ಮತ್ತು ಸೀಲನನ್ನು ಬೆರೋಯದಲ್ಲಿಯೇ ಬಿಟ್ಟಿದ್ದನು. ತಿಮೊಥೆ ಮತ್ತು ಸೀಲರಿಗೆ ತನ್ನ ಬಳಿಗೆ ಶೀಘ್ರದಲ್ಲಿಯೇ ಬರುವಂತೆ ಹೇಳಿರಿ ಎಂಬದಾಗಿ ಪೌಲನು ಬೆರೋಯದ ಸಹೋದರರನ್ನು ಕೇಳಿಕೊಂಡಿದ್ದನು (ಅಪೊಸ್ತಲರ ಕೃತ್ಯಗಳು 17:15). ಪೌಲನು ಅಥೇನೆಯದವರಿಗೆ ಬೋಧಿಸಿದ ಬಳಿಕ, ಆತನು ಕೊರಿಂಥಕ್ಕೆ ಪ್ರಯಾಣ ಸಾಗಿಸಿದನು ಎಂಬದಾಗಿ ಅಪೊಸ್ತಲರ ಕೃತ್ಯಗಳು ಪುಸ್ತಕದ ದಾಖಲೆಯು ತಿಳಿಸುತ್ತದೆ (ಅಪೊಸ್ತರ ಕೃತ್ಯಗಳು 18:1), ಅಲ್ಲಿ ಸೀಲ ಮತ್ತು ತಿಮೊಥೆಯರು ಮಕೆದೋನ್ಯದಿಂದ ಬಂದು ಆತನೊಂದಿಗೆ ಸೇರಿಕೊಂಡರು (ಅಪೊಸ್ತಲರ ಕೃತ್ಯಗಳು 18:5). ತಿಮೊಥೆಯನು ಅಥೇನೆಯದಲ್ಲಿ ಪೌಲನ ಸಂಗಡ ಇರಬೇಕೆಂದು ಬಂದಿದ್ದನೆಂಬದು ಈ ವಾಕ್ಯಭಾಗದಿಂದ (ವಚನಗಳು 1, 2) ಸ್ಪಷ್ಟವಾಗುತ್ತದೆ, ಆದರೆ ಆತನನ್ನು ಪುನಃ ಥೆಸಲೋನಿಕಕ್ಕೆ ಕಳುಹಿಸಲಾಯಿತು. ಇಲ್ಲಿ ಯಾವದೇ ತದ್ವಿರುದ್ಧತೆಯಿರುವದಿಲ್ಲ. ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ, ತಿಮೊಥೆಯನು ಅಥೇನೆಗೆ ಪ್ರಯಾಣ ಮಾಡಿದ ಮತ್ತು ಪುನಃ ಥೆಸಲೋನಿಕಕ್ಕೆ ಹೋಗಿದ್ದರ ಘಟನೆಯನ್ನು ಲೂಕನು ಕೈ ಬಿಟ್ಟಿರುತ್ತಾನೆ ಯಾಕೆಂದರೆ ಆತನು ಬರೆಯುವ ಉದ್ದೇಶಕ್ಕೆ ಅದು ಪ್ರಾಮುಖ್ಯವಾದದ್ದಾಗಿರಲಿಲ್ಲ. ಹೇಗೂ, ಥೆಸಲೋನಿಕದವರಿಗೆ ಪತ್ರಿಕೆಯನ್ನು ಬರೆಯುವದರಲ್ಲಿ ಅದು ಪೌಲನಿಗೆ ಪ್ರಾಮುಖ್ಯವಾಗಿತ್ತು.

ತಿಮೊಥೆಯನು ಅಥೇನೆಗೆ ಬಂದು ಮುಟ್ಟಿದ ಕೂಡಲೆ, ತಿಮೊಥೆಯನು ಥೆಸಲೋನಿಕಕ್ಕೆ ಹಿಂದಿರುಗಿ ಹೋಗಬೇಕು ಎಂಬದಾಗಿ ಪೌಲ ಹಾಗೂ ತಿಮೊಥೆಯರು ಒಪ್ಪಿಕೊಂಡಿದ್ದರು. ಅದಾದ ನಂತರದ ಸಮಯದಲ್ಲಿ, ಪೌಲನು ಮಕೆದೋನ್ಯಕ್ಕೆ ಹೋಗಿದ್ದನು. ಅಪೊಸ್ತಲರ

ಕೃತ್ಯಗಳು ಪುಸ್ತಕದಲ್ಲಿ ವಿವರವಾದ ದಾಖಲೆಯು ಇಲ್ಲವಾದ್ದರಿಂದ, ಈ ಮಿಶನರಿಗಳ ಕ್ರಿಯೆಗಳನ್ನು ನಿಖರವಾಗಿ ಪುನಾರಚಿಸುವದಕ್ಕೆ ಕಷ್ಟಕರವಾಗಿರುತ್ತದೆ. ಹೇಗೂ, ಸೀಲನು ಮತ್ತು ತಿಮೊಥೆಯ ಇಬ್ಬರೂ ಕ್ರಮೇಣದಲ್ಲಿ ಬಂದು ಕೊರಿಂಥದಲ್ಲಿದ್ದ ಪೌಲನನ್ನು ಪುನಃ ಕೂಡಿಕೊಂಡರು ಮತ್ತು ಅವರ ಮಕೆದೋನ್ಯದಿಂದ ಹಿಂದಿರುಗಿ ಬಂದಿದ್ದರೆಂಬದಂತೂ ತಿಳಿದಿರುವ ವಿಷಯವಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 18:5).

ಪೌಲನು ತಿಮೊಥೆಯನನ್ನು ಥೆಸಲೋನಿಕಕ್ಕೆ ಹಿಂದಿರುಗಿ ಕಳುಹಿಸಿದ ಹಾಗೆ, ನಮ್ಮ ಸ್ಥಳೀಯ ಬೋಧನೆ ಮತ್ತು ಉಪದೇಶದಲ್ಲಿರುವ ಕೆಲವು ಉದ್ದೇಶಗಳೇನೆಂಬುದನ್ನು ನಾವು ಕಾಣಬಹುದು.

*ಕಳಕಳಿಯಿಂದ ಸೇವೆಯ ಮಾಡುವದು.* ತಿಮೊಥೆಯನು ಥೆಸಲೋನಿಕಕ್ಕೆ ಹಿಂದಿರುಗಿ ಬಂದದ್ದು ಥೆಸಲೋನಿಕದವರ ಮೇಲೆ ಪೌಲನಿಗಿದ್ದ ನಿಜವಾದ ಕಳಕಳಿಯ ಫಲಿತವಾಗಿತ್ತು. ಪೌಲನು "ಇನ್ನು ತಡೆಯಲಾರದೆ" ಎಂಬದಾಗಿ ಹೇಳಿದನು, ಅದು ಅತ್ಯಂಥ ಆಳವಾದ ಭಾವಗಳನ್ನು ಸೂಚಿಸುವಂಥ ಪದಗುಚ್ಛವಾಗಿರುತ್ತದೆ. ತನ್ನ ಬೋಧನೆ ಮತ್ತು ಉಪದೇಶದಲ್ಲಿ, ಆತನು ಅವರ ಮೇಲಿದ್ದ ಭಾರವಾದ ಕಳಕಳಿಯನ್ನು ಹೊತ್ತುಕೊಂಡ ವನಾಗಿದ್ದನು.

ನಿಜವಾದ ಸಹೋದರನೂ ಕ್ರಿಸ್ತನ ಸುವಾರ್ತೆಯಲ್ಲಿ ದೇವರ ಸೇವಕನೂ ಆಗಿದ್ದವನಾಗಿ, ತಿಮೊಥೆಯನು ಪೌಲನ ಕಳಿಕಳಿಯನ್ನು ತಾನೂ ಹಂಚಿಕೊಂಡಿದ್ದನು ಮತ್ತು ಥೆಸಲೋನಿಕಕ್ಕೆ ಹೋಗಬೇಕೆಂದು ಹಂಬಲಿಸುತ್ತಿದ್ದನು. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕಷ್ಟದ ಸಮಯದಲ್ಲಿ ಆತನು ಸಹಾಯವನ್ನು ನೀಡುವದಕ್ಕೆ ಬಯಸಿದ್ದನು, ಆತನಿಗೆ ಒಂದು ಉದ್ಯೋಗದ ಅಗತ್ಯವಿತ್ತು ಅಥವಾ ಕೆಲಸವು ಆತನಿಗೆ ಬಹಳ ಇಷ್ಟವಾಗಿತ್ತು ಎಂಬ ಕಾರಣಕ್ಕಾಗಿ ಆಗಿರಲಿಲ್ಲ. ಆತನು ಪ್ರೀತಿ ಮತ್ತು ಸಹಾನುಭೂತಿಗಳಿಂದ ಪ್ರಚೋದಿತನಾಗಿದ್ದನು.

*ಬೇರೆಯವರನ್ನು ನಂಬಿಕೆಯಲ್ಲಿ ನೆಲೆಗೊಳಿಸುವದು.* ಥೆಸಲೋನಿಕದ ಸಭೆಯು ಇತ್ತೀಚೆಗಷ್ಟೆ ಸ್ಥಾಪಿಸಲ್ಪಟ್ಟಿತ್ತಾದ್ದರಿಂದ, ಥೆಸಲೋನಿಕದವರು ನಂಬಿಕೆಯಲ್ಲಿ ಇನ್ನೂ ಎಳೆಯವರಾಗಿದ್ದರು. ಅವರನ್ನು ಸ್ಥಿರಗೊಳಿಸಲು, ಅವರನ್ನು ಬಲಗೊಳಿಸಲು, ಮತ್ತು ಅವರನ್ನು ನಂಬಿಕೆಯಲ್ಲಿ ದೃಢೀಕರಿಸಲು ಯಾರಾದರೊಬ್ಬರ ಅಗತ್ಯವಿತ್ತು. ಅವರು ಅನುಸರಿಸಿ ಹೊಗುತ್ತಿದ್ದ ಕ್ರಿಸ್ತನಂಬಿಕೆಯಲ್ಲಿ ಅವರನ್ನು ಗಟ್ಟಿಯಾಗಿ ನೆಲೆಯೂರಿಸುವದಕ್ಕೆ ತಿಮೊಥೆಯನು ಅಪೇಕ್ಷಿಸಿದನು.

*ಬೇರೆಯವರಿಗೆ ಆದರಣೆಯನ್ನು ಬಯಸುವದು.* "ಪ್ರೋತ್ಸಾಹ" ಎಂಬುದಕ್ಕೆ ಬಳಸಲ್ಪಟ್ಟಿರುವ ಗ್ರೀಕ್ ಪದ *παρακαλέω* (*parakaleō*) ಎಂಬುದು, "ಪ್ರಬೋಧನೆ" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. ಅವರು ತಮ್ಮ ಕ್ರಿಸ್ತನಂಬಿಕೆಯ ಕಾರಣದಿಂದಾಗಿ ಬಹಳಷ್ಟು ಸಂಕಟಗಳನ್ನು ಎದುರಿಸುತ್ತಿದ್ದರು, ಮತ್ತು ಅವರಿಗೆ ಆದರಣೆಯ, ಪ್ರೋತ್ಸಾಹ, ಮತ್ತು ಸರಿಯಾದ ರೀತಿಯ ದೃಢೀಕರಿಸುವ ಮಾರ್ಗದರ್ಶನದ ಅಗತ್ಯವಿತ್ತು.

ಆದ್ದರಿಂದ, ತಿಮೊಥೆಯನು ಕಿರುಕುಳಕ್ಕಾಗಿದ್ದ ಮತ್ತು ಕುಸಿದುಹೋಗಿದ್ದಂಥ, ಈಗಾಗಲೇ ಹಿಂಸೆಯೆಂಬ ಬಲಿಷ್ಠವಾದ ಸುತ್ತಿಗೆ ಹಾಗೂ ಖಡ್ಗಗಳ ಗುದ್ದುಗಳಿಂದ

ಹೆದರಿದಂತಾಗಿದ್ದ ಎಳೆಯ ಕ್ರೈಸ್ತರ ಬಳಿಗೆ ಬಂದಿದ್ದನು. ನಂಬಿಕೆಯ ಒಳ್ಳೇ ಹೋರಾಟವನ್ನು ಮುಂದುವರೆಸುವಂತೆ ಅವರನ್ನು ಪ್ರೋತ್ಸಾಹಿಸುವದೇ ತಿಮೊಥೆಯನ ಗುರಿಯಾಗಿತ್ತು. ಹಿರಿಯ ಬೋಧಕರು ಹೀಗೆ ಹೇಳಿರುತ್ತಾರೆ, "ನೆಮ್ಮದಿಯಾಗಿರುವವರನ್ನು ಸಂಕಟಕ್ಕೊಳಪಡಿಸಿರಿ ಮತ್ತು ಸಂಕಟಕ್ಕೊಳಗಾದವರನ್ನು ನೆಮ್ಮದಿಪಡಿಸಿರಿ." ಸ್ಪಷ್ಟವಾಗಿರುವ ಪ್ರಕಾರ, ಸಂಕಟಕ್ಕೊಳಪಡಿಬೇಕಾದ ಅಗತ್ಯವಿದ್ದವರು ತಿಮೊಥೆಯನಿಗೆ ಅಷ್ಟಾಗಿ ಸಿಕ್ಕಲಿಲ್ಲ, ಆದರೆ ಆತನು ನೆಮ್ಮದಿಪಡಿಸಬೇಕಾದ ಅಗತ್ಯವಿದ್ದಂಥ ಸಂಕಟಕ್ಕೊಳಗಾದ ಅನೇಕರಿದ್ದರು. EC

## ಒಂದು ಎಳೆಯ ಸಭೆಯ ವಿಷಯದಲ್ಲಿ ಪೌಲನಿಗಿದ್ದ ಭಯಗಳು (3:5)

ಪೌಲನು 5ನೇ ವಚನದಲ್ಲಿ ಹೀಗೆ ಬರೆದನು, "ಆದದರಿಂದ ನಾನು ಇನ್ನು ತಡೆಯಲಾರದೆ ಒಂದು ವೇಳೆ ಶೋಧಕನು ನಿಮ್ಮನ್ನು ಶೋಧಿಸಿದ್ದರಿಂದ ನಮ್ಮ ಪ್ರಯಾಸವು ವ್ಯರ್ಥವಾಯಿತೋ ಏನೋ ಎಂದು ನಿಮ್ಮ ನಂಬಿಕೆಯ ವಿಷಯದಲ್ಲಿ ತಿಳಿದುಕೊಳ್ಳುವದಕ್ಕೆ ಅವನನ್ನು ಕಳುಹಿಸಿದೆನು." ಥೆಸಲೋನಿಕದವರು ಬಿದ್ದು ಹೋಗುವರೇನೋ ಎಂದು ಪೌಲನಿಗೆ ಚಿಂತೆಯಿತ್ತು. ಅವರು ಕ್ರಿಸ್ತನಲ್ಲಿ ಇನ್ನೂ "ಕೂಸುಗಳು" ಆಗಿದ್ದರು, ಅವರಿಗೆ ಆತ್ಮೀಕ ಹಾಲಿನ ಅಗತ್ಯವಿತ್ತು (ಇಬ್ರಿಯ 5:12). ಆತನಿಗೆ ಅವರ ಮೇಲೆ ತಾಯಿ ಹಾಗೂ ತಂದೆಯ ರೀತಿಯ ಭಾವಗಳಿದ್ದವು (2:7, 11), ಆದರೆ ಅವರು "ಅನಾಥಗೊಳಿಸಲ್ಪಟ್ಟಿದ್ದರು" (2:17). ಅವರು ಎಳೆಯವರು, ಕೈಬಿಡಲ್ಪಟ್ಟವರು, ಮತ್ತು ಹಿಂಸೆಯನ್ನು ಅನುಭವಿಸಿದವರು ಆಗಿದ್ದರು, ಇದರಿಂದಾಗಿ ಅವರು ಸೋತು ಹೋಗಿ ಕ್ರಿಸ್ತನನ್ನು ಬಿಟ್ಟು ವಿಮುಖರಾಗುವದಕ್ಕೆ ಆಸ್ಪದವಿತ್ತು.

ಪೌಲನು ಪ್ರಸ್ತಾಪಿಸಿದ ಶೋಧಕನು "ಸೈತಾನನು" ಆಗಿದ್ದಾನೆ. ಯೇಸುವು ಸೈತಾನನಿಂದ ಶೋಧಿಸಲ್ಪಟ್ಟಿದ್ದನು. ಪೇತ್ರನು ಹೀಗೆ ಬರೆಯುತ್ತಾನೆ, "ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ" (1 ಪೇತ್ರ 5:8). ಈ ಕೆಲಸವನ್ನು ಮಾಡುವದಕ್ಕೆ ಸೈತಾನನು ಮನುಷ್ಯರನ್ನು ಬಳಸುತ್ತಾನೆ (ಅಪೊಸ್ತಲರ ಕೃತ್ಯಗಳು 17:5; 1 ಥೆಸಲೋನಿಕ 2:14). ಈ ಎಳೆಯ ಸಭೆಯವರು ಸೈತಾನನಿಂದ ಮತ್ತು ಆತನ ಹಿಂಬಾಲಕರಿಂದ ದಾಳಿಗೆ ಗುರಿಯಾಗುವದಾದರೆ ಬಲವಾಗಿ ನಿಲ್ಲಲಾರರೇನೋ ಎಂದು ಪೌಲನು ಹೆದರಿದ್ದನು.

ಶೋಧನೆಯು ಸನ್ನಿಹಿತವಾದದ್ದೆಂಬುದನ್ನು ಅರಿತಿದ್ದ ಪೌಲನು, ಥೆಸಲೋನಿಕದವರಿಗೆ ಅವರು "ಸಂಕಟವನ್ನು ಅನುಭವಿಸಲೇಬೇಕೆಂದು" (ವ. 4) ಎಚ್ಚರಿಸಿದ್ದನು ("ಸತತವಾಗಿ ಹೇಳುತ್ತಲೇ ಇದ್ದನು"). ಕೆಲವು ಸಾರಿ ನಮ್ಮ ಸಂಕಟವು ದೈಹಿಕವಾಗಿರುತ್ತದೆ (ನೋಡಿರಿ ಅಪೊಸ್ತಲರ ಕೃತ್ಯಗಳು 16:22; 17:6). ಇನ್ನು ಕೆಲವು ಸಾರಿ ಅದು ಮಾನಸಿಕವಾಗಿರುತ್ತದೆ (ನೋಡಿರಿ ಯೋಹಾನ 15:19). ಅದು ಯಾವ ರೂಪದಲ್ಲಿದ್ದರೂ ಸರಿಯೇ, ಹಿಂಸೆಯಂತೂ ಯಾವಾಗಲೂ ಇರುವಂಥದ್ದೇ: "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು ಮಾಡುವವರೆಲ್ಲರೂ ಹಿಂಸೆಗೊಳಗಾಗುವರು" (2 ತಿಮೊಥೆ 3:12).

ಇಂದು ಸಭೆಯಲ್ಲಿರುವ ಬಹುಪಾಲಿನ ಸದಸ್ಯರು ಪೌಲನಂತೆಯೇ ಇರತಕ್ಕದ್ದು.

ಹೊಸದಾಗಿ ಪರಿವರ್ತನೆಗೊಂಡವರ ಬಗ್ಗೆ ನಾವು ಕಳಕಳಿಯನ್ನು ಹೊಂದಿದ್ದೇವೆ? ನಾವು ಅವರನ್ನು ಪರಿಚಯಿಸಿಕೊಂಡು ಅವರ ಸ್ನೇಹವನ್ನು ಮಾಡಿಕೊಳ್ಳುತ್ತೇವೆ? ನಾವು ಅವರಿಗಾಗಿ ಪ್ರಾರ್ಥಿಸುತ್ತೇವೋ ಮತ್ತು ಅವರಿಗೆ ಬೋಧಿಸುತ್ತೇವೋ? ಥೆಸಲೋನಿಕದವರಿಗಾಗಿ ಪೌಲನು ಕಳಕಳಿಯನ್ನು ಹೊಂದಿದ್ದಂತೆಯೇ ಮತ್ತು ಅವರನ್ನು ಎಚ್ಚರಿಸಿದಂತೆಯೇ, ನಮ್ಮ ಸಭೆಯಲ್ಲಿನ ಹೊಸ ಸದಸ್ಯರಿಗೋಸ್ಕರ ಕಳಕಳಿಯನ್ನು ತೋರಿಸಬೇಕು, ಮಾರ್ಗದರ್ಶನವನ್ನು ನೀಡಬೇಕು ಮತ್ತು ಸಂಕಟಗಳಲ್ಲಿ ಮಧ್ಯದಲ್ಲಿ ಅವರನ್ನು ಪ್ರೋತ್ಸಾಹಿಸಬೇಕು. EE

**ಹಿಂಸೆಯು ಬರುವಾಗ (3:3-5)**

ಪೌಲನು ಅವಸರವಾಗಿ ಥೆಸಲೋನಿಕವನ್ನು ಬಿಟ್ಟು ಹೋದ ಬಳಿಕ, ಹಿಂಸೆಯು ಮುಂದುವರೆದಿತ್ತು. ಎಳೆಯ ಸಭೆಯನ್ನು ಕ್ರೂರವಾದ ವೈರಿಗಳು, ದುಷ್ಟ ಮನುಷ್ಯರಿಂದ ಮುತ್ತಿಗೆ ಹಾಕಲ್ಪಟ್ಟಿದ್ದರು, ಬಹುಶಃ ಅವರು ಕ್ರೈಸ್ತತ್ವವನ್ನು ವಿರೋಧಿಸುತ್ತಿದ್ದ ಯೆಹೂದ್ಯರಾಗಿರಬಹುದು. ಇಂಥ ಸಂಕಟದ ಅಗ್ನಿಗಳಲ್ಲಿ ಸಭೆಯು ಯಾವ ರೀತಿ ನಿಭಾಯಿಸಿಕೊಳ್ಳುತ್ತಿದೆಯೋ ಎಂಬುದರ ಕುರಿತು ಪೌಲನಿಗೆ ಯೋಚಿಸುವದನ್ನು ನಿಲ್ಲಿಸುವದಕ್ಕಾಗಲಿಲ್ಲ ಎಂದು ತೋರುತ್ತದೆ.

ಈ ವಾಕ್ಯಭಾಗದಲ್ಲಿ, ಪೌಲನು ಅವರಿಗೋಸ್ಕರ ಹಿಂಸೆಯ ಅರ್ಥವೇನೆಂಬುದರ ಸಂಕ್ಷಿಪ್ತ ವರ್ಣನೆಯನ್ನು ಮಾಡುವ ಮೂಲಕ ಅವರನ್ನು ಪ್ರೋತ್ಸಾಹಿಸಿದನು. ಅವರು ಎದುರಿಸಿದಂತಹ ಯಾವದೇ ಕಷ್ಟಗಳನ್ನು ನಾವು ಎದುರಿಸುವದಿಲ್ಲವಾದಾಗ್ಯೂ, ನಾವು ಎದುರ್ಗೊಳ್ಳುವಂಥ ವಿಶಿಷ್ಟವಾದ ಒತ್ತಡ ಮತ್ತು ಸಂಕಷ್ಟಗಳಲ್ಲಿ ಜಯಶಾಲಿಗಳಾಗುವ ಹಾಗೆ ಈ ಬೋಧನೆಯು ಸಹಾಯವನ್ನು ಒದಗಿಸುವದು.

*ಹಿಂಸೆಯು ಯೋಜನೆಯ ಒಂದು ಭಾಗ.* ಯಾವದೂ ತನ್ನಷ್ಟಕ್ಕೆ ತಾನೇ ಸಂಭವಿಸುವದಿಲ್ಲ. ಒಂದೋ ದೇವರು ಅದನ್ನು ಸಂಭವಿಸುವಂತೆ ಅನುಮತಿಸುತ್ತಾನೆ, ಇಲ್ಲ ಅದನ್ನು ಸಂಭವಿಸುವಂತೆ ಮಾಡುತ್ತಾನೆ. ಥೆಸಲೋನಿಕದವರು ಹಿಂಸೆಯನ್ನು ಅನುಭವಿಸುವದಕ್ಕೆ "ನೇಮಿಸಲ್ಪಟ್ಟಿದ್ದರು." ಒಂದು ದೇವರು ಮುಗ್ಧ ಮಕ್ಕಳು ಕೊಲ್ಲಲ್ಪಡದಂತೆ ಮಾಡುವ ಮೂಲಕ ತನ್ನ ಮಗನನ್ನು ಈ ಲೋಕದೊಳಗೆ ಬರಮಾಡುವದಕ್ಕಾಗಲಿಲ್ಲವಾದರೆ, ಆತನ ಜನರು ಸೈತಾನನಿಂದ ದಾಳಿಗೆ ತುತ್ತಾಗದೆಯೇ ಈ ರೀತಿಯಾಗಿರುವ ಲೋಕದಲ್ಲಿ ಆತನಿಗೋಸ್ಕರ ಜೀವಿಸುವದಕ್ಕೆ ಶಕ್ತರಾಗುವದಿಲ್ಲ.

ಪೌಲನು ಥೆಸಲೋನಿಕದವರೊಂದಿಗೆ ಇದ್ದ ವೇಳೆ, ಆತನು ಬರಲಿರುವ ಹಿಂಸೆಯ ಕುರಿತಾಗಿ ಮುಂದಾಗಿ ಎಚ್ಚರಿಸಿದನು. ತಾನು ಹೇಳಿದ್ದನ್ನು ಅವರು ಒಂದು ದಿನ ನೆನಪಿಸಿಕೊಳ್ಳುವರು ಎಂಬದಾಗಿ ಹೇಳುತ್ತಾನೆ. ಪೌಲನು ತನ್ನ ಬೋಧನೆಯ ಸೇವೆಯನ್ನು ಮಾಡುವದಕ್ಕಾಗಿ ಹೋದ ಎಲ್ಲಾ ಸ್ಥಳಗಳಲ್ಲಿ, ಸುವಾರ್ತೆಗೆ ವಿರೋಧವು ಉದ್ಭವವಾಗಿತ್ತು. ಆತನು ಹಿಂಸೆಯ ಕುರಿತು ನೀಡಿದ ಉಪದೇಶವು ಬಹುಶಃ ಆತನು ಹೊಸದಾಗಿ ಪರಿವರ್ತನೆಗೊಂಡವರಿಗೆ ಕೊಡುತ್ತಿದ್ದ ರೂಢಿಯಾದ ನಿರ್ದೇಶನವಾಗಿತ್ತು.

*ಹಿಂಸೆಯು ನಮ್ಮನ್ನು ಕದಲುವಂತೆ ಮಾಡಬಾರದು.* ಕ್ರಿಸ್ತನಿಗೋಸ್ಕರ

ಜೀವಿಸಬೇಕೆಂಬ ನಮ್ಮ ಮಹಿಮಾಕರವಾದ ಉದ್ದೇಶವನ್ನು ಬಿಟ್ಟು ಪಕ್ಕಕ್ಕೆ ಹೋಗುವಂತೆ ಮಾಡುವ ಹಾಗೆ ಅವುಗಳಿಗೆ ನಾವು ಅವಕಾಶವನ್ನು ಕೊಡಬಾರದು. 3ನೆ ವಚನದ ವಿಷಯವಾಗಿ, Raymond C. Kelcy ಹೀಗೆ ಬರೆದನು:

> ಅನುವಾದಿಸಲ್ಪಟ್ಟ ಪದದ [ಚಂಚಲರಾಗದೆ] ಎಂಬುದರ ಕ್ರಿಯಾಪದ ರೂಪವು ಮೂಲತಃ "ಹಲ್ಲುಗಿಂಜು," "ಮುಖಸ್ತುತಿ ಮಾಡು," ಅಥವಾ "ಬಾಲ ಅಲ್ಲಾಡಿಸು" ಎಂದು ಅರ್ಥವಾಗಿರುತ್ತದೆ. ನಾಯಿಯು ಸ್ನೇಹವನ್ನು ಅಪೇಕ್ಷಿಸುತ್ತಾ ತನ್ನ ಬಾಲವನ್ನು ಅಲ್ಲಾಡಿಸುವ ರೀತಿಯಲ್ಲಿ, ಕೆಲವೊಬ್ಬ ಸುಳ್ಳು ಬೋಧಕರು ಮುಖಸ್ತುತಿಯೊಂದಿಗೆ, ಕಪಟ ಸ್ನೇಹದ ಮುಖವಾಡದಲ್ಲಿ ಥೆಸಲೋನಿಕದವರನ್ನು ಅವರ ಕ್ರಿಸ್ತನಂಬಿಕೆಯಿಂದ ದೂರಕ್ಕೆ ಕದಲಿಸುವರೋ ಎಂಬ ಭಯವು ಪೌಲನನ್ನು ಕಾಡುತ್ತಿತ್ತು.[21]

ಅವರು ಮುಂದೆ ಬರಲಿದ್ದ ಹಿಂಸೆಗಳಿಂದ ಗೊಂದಲ ಅಥವಾ ವಂಚನೆಗೆ ಒಳಗಾಗಬಾರದಿತ್ತು.

*ದೇವರು ಹಿಂಸೆಗಳೊಳಗಿಂದ ಒಳ್ಳೇದನ್ನು ಬರಮಾಡಬಲ್ಲನು.* ನಾವು ಆತನಿಗಾಗಿ ದೃಢ ತೀರ್ಮಾನವನ್ನು ಬಲಪಡಿಸುವಂತಾಗುವ ಹಾಗೆ ದೇವರು ಸಂಕಷ್ಟಗಳನ್ನು ಬಳಸುವನು. ಬಹಳ ವರ್ಷಗಳ ಹಿಂದೆ ರೈತರು ಹೀಗೆ ಹೇಳಿದ್ದಾರೆ, "ಒಂದು ಪೌಂಡಿನಷ್ಟು ಬೆಣ್ಣೆಯ ಮೇಲೆ ತಿಕ್ಕಿ ನೀವು ಒಂದು ಕೊಡಲಿಯನ್ನು ಹರಿತಗೊಳಿಸಲು ಸಾಧ್ಯವಿಲ್ಲ."

ಎಳೆಯ ಸಭೆಗೆ ಹಿಂಸೆಯು ಬರುವದೆಂದು, ಮತ್ತು ಅದು ಅವರಿಗೆ ಯಾವದೋ ಒಂದು ವಿಧದಲ್ಲಿ ಪ್ರೋತ್ಸಾಹವನ್ನು ಹೊಂದಿಕೊಳ್ಳಲು ಸಹಾಯ ಮಾಡುವದೆಂದು ಪೌಲನಿಗೆ ಗೊತ್ತಿತ್ತು. ಆತನ ಮಾತುಗಳು ನೇರವಾಗಿವೆ: ನಾವು ಹಿಂಸೆಯನ್ನು ಅನುಭವಿಸುವದಕ್ಕಾಗಿ ನೇಮಿಸಲ್ಪಟ್ಟಿದ್ದೇವೆ, ನಮ್ಮ ದಾರಿಯನ್ನು ತಪ್ಪಿಸುವಂತೆ ಅದಕ್ಕೆ ನಾವು ಅವಕಾಶವನ್ನು ಕೊಡಬಾರದು, ಮತ್ತು ಅದರಿಂದ ದೇವರು ಹೊರ ತರಲಿರುವ ಒಳ್ಳೇದನ್ನು ಕಾಣುವವರಾಗಿರಬೇಕು.

ಕ್ರಿಸ್ತನಲ್ಲಿ ನಾವಿಟ್ಟಿರುವ ನಂಬಿಕೆಯು ದಾಳಿಗೆ ಗುರಿಯಾಗುವಾಗ ಈ ಸತ್ಯಗಳನ್ನು ನೆನಪಿಗೆ ತಂದುಕೊಳ್ಳೋಣ. EC

## ಸಹೋದರರಿಗೋಸ್ಕರ ಕಳಕಳಿ (3:1-8)

ಒಬ್ಬ ಭೂಲೋಕದ ಕುಟುಂಬದಲ್ಲಿ ಒಂದು ವಿಜಯವಾಗಲಿ ಅಥವಾ ಒಂದು ದುರಂತವಾಗಲಿ ಸಂಭವಿಸುವದಾದರೆ ಅದು ತಕ್ಷಣದ ಆಸಕ್ತಿ ಮತ್ತು ಭಾವನಾತ್ಮಕ ಪ್ರತಿಕ್ರಿಯೆಯ ಮೂಲವಾಗುತ್ತದೆ. ಸಾಮಾನ್ಯವಾಗಿ, ಕುಟುಂಬ ಸದಸ್ಯರು ಒಬ್ಬ ವ್ಯಕ್ತಿಗೆ ಜೀವಿತ ಕಾಲವೆಲ್ಲಾ ಒಂದು ಕಳಕಳಿಯಾಗಿ ಉಳಿಯುತ್ತಾರೆ. ಇದು ನಮ್ಮಲ್ಲಿ ಒಬ್ಬನೂ ಸಹ ನಿರ್ಲಕ್ಷಿಸಲಾರದಂಥ ಕಳಕಳಿಯಾಗಿರುತ್ತದೆ.

ದೇವರು ಸಭೆಯನ್ನು ವರ್ಣಿಸುವದಕ್ಕೆ ಬಯಸಿದ್ದಾಗ, ಆತನು ತನ್ನ ಹಿಂಬಾಲಕರ ಸಂಬಂಧ ಮತ್ತು ಮನೋಭಾವಗಳನ್ನು ಬಣ್ಣಿಸುವದಕ್ಕೆ ಕುಟುಂಬವನ್ನು ಒಂದು ಸೂಕ್ತವಾದ ಹೋಲಿಕೆಯಾಗಿ ಆರಿಸಿಕೊಂಡನು. ಈ ಕಾರಣಕ್ಕಾಗಿ, ಕುಟುಂಬ ಸಂಬಂಧಗಳನ್ನು

ಅನ್ವಯಿಸಿಕೊಳ್ಳುವದರ ಮೂಲಕ ಕ್ರಿಸ್ತನಲ್ಲಿ ನಮ್ಮ ಸಹೋದರರು ಹಾಗೂ ಸಹೋದರಿಯರ ವಿಷಯದಲ್ಲಿ ನಾವು ಹೇಗೆ ಯೋಚನೆ, ಅನಿಸಿಕೆ, ಮತ್ತು ಕ್ರಿಯೆ ಮಾಡಬೇಕೆಂಬುದರ ವಿಷಯದಲ್ಲಿ ಬಹಳಷ್ಟನ್ನು ಕಲಿತುಕೊಳ್ಳಬಹುದಾಗಿದೆ.

3ನೇ ಅಧ್ಯಾಯವು ಮೊದಲ ಎರಡು ಅಧ್ಯಾಯಗಳಲ್ಲಿನ ಯೋಚನೆಗಳನ್ನು ಮುಂದುವರೆಸುತ್ತದೆ, ಪೌಲ, ಸೀಲ, ಮತ್ತು ತಿಮೊಥೆಯರು ಅವರ ಮಾಜಿ ವಿದ್ಯಾರ್ಥಿಗಳೊಂದಿಗೆ ಹೊಂದಿದ್ದ ಒಡನಾಟವನ್ನು ಜ್ಞಾಪಿಸುವದಾಗಿರುತ್ತದೆ. ವಿಗ್ರಹಾರಾಧಕ ಜನಾಂಗಕ್ಕೆ ಸೇರಿದ ಥೆಸಲೋನಿಕದವರು ತಮ್ಮ ಕ್ರೈಸ್ತ ಜೀವಿತಗಳನ್ನು ಆರಂಭಿಸಿದ್ದ ವಿಧಕ್ಕಾಗಿ ಅವರು ಕೃತಜ್ಞತಾಸ್ತುತಿಯನ್ನು ಮಾಡುವ ಪ್ರಕಾರವೇ, ಅವರ ಈಗಿನ ಯೋಗಕ್ಷೇಮ ಬಗ್ಗೆ ಸಹ ಬೋಧಕರು ಚಿಂತಿತರಾಗಿದ್ದರು. ಆ ಕಳಕಳಿಯು ಏಕೆ ಅಷ್ಟೊಂದು ಆಳವಾಗಿತ್ತು? ಬೋಧಕರು ಈ ಹೊಸ ಕ್ರೈಸ್ತರನ್ನು ತಮ್ಮ ಸ್ವಂತ ಕುಟುಂಬದ ಭಾಗವಾಗಿ ಭಾವಿಸಿಕೊಂಡಿದ್ದರು ಯಾಕೆಂದರೆ ಅವರು ಈಗ ದೇವರ ಕುಟುಂಬದ ಭಾಗವಾಗಿದ್ದರು.

3:1-8ರಲ್ಲಿ ವ್ಯಕ್ತಗೊಳಿಸಲ್ಪಟ್ಟಿರುವಂಥ ಆಸಕ್ತಿಯ ಬಗ್ಗೆ ಅಧ್ಯಯನ ಮಾಡುವಾಗ, ನಾವು ದೇವರ ಕುಟುಂಬದ ಕುರಿತು ಎಷ್ಟು ಕಳಕಳಿಯುಳ್ಳವರಾಗಿರಬೇಕು ಎಂಬುದನ್ನು ಕಲಿಯಬಹುದಾಗಿದೆ. ನಮ್ಮ ಆತ್ಮೀಕ ಸಹೋದರರು ಮತ್ತು ಸಹೋದರಿಯ ಕುರಿತ ಕಳಕಳಿಯನ್ನು ನಾವು ಹೇಗೆ ವ್ಯಕ್ತಪಡಿಸಬಲ್ಲೆವು?

*ಸಂಪರ್ಕವನ್ನು ಕಾಪಾಡಿಕೊಳ್ಳಿರಿ (3:1, 2).* ನಾವು ನಮ್ಮ ಕುಟುಂಬದ ಸದಸ್ಯರನ್ನು ತೊರೆದು ದೂರ ಹೋಗುವಾಗ ಅಥವಾ ಅವರು ನಮ್ಮನ್ನು ಬಿಟ್ಟು ಹೋಗುವಾಗ, ಅವರಲ್ಲಿ ನಮ್ಮ ಆಸಕ್ತಿಯು ಮುಂದುವರೆಯುತ್ತದೆ. ಅನೇಕ ಸಂದರ್ಭಗಳಲ್ಲಿ ಅವರು ಒಂದು ದೊಡ್ಡ ಚಿಂತೆಯಾಗುತ್ತಾರೆ; ನಾವು ಒಬ್ಬರಿಂದೊಬ್ಬರು ದೂರವಾಗಿರುತ್ತೇವಾದ್ದರಿಂದ, ನಾವು ಬಯಸುವ ರೀತಿಯಲ್ಲಿ ಅವರಿಗೆ ಸಹಾಯವನ್ನು ಮಾಡುವದಕ್ಕೆ ಶಕ್ತಿಯಿಲ್ಲದವರಂತಾಗುತ್ತೇವೆ. ಅದೇ ರಿತಿಯಲ್ಲಿಯೇ, ನಾವು ನಮ್ಮ ಸಹೋದರರ ಜೊತೆಯಲ್ಲಿದ್ದರೂ ಸರಿಯೇ ಅಥವಾ ಅವರಿಂದ ದೂರವಾಗಿದ್ದರೂ ಸರಿಯೇ, ಅವರ ಹಿತದ ಬಗ್ಗೆ ಚಿಂತೆಯನ್ನು ಹೊಂದಿರಬೇಕು.

ಥೆಸಲೋನಿಕದಲ್ಲಿ ಯೆಹೂದ್ಯರ ಕೈಯಲ್ಲಿ ಕ್ರೈಸ್ತರ ಬೋಧಕರಿಗೆ ಕಿರುಕಳ ಉಂಟಾದದ್ದರ ಕುರಿತಾಗಿ ಅಪೊಸ್ತಲರ ಕೃತ್ಯಗಳು 17ನೇ ಅಧ್ಯಾಯದಲ್ಲಿ ದಾಖಲಾಗಿರುತ್ತದೆ. ಈ ಯೆಹೂದ್ಯರು ಬೆರೋಯದ ತನಕ ಪೌಲ ಮತ್ತು ಇತರರನ್ನು ಬೆನ್ನತ್ತಿಕೊಂಡು ಬಂದು ಅಲ್ಲಿ ಗದ್ದಲವನ್ನು ಎಬ್ಬಿಸಿದರು. ಪೌಲನ ಮೇಲೆ ತಮಗಿದ್ದ ಕಳಕಳಿಯ ಕಾರಣದಿಂದ, ಸಹೋದರರು ಆತನನ್ನು ಅಥೇನೆಗೆ ಕರೆದೊಯ್ಯದರು, ಆತನು ತನ್ನ ಜೊತೆಗೆಲಸದವರಿಂದ ಬೇರ್ಪಟ್ಟು ಏಕಾಂಗಿಯಾಗಿ ಅಲ್ಲಿ ಉಳಿದನು.

ಹಿಂದಿನ ಎರಡು ಪಟ್ಟಣಗಳಿಂದ ಪಲಾಯನ ಮಾಡಿ ಈಗ ಒಂದು ಪರಿಚಯವಿಲ್ಲದ ಪಟ್ಟಣದಲ್ಲಿ ಏಕಾಂಗಿಯಾಗಿದ್ದ ಪೌಲನು ತನ್ನ ಸ್ವಂತ ಹಿತಾಸಕ್ತಿಯ ಬಗ್ಗೆ ಚಕಿತನಾಗಿರಬೇಕು ಮತ್ತು ತನ್ನ ಸ್ವಂತ ಭದ್ರತೆ ಮತ್ತು ಆದರಣೆಗಾಗಿ ಜೊತೆಗೆಲಸದವರು ಬಂದು ಪುನಃ ಆತನನ್ನು ಸೇರಿಕೊಳ್ಳುವದನ್ನೇ ಹೊರತು ಬೇರೆ ಇನ್ನೇನೂ ಆತನಿಗೆ ಸಂತೋಷವನ್ನು

ಕೊಟ್ಟಿರಲಾರದಾಗಿತ್ತು. ಹೇಗೂ, ಆತನ ಮುಖ್ಯವಾದ ಕಳಕಳಿಯು ಹಗೆತನದಿಂದ ಕೂಡಿದ ಯೆಹೂದಿ ಮತಾಭಿಮಾನಿಗಳಿಂದ ಸುತ್ತುವರೆದಿದ್ದ ಥೆಸಲೋನಿಕದಲ್ಲಿನ ಎಳೆಯ ಸಭೆ ಕುರಿತಾಗಿತ್ತು.

ತಿಮೊಥೆಯನು ದೇವರ ಜೊತೆಗೆಲಸದವನು ಮಾತ್ರವಲ್ಲದೆ ತನ್ನ ಜೊತೆಗೆಲಸದವನೆಂಬುದನ್ನು ಗ್ರಹಿಸಿಕೊಂಡವನಾಗಿ, ಪೌಲನು ತಿಮೊಥೆಯನನ್ನು ಥೆಸಲೋನಿಕದವರ ಮಧ್ಯದಲ್ಲಿ ದೇವರ ಕೆಲಸವನ್ನು ಪೂರ್ಣಗೊಳಿಸುವದಕ್ಕೆ-"ನಿಮ್ಮನ್ನು ದೃಢಪಡಿಸುವದಕ್ಕೂ ನಿಮ್ಮ ನಂಬಿಕೆಯ ವೃದ್ಧಿಗಾಗಿನ ಪ್ರಬೋಧಿಸುವದಕ್ಕೂ" (3:1, 2)- ಕಳುಹಿಸಿ ಕೊಟ್ಟನು. ತಿಮೊಥೆಯನು, ತನ್ನ ಸಹೋದರನಾಗಿ ಈ ಎಳೆಯ ಕ್ರೈಸ್ತರ ಕುರಿತಾಗಿ ತನಗಿರುವ ಕಳಕಳಿಯನ್ನು ಹಂಚಿಕೊಳ್ಳುವನೆಂಬುದನ್ನು ಪೌಲನು ಬಲ್ಲವನಾಗಿದ್ದನು. ಫಿಲಿಪ್ಪಿ 2:20ರಲ್ಲಿ ಪೌಲನು ತಿಮೊಥೆಯನನ್ನು "ಅವನ ಹಾಗೆ ನಿಮ್ಮ ಕಾರ್ಯಗಳನ್ನು ಕುರಿತು ಯಥಾರ್ಥವಾಗಿ ಚಿಂತಿಸುವವರು . . . ಯಾರೂ ಇಲ್ಲ" ಎಂದು ಬಣ್ಣಿಸುತ್ತಾನೆ.

ಪೌಲನು ಕಾರ್ಯಮಾಡುವ ವಿಧಾನವು ಸಭೆಗಳನ್ನು ಸ್ಥಾಪಿಸುವದಕ್ಕಾಗಿ ಪಟ್ಟಣಗಳಿಗೆ ಭೇಟಿ ಕೊಡುವದು ಮಾತ್ರವೇ ಆಗಿರಲಿಲ್ಲ, ಆದರೆ ಪತ್ರಿಕೆಗಳನ್ನು ಬರೆಯುವ ಮೂಲಕ ಅಥವಾ ಸ್ವತಃ ಇಲ್ಲವೆ ಬೇರೆಯವರ ಮೂಲಕ ಭೇಟಿ ಮಾಡುವ ಮೂಲಕ ಹೊಸದಾಗಿ ಪರಿವರ್ತನೆಗೊಂಡವರನ್ನು ಸತತವಾಗಿ ಭಕ್ತಿವೃದ್ಧಿಗೊಳಿಸುವವನಾಗಿ ಅವರೊಂದಿಗೆ ಸಂಪರ್ಕದಲ್ಲಿರುವದು ಸಹ ಆಗಿತ್ತು. ಸಭೆಗಳನ್ನು, ಅನೇಕ ಸಾರಿ ಕಠಿಣ ಪರಿಸ್ಥಿತಿಗಳಲ್ಲಿ, ಸ್ಥಾಪಿಸುವದು ಮತ್ತು ಕಾಪಾಡಿಕೊಂಡು ಹೋಗುವದು ಹೇಗೆಂಬದರ ಬಗ್ಗೆ ಹೊಸ ಒಡಂಬಡಿಕೆ ಪತ್ರಿಕೆಗಳು ಬೆಲೆಯುಳ್ಳ ಪಾಠಗಳನ್ನು ಕಲಿಸುತ್ತವೆ.

ಲೋಕದ ವಿರುದ್ಧ ಎಳೆಯ ಸಭೆಗಳಿಗಿರುವ ಹೋರಾಟದಲ್ಲಿ ಅವರಿಗೆ ಸಹಾಯವನ್ನು ಒದಗಿಸುವದಕ್ಕಾಗಿ ಪ್ರಯಾಣವನ್ನು ಮಾಡುವದಕ್ಕೆ ಮನಸ್ಸಿರುವಂಥ ಸಹೋದರರನ್ನು ಹೊಂದಿರುವದು ಎಂಥ ಆಶೀರ್ವಾದ! ನಾವು ಸಹೋದರರಿಂದ ಬೇರ್ಪಟ್ಟಿರುವ ವೇಳೆ ಅವರ ಆತ್ಮೀಕ ಪ್ರಗತಿಯಲ್ಲಿ ಸಹಾಯ ಮಾಡುತ್ತಾ ಅವರ ಮಧ್ಯದಲ್ಲಿ ಒಲವು ಹೊಂದಿರುವ ಕೆಲಸಗಾರರಿರುವದು ಎಂಥ ಆಶೀರ್ವಾದ! ಸ್ವಲ್ಪ ಕಾಲ ಭೇಟಿ ಮಾಡಿ ಬೇರೆ ಸ್ಥಳಗಳಿಗೆ ಹೋಗುವಾಗಲೂ ಪತ್ರಿಕೆಗಳ ಮೂಲಕ ಸಂದೇಶಗಳನ್ನು ಬರೆದು ಕಳುಹಿಸಿ ಮತ್ತು ಸಹೋದರರನ್ನು ವೃದ್ಧಿಪಡಿಸುವಂತೆ ಹೋಗಿ ಭೇಟಿಮಾಡಬೇಕೆಂದು ಬೇರೆಯವರಿಗೆ ಪ್ರೋತ್ಸಾಹವನ್ನು ಮಾಡುವ ಸಹೋದರರನ್ನು ಹೊಂದಿರುವದು ಎಂಥ ಆಶೀರ್ವಾದ!

*ವಿರೋಧವನ್ನು ನಿರೀಕ್ಷಿಸಬೇಕೆಂದು ಬೇರೆಯವರಿಗೆ ಎಚ್ಚರಿಸಿರಿ (3:3, 4).* ಥೆಸಲೋನಿಕದವರು ಕ್ರೈಸ್ತರಾದಾಗ, ದೇವರನ್ನು ವಿರೋಧಿಸುವವರಿಂದ ವಿರೋಧವನ್ನು ಎದುರು ನೋಡಬೇಕೆಂದು ಅವರಿಗೆ ಹೇಳಲಾಯಿತು. ಅವರು ಸತ್ಯ ದೇವರನ್ನು ತೊರೆದು ಬಿಡುವಂತೆ ಮಾಡುವದಕ್ಕಾಗಿ ಸೈತಾನನು ಸಂಘಟಿಸಲಿದ್ದ ವಿರೋಧಕ್ಕೆ ತಮ್ಮನ್ನು ಸಿದ್ಧಮಾಡಿಕೊಳ್ಳುವಂತೆ ಈ ಜನರಿಗೆ ಪೌಲ, ಸೀಲ, ಮತ್ತು ತಿಮೊಥೆಯರು ಮಾಡಿದ ಬೋಧನೆಯು ಸಹಾಯವಾಗಿತ್ತು. ಈ ಬೋಧನೆಯು ಅವರ ಪರಿವರ್ತನೆಯ ನಂತರದಲ್ಲಿ ಬಂದ ಹಿಂಸೆಗೆ ಅವರನ್ನು ಸಿದ್ಧಗೊಳಿಸಿತ್ತು. ಈ ಪತ್ರಿಕೆಯು ತಮ್ಮ ಬೋಧನೆಯ ಬಗ್ಗೆ ಕ್ರೈಸ್ತರಿಗೆ ಜ್ಞಾಪಕಗೊಳಿಸಿತು. ವಿರೋಧವನ್ನು ಎದುರುನೋಡಬೇಕೆಂಬದಾಗಿ ಅವರಿಗೆ

ತಿಮೊಥೆಯನು ಸಹ ಹೇಳಿದ್ದನೆಂಬುದರಲ್ಲಿ ಸಂಶಯವಿಲ್ಲ (3:3, 4).

ಬಹುಶಃ ನಾವು ಜನರಿಗೆ ಕ್ರೈಸ್ತರಾಗುವ ಕುರಿತಾಗಿ ಉಪದೇಶಿಸುವ ವೇಳೆ, ಅವರಿಗೆ ತಾವು ತೊರೆದು ಬರುವಂಥ ದುಷ್ಟ ಶಕ್ತಿಗಳು ಅವರಿಗೆ ವಿರೋಧಿಯಾಗಿರುತ್ತವೆಂಬುದನ್ನು ಕಲಿಸುವದಕ್ಕೆ ನಾವು ವಿಫಲರಾಗುತ್ತೇವೆ. ಅವರು ಸೈತಾನನ ಸೇವಕರಿಂದ ದಾಳಿಗಳನ್ನು ಅನುಭವಿಸುವರು. ಈ ದಾಳಿಗಳು ನಿರುತ್ಸಾಹಗೊಳಿಸುವದು, ಅಪಹಾಸ್ಯ, ಬಹಿಷ್ಕಾರ, ದೈಹಿಕ ಕಿರುಕಳ, ಆರೋಪಗಳು, ಅಥವಾ ದೇವರ ದಾರಿಯಲ್ಲಿ ಪ್ರತಿಕೂಲತೆಗಳಿರುತ್ತವೆ ಮತ್ತು ಸೈತಾನನ ದಾರಿಯಲ್ಲಿ ಆಕರ್ಷಣೆಗಳಿರುತ್ತವೆಂದು ಹೇಳಿ ಕೊಡುವದು ಇತ್ಯಾದಿ ರೂಪದಲ್ಲಿರಬಹುದಾಗಿದೆ.

ಬೇರೆಯವರನ್ನು ಮೆಚ್ಚಿಸಬೇಕೆಂಬುದಕ್ಕಾಗಿ ಜನರು “ಪರಿವರ್ತನೆ” ಗೊಳ್ಳುವದಾದಲ್ಲಿ, ಶೀಘ್ರದಲ್ಲೆ ಅವರು ಸೈತಾನನ ಸೇವಕರು ಬಹುಸಂಖ್ಯಾತರಾಗಿದ್ದಾರೆಂಬುದನ್ನು ಗ್ರಹಿಸಿ ಕೊಂಡ ಹಾಗೆ ತಮ್ಮ ನಂಬಿಗಸ್ತಿಕೆಯ ವಿಷಯದಲ್ಲಿ ಒಂದು ಗಂಭೀರವಾದ ಸವಾಲನ್ನು ಎದುರಿಸುವವರಾಗುತ್ತಾರೆ. ಅವರು ದೇವರೊಬ್ಬನನ್ನೇ ಮೆಚ್ಚಿಸಬೇಕೆಂಬುದಕ್ಕಾಗಿ ಪರಿವರ್ತನೆಗೊಂಡಿದ್ದಲ್ಲಿ, ಅವರ ಮೇಲೆ ಪ್ರಭಾವವನ್ನು ಬೀರುವಂತೆ ಬೇರೆ ಜನರನ್ನು ಸೈತಾನನು ಬಳಸುವಾಗ, ಅವರು ದೇವರ ಮೇಲೆ ಹೆಚ್ಚು ಅವಲಂಭಿತರಾದಂತೆ ಅವರ ನಂಬಿಕೆಯು ಇನ್ನಷ್ಟು ಬಲಗೊಳ್ಳಬಲ್ಲದು. 2ನೇ ಅಧ್ಯಾಯದಲ್ಲಿ ಬರಹಗಾರನು ಮನುಷ್ಯರನ್ನು ಮೆಚ್ಚಿಸುವದಕ್ಕಿಂತಲೂ ದೇವರನ್ನೇ ಮೆಚ್ಚಿಸುವ ಬಗ್ಗೆ ಒತ್ತಿ ಹೇಳಿದಂತ ವಿಧಾನದ ಜ್ಞಾನವೇನೆಂಬುದನ್ನು ಇದು ತೋರಿಸಿ ಕೊಡುತ್ತದೆ (2:4). ಕ್ರೈಸ್ತ ಬೋಧಕರು ತಾವು ಸುವಾರ್ತೆಯ ಪಾತ್ರೆಗಳು ಮತ್ತು ದೇವರ ಸೇವಕರು ಎಂಬ ಯೋಚನೆಯನ್ನು ಒತ್ತಿ ಹೇಳಬೇಕು, ಮತ್ತು ತಮಗೆ ಹಿಂಬಾಲಕರನ್ನು ಏರ್ಪಡಿಸಿಕೊಳ್ಳುವದಕ್ಕೆ ಅಪೇಕ್ಷೆ ಪಡದವರಾಗಿರಬೇಕು. ಬೋಧಕರ ನಡವಳಿಕೆಯು ಮೆಚ್ಚಿಕೆಯಾಗುವಂಥದ್ದು ಮತ್ತು ಆಕರ್ಷಕವಾದದ್ದು ಆಗಿರಬಹುದಾದಾಗ್ಯೂ, ಅವರು ನಡವಳಿಕೆಗೆ ಪ್ರೇರಣೆಯು ದೇವರ ಕೃಪೆಯೇ ಆಗಿರುತ್ತದೆ, ಮತ್ತು ಭಕ್ತಿಯುಳ್ಳ ನಡವಳಿಕೆಗೊಂದು ಸತ್ಯವಾದ ಉದಾಹರಣೆಯೆಂದರೆ ಯೇಸುವೇ.

*ಇತರರ ನಂಬಿಕೆಯ ವಿಷಯದಲ್ಲಿ ವಿಚಾರಿಸಿ ತಿಳಿದುಕೊಳ್ಳಿರಿ (3:5).* ನಾವು ಸ್ವಾಭಾವಿಕವಾಗಿಯೇ ನಮ್ಮ ಸ್ವಂತ ಕುಟುಂಬಗಳ ಮತ್ತು ದೇವರ ಕುಟುಂಬ ಸದಸ್ಯರ ಸುರಕ್ಷತೆಯ ಕುರಿತು ಚಿಂತೆ ಹೊಂದಿರುತ್ತೇವೆ. ಅದಕ್ಕಿಂತ ಪ್ರಾಮುಖ್ಯವಾದದ್ದೆಂದರೆ ಅವರ ಆತ್ಮೀಕ ಸುರಕ್ಷತೆ, ಅವರ ಆತ್ಮಗಳ ಕುರಿತ ನಿತ್ಯವಾದ ಹಿತಾಸಕ್ತಿ ಆಗಿದೆ.

ಹೊಸದಾಗಿ ಕ್ರೈಸ್ತರಾಗಿದ್ದ ಥೆಸಲೋನಿಕದವರಿಂದ ತಾನು ಬೇರ್ಪಡಿಸಲ್ಪಟ್ಟಾಗ, ಪೌಲನು ತನ್ನ ಸ್ವಂ ದೈಹಿಕ ಸುರಕ್ಷತೆಯ ಬಗ್ಗೆ ಅಲ್ಲ, ಆದರೆ ಹೊಸ ಕ್ರೈಸ್ತರ ಆತ್ಮಗಳ ವಿಷಯದಲ್ಲಿ ಹೆದರಿದ್ದನು. ಅವರು ಹೇಗಿರುತ್ತಾರೋ ಎಂದು ಚಕಿತಗೊಳ್ಳುವದನ್ನು ಆತನಿಂದ ತಾಳಿಕೊಳ್ಳಲಾಗಲಿಲ್ಲ, ಆದ್ದರಿಂದ ಅವರಿಗೆ ಸಹಾಯ ಮಾಡಿ ಅವರ ಆತ್ಮೀಕ ಪರಿಸ್ಥಿಯು ಹೇಗಿರುತ್ತದೆಂಬ ನಿಖರವಾದ ಸುದ್ದಿಯನ್ನು ತೆಗೆದುಕೊಂಡು ಬರುವಂತೆ ತಿಮೊಥೆಯನನ್ನು ಕಳುಹಿಸಿದನು. ಆತನು ಈ ಕ್ರೈಸ್ತರ ವಿಷಯದಲ್ಲಿ ತಿಳಿದುಕೊಳ್ಳಬೇಕೆಂದು ಬಯಸಿದನು!

ದೇವರ ಮುಂದೆ ನಮಗೆ ಇತರ ಆತ್ಮಗಳ ಹಿತಾಸಕ್ತಿಯ ಕುರಿತಾ ಈ ಮನೋಭಾವವು ಇರುತ್ತದೋ? ಅದನ್ನು ಕಂಡು ಹಿಡಿಯುವಂತೆ ಜನರನ್ನು ಕೇಳಿಕೊಳ್ಳುತ್ತೇವೋ? ಬೇರೆಯವರ ಹಿತಾಸಕ್ತಿಯು ನಮ್ಮ ದೊಡ್ಡ ಕಳಕಳಿಯಾಗಿದೆ ಎಂಬುದನ್ನು ಅವರಿಗೆ ವ್ಯಕ್ತಪಡಿಸುತ್ತೇವೋ? ಒಬ್ಬ ಜೊತೆಯ ಕ್ರೈಸ್ತನು ನನ್ನ ನಂಬಿಕೆ ಮತ್ತು ನನ್ನ ಕುಟುಂಬ ಅಥವಾ ಈ ಸಭೆಯ ನಂಬಿಕೆಯ ಕುರಿತಾಗಿ ವಿಚಾರಿಸುವದಕ್ಕಾಗಿ ಯಾರೋ ಒಬ್ಬರನ್ನು ಕಳುಹಿಸಿ ಕೊಡುವದಾದರೆ ಅದು ಎಷ್ಟೊಂದು ಪ್ರೋತ್ಸಾಹವನ್ನು ಒದಗಿಸುವದು!

*ಶುಭವರ್ತಮಾನವನ್ನು ಹಂಚಿಕೊಳ್ಳಿರಿ (3:6-8).* ಕುಟುಂಬ ಸದಸ್ಯರ ಕುರಿತ ಶುಭ ಸುದ್ಧಿಯು ನಮಗೊಂದು ದೊಡ್ಡ ಪ್ರೋತ್ಸಾಹವನ್ನು ತರುತ್ತದೆ. ಅದು ಎಂದಿಗೂ ಸುದ್ದಿ ಪತ್ರಿಕೆಗಳಲ್ಲಿ ಬರುವದಿಲ್ಲ, ಆದರೆ ಅದರ ಕುರಿತು ದೇವರು ಬಲ್ಲವನಾಗಿರುತ್ತಾನೆ ಮತ್ತು ಮಾನವ ಬಂಧುಗಳ ಜೊತೆಗೂಡಿ ಆತನು ಸಂತೋಷಿಸುತ್ತಾನೆ. ಆತ್ಮೀಕ ನಂಬಿಗಸ್ತಿಕೆ ಮತ್ತು ಪ್ರಗತಿಯಂತಹ ಸುದ್ದಿಗಳೇ ನಾವು ಹೆಚ್ಚು ಅಮೂಲ್ಯವೆಂದೆಣಿಸುತ್ತೇವೆ. ಅಲ್ಲವೇ?

ತಿಮೊಥೆಯನು ಶುಭಸುದ್ಧಿಯನ್ನು-ದೊಡ್ಡ ಸುದ್ದಿಯನ್ನು-ತೆಗೆದುಕೊಂಡು ಥೆಸಲೋನಿಕದಿಂದ ಹಿಂದಿರುಗಿದನು! ಸಹೋದರರೊಳಗೆ ನಂಬಿಕೆ ಮತ್ತು ಪ್ರೀತಿಗಳು ವೃದ್ಧಿಯಾಗುತ್ತಿದ್ದವು! ಅವರ ಬೋಧಕರು ಥೆಸಲೋನಿಕದವರನ್ನು ಜ್ಞಾಪಕ ಮಾಡಿಕೊಳ್ಳುತ್ತಲೇ ಇದ್ದ ಹಾಗೆಯೇ, ಅವರು ಸಹ ತಮ್ಮ ಬೋಧಕರನ್ನು ಜ್ಞಾಪಕಮಾಡಿಕೊಳ್ಳುತ್ತಿದ್ದರು! ಈ ಶುಭಸುದ್ಧಿಯು ತಾವು ಎದುರಿಸುತ್ತಿದ್ದ ವಿರೋಧ ಮತ್ತು ಹಿಂಸೆಗಳ ಮಧ್ಯದಲ್ಲಿ ಪೌಲ ಮತ್ತು ಆತನ ಜೊತೆಗೆಲಸದವರಿಗೆ ಬಹಳವಾಗಿ ಆದರಣೆಯನ್ನುಂಟು ಮಾಡಿತ್ತು.

ಅಪೊಸ್ತಲರು ಥೆಸಲೋನಿಕದವರ ಸಂಕಟಗಳನ್ನು ತಾವೂ ಹಂಚಿಕೊಂಡವರಾಗಿದ್ದರು, ಆದರೆ ದೇವರು ನಂಬಿಕೆ ಹಾಗೂ ಪ್ರೀತಿಯ ಮೂಲಕ ಕೊಡುವಂಥ ಆದರಣೆಯನ್ನು ಸಹ ಅವರು ಹಂಚಿಕೊಂಡಿದ್ದರು. ಕ್ರೈಸ್ತರು ತಮಗೆ ಕಷ್ಟ, ವೇದನೆ, ಮತ್ತು ಹತಾಶೆಗಳನ್ನುಂಟು ಮಾಡುವಂಥ ತೊಂದರೆಗಳನ್ನು ಅನುಭವಿಸುವರೆಂಬದು ದೇವರಿಗೆ ಗೊತ್ತಿದೆ. ಸಂಕಟಕ್ಕೊಳಗಾದ ಆತ್ಮಗಳಿಗೆ ನಂಬಿಕೆ ಮತ್ತು ಪ್ರೀತಿಗಳು ಆಸರೆಯಾಗಬಲ್ಲವು ಮತ್ತು ಅಂಥ ತೊಂದರೆಯ ಸಮಯಗಳನ್ನು ಅವರನ್ನು ಮುನ್ನಡೆಸಬಲ್ಲವೆಂಬುದನ್ನು ದೇವರು ಬಲ್ಲವನಾಗಿದ್ದಾನೆ. ದೇವರಲ್ಲಿ ನಂಬಿಕೆಯು ಕಡಿಮೆಯಾಗುವದಾದರೆ ಅದು ಅಭದ್ರತೆ ಮತ್ತು ಹತಾಶೆ ಉಂಟು ಮಾಡಬಲ್ಲದು. ಪ್ರೀತಿಯ ಕೊರತೆಯು ಏಕಾಂಗತೆ ಮತ್ತು ನಿರಾಶೆಗೆ ನಡಿಸಬಲ್ಲದು.

ದೇವರಲ್ಲಿ ವಿಶ್ವಾಸವಿಡುವಂತೆ ಜನರಿಗೆ ಸಹಾಯ ಮಾಡುವದು ಒಂದು ಬೆಲೆಯುಳ್ಳ ಕೆಲಸವಾಗಿದ್ದು ಅದು ಒಂದು ಅನಿಶ್ಚಿತತೆಯ ಲೋಕದಲ್ಲಿ ಜೀವಿಸುವ ಜನರಿಗೆ ನಿರೀಕ್ಷೆಯನ್ನು ಒದಗಿಸುತ್ತದೆ. ದೇವರನ್ನು ಮತ್ತು ಇತರರನ್ನು ಪ್ರೀತಿಸುವಂತೆ ಜನರಿಗೆ ಸಹಾಯ ಮಾಸುವಂಥದ್ದು ಅವರ ಆತ್ಮಗಳನ್ನು ವಿನೂತನಗೊಳಿಸಿ ಪ್ರಯೋಜನಕರ ಜೀವಿತಗಳನ್ನುಂಟು ಮಾಡಬಲ್ಲದು. ಇದನ್ನು ನಮ್ಮ ಕ್ರೈಸ್ತ ಚಟುವಟಿಕೆಗಳ ಒಂದು ಭಾಗವಾಗಿ ಮಾಡಿಕೊಳ್ಳುವದರಿಂದ ಅದು ಬೆಲೆಯುಳ್ಳ, ಜೀವಿತಗಳನ್ನು, ಆರೋಗ್ಯಕರ ಕುಟುಂಬಗಳನ್ನು, ಮತ್ತು ಬಲವಾದ ಸಭೆಗಳನ್ನು ಕಟ್ಟಬಲ್ಲದು.

ಬೇರೆಯವರ ಕುರಿತಾಗಿ ಶುಭಸುದ್ದಿಯನ್ನು ಕೇಳಿದ್ದು ಅಥೇನೆಯಲ್ಲಿದ್ದ ಪೌಲ ಮತ್ತು ಆತನ ಜೊತೆಗೆಲಸದವರಿಗೆ ಉತ್ಸಾಹಕರವಾಗಿತ್ತು! ಆತನು ಹೀಗೆ ಹೇಳಿದನು, ಈಗ "ನಮಗೆ ಜೀವಕಳೆ" (3:8). ಇದು ನಿಜಕ್ಕೂ "ಜೀವಕಳೆ" ಆಗಿತ್ತು: ಸೈತಾನನು ಶಕ್ತಿಯನ್ನೆಲ್ಲಾ ಬಳಸಿ ಉಂಟು ಮಾಡಿದ್ದ ಅತ್ಯಂಥ ಬಲವಾದ ವಿರೋಧದ ನಡುವೆ, ಹೊಸದಾಗಿ ಕ್ರೈಸ್ತರಾದವರು ನಂಬಿಗಸ್ತರಾಗಿ ದೇವರ ಪಕ್ಷದಲ್ಲಿದ್ದುಕೊಂಡು ಜೀವಿಸುತ್ತಿದ್ದಾರೆಂಬುದನ್ನು ಕೇಳುವದು! ಬೇರೆಯವರ ಸ್ಥಿರತೆಯನ್ನು ಕಂಡು ನಾವು ಸಂತೋಷ ಮತ್ತು ಮೆಚ್ಚಿಕೆಯನ್ನು ವ್ಯಕ್ತಪಡಿಸುತ್ತೇವೋ? ಅವರ ನಂಬಿಗಸ್ತಿಕೆಯು ನಮಗೆ ರೋಮಾಂಚನವುಂಟು ಮಾಡುತ್ತದೆಂಬುದನ್ನು ಅವರು ಬಲ್ಲವರಾಗಿದ್ದಾರೋ? ಈ ಮನೋಭಾವವನ್ನು ಬೆಳೆಸಿಕೊಂಡರೆ ಮತ್ತು ಹಂಚಿಕೊಂಡರೆ, ನಾವು ಉತ್ತಮ ಜನರಾಗುವೆವು, ಮತ್ತು ಅವರು ಉತ್ತಮ ಜನರಾಗುವರು!

*ಮುಕ್ತಾಯ.* ಥೆಸಲೋನಿಕದಲ್ಲಿನ ಅವರ ಸಮಯವು ಅಂತ್ಯಗೊಂಡ ಬಳಿಕ ಬೋಧಕರು ಬೇರ್ಪಡುವಿಕೆ, ಒಬ್ಬಂಟಿಗತನ, ಮತ್ತು ಸಂವಹನದ ಕೊರತೆಗಳನ್ನು ಅನುಭವಿಸಿದರು, ಆದರೆ ಅವರು ಪಟ್ಟಣದಲ್ಲಿದ್ದ ಎಳೆಯ ದೇವಜನರ ಕುರಿತ ಆಸಕ್ತಿಯನ್ನು ಕಾಪಾಡಿಕೊಂಡು ಹೋದರು. ಹೊಸದಾಗಿ ಪರಿವರ್ತನೆಗೊಂಡವರ ಕುರಿತಾದ ಶುಭವರ್ತಮಾನವನ್ನು ಕೇಳುವದು ಅವರಿಗೆ ರೋಮಾಂಚಕಾರಿಯಾಗಿತ್ತು, ಮತ್ತು ಅವರು ಕೃತಜ್ಞತಾಸ್ತುತಿಯ ಮಾತುಗಳೊಂದಿಗೆ ಅವರಿಗೆ ಉತ್ತರವನ್ನು ಬರೆದರು.

ನಾವು ಸಹ ಬೇರ್ಪಡುವಿಕೆ, ಏಕಾಂಗಿತನ, ಮತ್ತು ಸಂಹವನದ ಕೊರತೆಗಳನ್ನು ಪ್ರತಿಕೂಲವಾಗಿ ಅನುಭವವನ್ನು ಹೊಂದಬಹುದಾಗಿದೆ. ದೇವರ ಮಕ್ಕಳ ಹಿತಾಸಕ್ತಿಯನ್ನು ಹೊಂದಿರುವದರಿಂದ ಮಾನವ ಕಠಿಣತೆಯನ್ನು ಜಯಿಸಿ ನಮಗೆ ಮತ್ತು ಇತರರಿಗೆ ಸಂತೋಷವನ್ನು ತರಬಹುದಾಗಿದೆ. ದೇವರು ತನ್ನ ಜನರ ಮೇಲೆ ಹೊಂದಿರುವ ಕಳಕಳಿಯನ್ನು ಅವರು ಪ್ರತಿಬಿಂಬಿಸಬೇಕು ಮತ್ತು ಆನಂದಿಸಬೇಕೆಂದು ಉದ್ದೇಶ ಹೊಂದಿರುತ್ತಾನೆ. ದೇವರ ಕುಟುಂಬವು ಎಲ್ಲಾ ಕುಟುಂಬಗಳಿಗಿಂತ ನಿಕಟವಾಗಿರಬಲ್ಲದು- ಬೇರ್ಪಡುವ ಸಮಯದಲ್ಲಿ ಸಹ. ದೇವಜನರ ಕುರಿತ ಶುಭಸುದ್ದಿಯನ್ನು ನಾವು ಅಪೇಕ್ಷಿಸಬೇಕು ಮತ್ತು ಹಂಚಿಕೊಳ್ಳಬೇಕು. TP

## ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದು (3:6-10)

ತಿಮೊಥೆಯನು ಪೌಲನ ಬಳಿಗೆ ಯಾವ ವಿಧವಾದ ವರದಿಯನ್ನು ಹೊತ್ತುಕೊಂಡು ಬಂದನು (3:6-10)? ಆತನು ಒಂದು ಒಳ್ಳೇ ವರದಿಯನ್ನು ತಂದನು. ಅವರ ನಂಬಿಗಸ್ತಿಕೆಯಿಂದ ತನಗೆ ಆದರಣೆಯಾಯಿತೆಂದು ಪೌಲನು ಹೇಳುತ್ತಾನೆ. ಅವರು ಕರ್ತನಲ್ಲಿ ನಂಬಿಗಸ್ತರಾಗಿ ಉಳಿದರೆ ತನಗೆ ನಿಜಕ್ಕೂ "ಜೀವಕಳೆ" ಎಂದು ಆತನು ಹೇಳಿದನು. ಅವರ ಮುಖಗಳನ್ನು ಇನ್ನೊಂದು ಸಾರಿ ನೋಡುವಂತಾಗಬೇಕೆಂದು ಆತನು ಹಗಲಿರುಳು ಪ್ರಾರ್ಥಿಸುತ್ತಿದ್ದನು.

ಥೆಸಲೋನಿಕದವರಿಗೆ ಸುವಾರ್ತೆಯು ಸಾರಲ್ಪಟ್ಟಾಗ, ಅವರಿಗೊಂದು ಮಹಾ ವರವು ಕೊಡಲ್ಪಟ್ಟಿತು. ಈಗ, ಥೆಸಲೋನಿಕದವರು ಪೌಲನಿಗೋಸ್ಕರ ಏನಾದರೂ

ಅರ್ಥಪೂರ್ಣವಾದದ್ದನ್ನು ಮಾಡುವದು ಸಮಯವಾಗಿತ್ತು. ಅವರು ಮಹಾನ್ ಅಪೊಸ್ತಲನಿಗೆ ಏನನ್ನು ಮಾಡಬಲ್ಲರು? ಅವರು ಪೌಲನಿಗೆ ಮಾಡಿದ್ದನ್ನು ಪ್ರತಿಯೊಬ್ಬ ಕ್ರೈಸ್ತರು ಒಬ್ಬರಿಗೊಬ್ಬರು ಮಾಡತಕ್ಕದ್ದು. ಅವರು ಆತನಿಗೆ ಪ್ರೋತ್ಸಾಹವನ್ನು ನೀಡಿದರು.

ನಾವು ಯಾವ ದಾರಿಗಳಲ್ಲಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸಬಲ್ಲೆವು?

*ಒಬ್ಬರನ್ನೊಬ್ಬರು ನೆನಪಿಸಿಕೊಳ್ಳುವ ಮೂಲಕ.* ಥೆಸಲೋನಿಕದ ಸಭೆಯ ಸ್ಥಿತಿಗತಿಯ ಕುರಿತಾಗಿ ತಿನೊಥೆಯನಿಂದ ಸುದ್ದಿಯನ್ನು ಕೇಳಿಸಿಕೊಳ್ಳುವದಕ್ಕೆ ಪೌಲನು ಬಹಳ ಕಾತರದಿಂದ ಕಾದಿದ್ದನು. ತಿಮೊಥೆಯನು ಹಿಂದಿರುಗಿ ಬಂದ ಬಳಿಕ, ಆತನನ್ನು ಅವರು ಯಾವಾಗಲೂ ಜ್ಞಾಪಕಮಾಡಿಕೊಳ್ಳುತ್ತಾರೆಂದು ಪೌಲನಿಗೆ ಹೇಳಲ್ಪಟ್ಟಿತು. ಅವರು ಆತನನ್ನು ತಮ್ಮ ಹೃದಯಗಳಲ್ಲಿಟ್ಟುಕೊಂಡಿದ್ದರು. ನಮ್ಮ ಸಹೋದರರು ನಮ್ಮನ್ನು ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆಂಬುದನ್ನು ತಿಳಿಯುವದು ಉತ್ತಮವಾದದ್ದು.

*ಜೊತೆಯಲ್ಲಿ ಇರಬೇಕೆಂದು ಹಂಬಲಿಸುವ ಮೂಲಕ.* ಥೆಸಲೋನಿಕದವರು ಆತನನ್ನು ಕಾಣಬೇಕೆಂದು ಹಂಬಲಿಸುತ್ತಿದ್ದಾರೆಂಬುದು ಸಹ ಪೌಲನಿಗೆ ತಿಳಿಸಲ್ಪಟ್ಟಿತು. ಅವರು ಮತ್ತೊಂದಾವರ್ತಿ ಆತನ ಜೊತೆಯಲ್ಲಿರಬೇಕೆಂಬ ಬಲವಾದ ಹಂಬಲ ಹೊಂದಿದ್ದರು.

*ಕರ್ತನಲ್ಲಿ ದೃಢವಾಗಿ ನಿಲ್ಲುವ ಮೂಲಕ.* ಥೆಸಲೋನಿಕದವರು ತಾವು ಎದುರಿಸುತ್ತಿರುವ ಹಿಂಸೆಗಳನ್ನೆಲ್ಲಾ ಸಹಿಸಿಕೊಂಡು ಕರ್ತನಲ್ಲಿ ದೃಢವಾಗಿ ನಿಂತಿರುವದೇ ತನಗೆ ಅತ್ಯಂಥ ಮುಖ್ಯವಾದದ್ದು ಎಂಬದಾಗಿ ಪೌಲನು ಹೇಳಿದನು. ಅದು ತನಗೆ "ಜೀವಕಳೆ" ಇದ್ದಂತೆ ಎಂಬದಾಗಿ ಹೇಳಿದನು.

ಒಬ್ಬರನ್ನೊಬ್ಬರು ಪ್ರೋತ್ಸಾಹಿಸುವದಕ್ಕೆ, ವಿಶೇಷವಾಗಿ ನಾವು ಒಬ್ಬರನ್ನೊಬ್ಬರು ಬಿಟ್ಟು ಇರುವಾಗ ಪ್ರೋತ್ಸಾಹಿಸುವದಕ್ಕೆ ಒಂದು ಸರಳವಾದ ಸೂತ್ರವು ಇಲ್ಲಿರುತ್ತದೆ: ಒಬ್ಬರನ್ನೊಬ್ಬರು ಜ್ಞಾಪಕಮಾಡಿಕೊಳ್ಳಿರಿ, ಜೊತೆಯಲ್ಲಿ ಇರುವದಕ್ಕೆ ಹಂಬಲಿಸಿರಿ, ಮತ್ತು ಕರ್ತನಲ್ಲಿ ದೃಢವಾಗಿ ನಿಲ್ಲಿರಿ. EC

## ಬೇರೆಯವರ ಬಲದಲ್ಲಿ ಆದರಣೆಯನ್ನು ಕಂಡುಕೊಳ್ಳುವದು (3:6-13)

ಪೌಲನು ಥೆಸಲೋನಿಕದವರ ಬಲವಾದ ನಂಬಿಕೆಯಲ್ಲಿ ಆದರಣೆಯನ್ನು ಕಂಡುಕೊಂಡನು (ವ. 7). ಆತನು ಗ್ರೀಸ್ ದೇಶದಲ್ಲಿ ಕಳೆದ ಸಮಯವು ಆತನಿಗೆ ಬಹಳ ವೇದನೆಯನ್ನುಂಟು ಮಾಡಿದ್ದಾಗ್ಯೂ (ಅಪೊಸ್ತಲರ ಕೃತ್ಯಗಳು 17; 18), ಥೆಸಲೋನಿಕದವರ "ನಂಬಿಕೆ," "ಪ್ರೀತಿ," ಮತ್ತು ಪೌಲನ ವಿಷಯದಲ್ಲಿ ಅವರಿಗಿದ್ದ ದಯೆಯ ಕುರಿತು ತಿಮೊಥೆಯನು ತಂದ "ಶುಭವರ್ತಮಾನ"ದಿಂದ ಆತನು ಆದರಣೆಯನ್ನು ಹೊಂದಿದನು (ವ. 6).

ಜನರು ಆತ್ಮೀಕ ಪ್ರಗತಿ ಸಾಧಿಸುವದನ್ನು ನೋಡುದರಿಂದಲೇ ಪೌಲನಿಗೆ ನಿಜವಾದ ಸಂತೋಷವನ್ನು ತರುತ್ತಿತ್ತು. ಇದು ತಿಳಿಸುವದೇನೆಂದರೆ ಆತನು ನಿಜವಾಗಿಯೂ ತನ್ನ ಮನಸ್ಸನ್ನು "ಮೇಲಿನವುಗಳ ಮೇಲೆ ಇಟ್ಟಿದ್ದನು; ಅಲ್ಲಿ ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ" ಎಂಬುದೆ (ಕೊಲೊಸ್ಸೆ 3:1). ಆತನು ಆದರಣೆಯನ್ನು ಹೊಂದಿದನು.

ಆದದರಿಂದ, ಪೌಲನು ಥೆಸಲೋನಿಕದವರ ಕುರಿತು ಪ್ರಾರ್ಥಿಸಿದನು. ಆತನು ಅವರ ನಿಮಿತ್ತವಾಗಿ ಆತನು ದೇವರಿಗೆ ಕೃತಜ್ಞತಾಸ್ತುತಿಯನ್ನು ಅರ್ಪಿಸಿದನು (ವ. 9). ತಾನು ಅವರ "ನಂಬಿಕೆಯ ಕೊರತೆಗಳನ್ನು ನೀಗುವದಕ್ಕೆ" "[ಅವರ] ಮುಖವನ್ನು ನೋಡಬೇಕೆಂದು" ಅನುಕೂಲವಾಗುವಂತೆ ಪ್ರಾರ್ಥಿಸಿದನು (ವ. 10). ಅಲ್ಲದೆ ಆತನು ಅವರ ಪ್ರೀತಿಯೂ "ಒಬ್ಬರೊಬ್ಬರ ಮೇಲೆಯೂ ಎಲ್ಲಾ ಮನುಷ್ಯರ ಮೇಲೆಯೂ" ಅಭಿವೃದ್ಧಿಯಾಗುವಂತೆ ಪ್ರಾರ್ಥಿಸಿದನು (ವ. 12). ಅಂತಿಮವಾಗಿ, ಕ್ರಿಸ್ತನು ಬರುವಾಗ ಅವರು ನಿರ್ದೋಷಿಗಳಾಗಿ ಕಾಣುವಂತಾಗುವ ಹಾಗೆ ದೇವರು "[ಅವರ] ಹೃದಯಗಳನ್ನು ದೃಢಪಡಿಸಲಿ" ಎಂದು ಆತನು ಪ್ರಾರ್ಥಿಸಿದನು (ವ. 13).

ಸಹೋದರರ ಆತ್ಮೀಕ ಪ್ರಗತಿಯಿಂದಾಗಿ ಪೌಲನು ಆದರಣೆಯನ್ನು ಹೊಂದಿಕೊಂಡ ಪ್ರಕಾರವೇ, ನಾವು ಸಹ ಒಬ್ಬರೊಬ್ಬರ ಆತ್ಮೀಕ ಬೆಳೆವಣಿಗೆಯ ಬಗ್ಗೆ ಕೇಳುವಾಗ ನಾವು ಸಹ ಆದರಣೆಯನ್ನು ಹೊಂದಿಕೊಳ್ಳಬೇಕು. ನಾವು ನಮ್ಮ ಜೊತೆಯ ಕ್ರೈಸ್ತರ ಕುರಿತು ನಿಜವಾಗಿಯೂ ಕಳಕಳಿಯನ್ನು ಹೊಂದಿದ್ದೇವೋ? ನಾವು ಅವರಿಗೋಸ್ಕರ ಪ್ರಾರ್ಥಿಸುತ್ತೇವೋ? ನಾವು ಅವರನ್ನು, ವಿಶೇಷವಾಗಿ ಹೊಸದಾಗಿ ಪರಿವರ್ತನೆಗೊಂಡವರನ್ನು ಪ್ರೋತ್ಸಾಹಿಸುವದಕ್ಕೆ ಪರಿಶ್ರಮ ಪಡಬೇಕು. ಅವರು ಪ್ರೀತಿಯಲ್ಲಿ ಅಭಿವೃದ್ಧಿಗೊಳ್ಳುವ ಹಾಗೆಯೂ ಕ್ರಿಸ್ತನು ಹಿಂದಿರುಗಿ ಬರುವಾಗ ಅವರು ನಿರ್ದೋಷಿಗಳು ಆಗಿ ಕಂಡುಬರುವಂತಾಗುವ ಹಾಗೆಯೂ ನಂಬಿಗಸ್ತಿಕೆಯಲ್ಲಿ ಮುಂದುವರೆಯುವಂತೆ ನಾವು ಪ್ರಾರ್ಥನೆ ಮಾಡತಕ್ಕದ್ದು. EE

## ಒಬ್ಬರೊಬ್ಬರ ನಿಮಿತ್ತವಾಗಿ ಸಂತೋಷಿಸುವದು (3:9, 10)

ಥೆಸಲೋನಿಕದಲ್ಲಿರುವ ತನ್ನ ಸಹೋದರರ ಬಗ್ಗೆ ಯೋಚಿಸುವಾಗ ಪೌಲನ ಹೃದಯವು ಆನಂದದಿಂದ ತುಂಬಿ ತುಳುಕುತ್ತದೆ. ಆತನು ಅವರನ್ನು ಬಹಳವಾಗಿ ಪ್ರೀತಿಸುತ್ತಿದ್ದನು, ಮತ್ತು ತಿಮೊಥೆ ಹಾಗೂ ಸೀಲರು ಸಹ ಅಷ್ಟೇ ಪ್ರೀತಿಸುತ್ತಿದ್ದರು. ಆತನು ತನ್ನ ಮಕ್ಕಳ ನಂಬಿಗಸ್ತಿಕೆಗಾಗಿ ಸಂತೋಷ ಪಡುವಂಥ ತಂದೆಯ ರೀತಿಯಲ್ಲಿಯೇ ಇದ್ದನು.

ಆತನು ಥೆಸಲೋನಿಕದವರಿಗೋಸ್ಕರ ಹೇಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿದನು? ಪೌಲನ ಕ್ರಿಯೆಗಳು ಮತ್ತು ವಿಜ್ಞಾಪನೆಗಳಲ್ಲಿ ನಾವು ಒಬ್ಬರೊಬ್ಬರಿಗಾಗಿ ಶ್ಲಾಘನೆಯನ್ನು ವ್ಯಕ್ತಪಡಿಸುವದಕ್ಕೆ ಬೈಬಲಾಧಾರಿತ ದಾರಿಯನ್ನು ಕಾಣುತ್ತೇವೆ.

*ದೇವರ ಮುಂದೆ ಸಂತೋಷ ಪಡುವದು.* ತನ್ನ ಸಹೋದರರಿಗೋಸ್ಕರ ಕೃತಜ್ಞತೆಗಳನ್ನು ಅರ್ಪಿಸುವದು-ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸುವದು-ಎಂಥ ಒಂದು ಸ್ವಾಭಾವಿಕವಾದ ರೀತಿಯಾಗಿರುತ್ತದೆ.

ಥೆಸಲೋನಿಕದವರಿಗಾಗಿ ದೇವರಿಗೆ ಕೃತಜ್ಞತೆಗಳನ್ನು ಅರ್ಪಿಸುವದಕ್ಕೆ ಪೌಲನ ಬಳಿಯಲ್ಲಿ ಮಾತುಗಳೇ ಇರಲಿಲ್ಲ. ಆತನೊಂದು ಭಾವೋತ್ತೇಜಕವಾದ ಪ್ರಶ್ನೆಯನ್ನು ಕೇಳುತ್ತಾನೆ, "ದೇವರಿಗೆ ತಕ್ಕಷ್ಟು ಸ್ತೋತ್ರ ಮಾಡುವದು ನಮ್ಮಿಂದ ಹೇಗಾದೀತು?"

ಆತನು ಇಲ್ಲಿ ಕೃತಜ್ಞತಾಸ್ತುತಿಯನ್ನು ದೇವರು ನೀಡಿದ ಆಶೀರ್ವಾದಗಳಿಗೆ ಪ್ರತಿಯಾಗಿ ಸಲ್ಲಿಸುವಿಕೆಯೆಂಬಂತೆ ಕಾಣುತ್ತಾನೆ. "ಸಲ್ಲಿಸು" ಎಂಬ ಪದವು ಎರಡು ಸಂಯುಕ್ತ

ಕ್ರಿಯಾಪದವೊಂದರಿಂದ ಬಂದದ್ದಾಗಿದ್ದು, ಪಡೆದುಕೊಂಡ ಆಶೀರ್ವಾದಗಳಿಗೆ ಪ್ರತಿಯಾಗಿ ಹಿಂದಿರುಗಿರುಸು ಎಂಬ ಅರ್ಥವನ್ನು ಕೊಡುತ್ತದೆ. ಈ ವ್ಯಕ್ತಿಗಳು ಹರ್ಷಿಸುತ್ತಿದ್ದರು, ಅವರ ಹೃದಯಗಳು ಸಂತೋಷದಿಂದ ತುಂಬಿ ಸುರಿಯುತ್ತಿದ್ದವು, ಮತ್ತು ಅವರ ಸಹೋದರರಿಗೋಸ್ಕರ ದೇವರಿಗೆ ತಮ್ಮ ಕೃತಜ್ಞತಾಸ್ತುತಿಯನ್ನು ತಕ್ಕಷ್ಟು ಅರ್ಪಿಸುವದಕ್ಕೆ ಆಗುವದಿಲ್ಲವೆಂದು ಭಾವಿಸಿಕೊಂಡರು.

ಅವರಿಗೋಸ್ಕರ ದೇವರಿಗೆ ಹೇಗೆ ಕೃತಜ್ಞತೆಗಳನ್ನು ಸಲ್ಲಿಸಬೇಕೆಂದು ಯೋಚಿಸಿದಾಗ ಮಾತುಗಳೇ ಹೊರಡಲಿಲ್ಲವೆಂಬಂತೆ ಪೌಲನು ಆಗಿದ್ದನು. ಆತನು ಅವರ ವಿಷಯದಲ್ಲಿ ದೇವರ ಮುಂದೆ ಕೇವಲ ಸಂತೋಷ ಪಡುವದಕ್ಕೆ ಮತ್ತು ಎರಡು ದೊಡ್ಡ ಆಶೀರ್ವಾದಗಳನ್ನು ಅನುಗ್ರಹಿಸಬೇಕೆಂದು ಕೇಳುವದಕ್ಕೆ ಮಾತ್ರವೇ ಶಕ್ತನಾಗಿದ್ದನು.

*ಅವರಲ್ಲಿ ಬಾಂಧವ್ಯವು ಇರುವಂತಾಗಲು.* ಕ್ರೈಸ್ತರು ಯಾವಾಗಲೂ ಈ ಪ್ರಾರ್ಥನೆಯನ್ನು ಮಾಡುವವರಾಗಿದ್ದಾರೆ, ಯಾಕೆಂದರೆ ಕ್ರೈಸ್ತರು ಒಟ್ಟಾಗಿ ಇರುವದಕ್ಕೆ ಹಾತೊರೆಯುತ್ತಾರೆ. ಕ್ರೈಸ್ತರು ಒಂದು ದೊಡ್ಡ ಕುಟುಂಬದ ಹಾಗಿದ್ದಾರೆ. ನಮ್ಮನ್ನು ಒಂದಾಗಿ ಹಿಡಿದಿಟ್ಟುಕೊಳ್ಳುವ ಬಂಧವು ಭೂಮಿಯ ಮೇಲಿನ ಬೇರೆ ಯಾವದೇ ಬಂಧಕ್ಕಿಂತಲೂ ಬಲಿಷ್ಠವಾದದ್ದು. ಯೇಸುವಿನ ರಕ್ತದಿಂದ ಒಂದುಗೂಡಿಸಲ್ಪಟ್ಟಿರುವ ಜನರು ಸಹಜವಾಗಿಯೇ ಒಟ್ಟಾಗಿ ಇರುವದನ್ನು ಇಷ್ಟ ಪಡುತ್ತಾರೆ.

ಪೌಲನ ಪ್ರಾರ್ಥನೆಯ ಈ ಭಾಗದಿಂದ ಎರಡು ಸತ್ಯಗಳು ಹೊರಹೊಮ್ಮುತ್ತವೆ. ಮೊದಲನೆಯದಾಗಿ, ಅವರೊಂದಿಗೆ ಇರಬೇಕೆಂದು ಪೌಲನಿಗಿರುವ ಬಯಕೆಯ ತೀವ್ರತೆಯನ್ನು ಕಾಣುತ್ತೇವೆ. ಆತನು ಹಗಲಿರುಳು ಪ್ರಾರ್ಥಿಸುತ್ತಿದ್ದೇನೆಂಬದಾಗಿ ಹೇಳಿದನು. ಆತನು ಬಳಸಿದ ὑπερεκπερισσοῦ (*huperekperissou*) ಪದವು, ಹೊಸ ಒಡಂಬಡಿಕೆಯಲ್ಲಿ ಕೇವಲ ಮೂರು ಸಾರಿ ಮಾತ್ರವೇ ಕಾಣಿಸಿಕೊಳ್ಳುವಂಥ ಪದವಾಗಿರುತ್ತದೆ ಮತ್ತು ಅದು ಪೌಲನಿಂದ ಮಾತ್ರವೇ ಬಳಸಲ್ಪಟ್ಟಿರುತ್ತದೆ. ಅದು ಇಲ್ಲಿ 10ನೇ ವಚನದಲ್ಲಿ ಕಾಣಿಸಿಕೊಳ್ಳುತ್ತದೆ, ಅದು ಇಲ್ಲಿ "ಅತ್ಯಂತವಾಗಿ" ಎಂದು ಅನುವಾದಿಸಲ್ಪಟ್ಟಿರುತ್ತದೆ; ಅದು 5:13ರಲ್ಲಿ ಸಿಕ್ಕುತ್ತದೆ, ಅಲ್ಲಿ ಅದು "ಬಹಳವಾಗಿ" ಎಂದು ಅನುವಾದಿಸಲ್ಪಟ್ಟಿದೆ; ಮತ್ತು ಅದು ಎಫೆಸ 3:20ರಲ್ಲಿ ಸಿಕ್ಕುತ್ತದೆ, ಅಲ್ಲಿ ಅದು "ಅತ್ಯಧಿಕವಾದದ್ದನ್ನು" ಎಂದು ಅನುವಾದಿಸಲ್ಪಟ್ಟಿದೆ. ಹೀಗೆ, ಆತನ ಮಾತುಗಳಲ್ಲಿ ಆತನು ಎಂಥ ತೀವ್ರವಾದ ಬಯಕೆಯೊಂದಿಗೆ ಪ್ರಾರ್ಥಿಸಿದನೆಂಬುದನ್ನು ಕಾಣುತ್ತೇವೆ. ಆತನು *ನಿಜವಾಗಿಯೂ* ಅವರನ್ನು ಕಾಣಬೇಕೆಂದು ಬಯಸಿದ್ದನು. ಎರಡನೆಯದಾಗಿ, ಆತನ ಬಯಕೆಯ ನಿರಂತರತೆ ಸ್ವಭಾವವನ್ನು ಕಾಣುತ್ತೇವೆ. ತಾನು ಹಗಲಿರುಳು ಪ್ರಾರ್ಥಿಸುತ್ತಿದ್ದೇನೆಂಬದಾಗಿ ಆತನು ಹೇಳಿದನು. ಅವರೊಂದಿಗೆ ಇರಬೇಕೆಂಬ ನಿರಂತರವಾದ ಹಂಬಲವನ್ನು ಹೃದಯದಲ್ಲಿ ಹೊಂದಿದ್ದನು. ಆತನು ಅವರನ್ನು ದೇಹದಿಂದ ಅಗಲಿದ್ದನು, ಆದರೆ ಆತನು ಅವರನ್ನು ಯಾವಾಗಲೂ ತನ್ನ ಹೃದಯದಲ್ಲಿಟ್ಟುಕೊಂಡಿದ್ದನು.

*ಅವರು ಒಬ್ಬರೊಬ್ಬರ ನಂಬಿಕೆಯ ವೃದ್ಧಿಯಲ್ಲಿ ಕೊಡುಗೆಯನ್ನು ನೀಡುವಂತಾಗಲು.* ಪೌಲನು ಅವರ ಮೇಲೆ ತನ್ನ ಅಪೊಸ್ತಲಿಕ ಕೈಗಳನ್ನಿಟ್ಟು ಪವಿತ್ರಾತ್ಮನ ಅದ್ಭುತಕರವಾದ

ವರಗಳನ್ನು ಒದಗಿಸುವ ಯೋಚನೆಯನ್ನು ತನ್ನ ಮನಸ್ಸಿನಲ್ಲಿ ಹೊಂದಿದ್ದನಾದರೂ, ಆತನು ಅವರಿಗಾಗಿ ಮಾಡಿದ ಹಾರೈಕೆಯು ನಮಗೆ ನಮ್ಮ ಆತ್ಮೀಕ ಬೆಳವಣಿಗೆಯಲ್ಲಿ ಹೇಗೆ ಪರಸ್ಪರ ಪ್ರೋತ್ಸಾಹ ಕೊಡಬೇಕೆಂಬುದನ್ನು ದೃಷ್ಟಾಂತಪಡಿಸುತ್ತದೆ. ಖಂಡಿತವಾಗಿಯೂ ನಾವು ಕ್ರಿಸ್ತನ ದೇಹದ ಪ್ರತಿಯೊಬ್ಬ ಸದಸ್ಯನು ಸಹ ವೈಯಕ್ತಿಕವಾಗಿ ಬೆಳೆಯಬೇಕೆಂಬುದನ್ನು ಬಯಸುವೆವು.

ಪೌಲನು ಪ್ರೀತಿಸಿದ ರೀತಿಯಲ್ಲಿಯೇ ನಾವು ಕ್ರೈಸ್ತರನ್ನು ಪ್ರೀತಿಸುವದಾದರೆ, ನಾವು ಆ ಪ್ರೀತಿಯನ್ನು ಪ್ರಾರ್ಥನೆಯಲ್ಲಿ ಮೂರು ದಾರಿಗಗಳಲ್ಲಿ ವ್ಯಕ್ತಪಡಿಸಬಹುದು: ನಮ್ಮ ಸಹೋದರರು ಹಾಗೂ ಸಹೋದರಿಯರಿಗಾಗಿ ದೇವರಿಗೆ ಕೃತಜ್ಞತಾಸ್ತುತಿಯನ್ನು ಅರ್ಪಿಸುವ ಮೂಲಕ, ನಾವು ಅವರೊಂದಿಗೆ ಇರುವಂತಾಗಬೇಕೆಂದು ಪ್ರಾರ್ಥಿಸುವದು, ಮತ್ತು ಅವರು ತಮ್ಮ ಆತ್ಮೀಕ ಬೆಳವಣಿಗೆಗೆ ಕೊಡುಗೆಯನ್ನು ನೀಡುವಂತಾಗುವ ಹಾಗೆ ಪ್ರಾರ್ಥಿಸುವದು. ನಮ್ಮ ಸಹೋದರರಿಗೋಸ್ಕರ ಇದು ನಮ್ಮ ಹೆಬ್ಬಯಕೆಯಾಗಿದೆಯೋ? EC

## ದೇವರಲ್ಲಿ ಬೆಳೆಯುವದು (3:9-13)

ಥೆಸಲೋನಿಕದ ಎಳೆಯ ಕ್ರೈಸ್ತರ ಕುರಿತಾದ ಶುಭವರ್ತಮಾನವನ್ನು ಕೇಳುವದು ಅಥೇನೆಯಲ್ಲಿದ್ದ ಪೌಲನಿಗೆ ರೋಮಾಂಚನವುಂಟು ಮಾಡಿತ್ತು. ಆತನು ಹಿಂಸೆಗೊಳಗಾಗಿದ್ದ ಆ ಹೊಸ ಕ್ರೈಸ್ತರ ಹಿತದ ಬಗ್ಗೆ ಬಹಳವಾಗಿ ಚಿಂತೆಗೊಂಡಿದ್ದನು. ಥೆಸಲೋನಿಕದಲ್ಲಿನ ಎಳೆಯ ಕ್ರೈಸ್ತರ ಸಂಗಡ ಸಮಯವನ್ನು ಕಳೆದ ಮೇಲೆ ಹಿಂದಿರುಗಿ ಬರುವಾಗ ತಿಮೊಥೆಯನು ತಂದ ಪ್ರೋತ್ಸಾಹಕರವಾದ ಸುದ್ದಿಯಿಂದಾಗಿ ಆತನಿಗಿದ್ದ ಅತ್ಯಂತ ಆಳವಾದ ಚಿಂತೆಗಳು ಮಾಯವಾಗಿದ್ದವು.

ಪೌಲನ ಪ್ರತಿಕ್ರಿಯೆ ಏನಾಗಿತ್ತು? ಆತನು ಕೃತಜ್ಞನಾಗಿದ್ದನು, ಮತ್ತು ತನ್ನ ಕೃತಜ್ಞತಾಸ್ತುತಿಗಳನ್ನು ವ್ಯಕ್ತಪಡಿಸುವದಕ್ಕೆ ಬಯಸಿದನು ಮತ್ತು ನಂತರ ತನ್ನ ಗಮನವನ್ನು ಭವಿಷ್ಯದ ಕಡೆಗೆ ಹರಿಸುವದಕ್ಕೆ ಇಚ್ಛಿಸಿದನು. ಈ ಭವಿಷ್ಯವು ದೇವರಿಂದ ಪೋಷಣೆ ಮಾಡಲ್ಪಟ್ಟು ಪರಿಪಕ್ವಗೊಂಡು ಜೀವಿತಕಾಲವೆಲ್ಲಾ ಉಳಿಯುವಂತಾಗಬೇಕೆಂಬುದು ಆತನ ಇಚ್ಛೆಯಾಗಿತ್ತು. ಆತನು ಈ ಗುರಿಗಳ ಕುರಿತು ಆಳವಾಗಿ ಯೋಚನೆಯನ್ನಷ್ಟೆ ಮಾಡಲಿಲ್ಲ, ಆದರೆ ಆತನು ಅವುಗಳ ಕುರಿತಾಗಿ ದೇವರಿಗೆ ಪ್ರಾರ್ಥನೆ ಮಾಡಿದನು. ಈಗ ಆತನು ಥೆಸಲೋನಿಕದವರಿಗೆ ಪ್ರೋತ್ಸಾಹವುಂಟಾಗುವ ಹಾಗೆ ತಾನು ಮಾಡಿದ ಪ್ರಾರ್ಥನೆಗಳ ಬಗ್ಗೆ ಅವರಿಗೆ ತಿಳಿಯಪಡಿಸುತ್ತಾನೆ.

ನಾವು ಮೊದಲ ಶತಮಾನದ ಕ್ರೈಸ್ತತ್ವದ ಬಗ್ಗೆ ಓದಿ ಅಧ್ಯಾಯನ ಮಾಡಿದ ಹಾಗೆ, ಇಂದು ಜೊತೆ ಕ್ರೈಸ್ತರ ಕುರಿತು ನಾವು ಸ್ವತಃ ಇಟ್ಟುಕೊಂಡಿರುವ ಆಲೋಚನೆಗಳೊಂದಿಗೆ ಪೌಲನಿದ್ದ ಕಳಕಳಿಯನ್ನು ಹೋಲಿಸಿ ನೋಡಬಹುದು. ಬೇರೆಯವರಿಗೆ ಬೆಳೆಯುವಂತೆ ಸಹಾಯ ಮಾಡಬಲ್ಲಂತಹ ಕ್ರೈಸ್ತತ್ವವನ್ನು ನಾವು ಹೇಗೆ ಆಚರಿಸಬಹುದು?

*ಕೃತಜ್ಞತೆಯೊಂದಿಗೆ ಪ್ರಾರ್ಥಿಸಿರಿ (3:9, 10a).* ಥೆಸಲೋನಿಕದವರು ನಂಬಿಕೆ ಮತ್ತು ಪ್ರೀತಿಗಳಲ್ಲಿ ನೆಲೆಯಾಗಿರುತ್ತಾರೆಂಬ ಶುಭವರ್ತಮಾನವು ಕೇಳಿ ಪೌಲನು ದೇವರಿಗೆ ಸ್ತೋತ್ರಗಳನ್ನು ಅರ್ಪಿಸುವಾಗ ಆತನು ಹೆಚ್ಚುಕಡಿಮೆ ಮಾತು ಬಾರದವನಂತಾದನು.

ಕೂಸುಗಳಾಗಿದ್ದ ಕ್ರೈಸ್ತರು ಬದುಕಿದ್ದಾರೆ ಮತ್ತು ಬೆಳೆಯುತ್ತಿದ್ದಾರೆಂಬದನ್ನು ತಿಳಿದು ಆತನು ಸಂತೋಷದಿಂದ ತುಂಬಿ ತುಳಿಕಿದ್ದನು: "ನಿಮ್ಮ ನಿಮಿತ್ತ ನಮ್ಮ ದೇವರ ಮುಂದೆ ತಕ್ಕಷ್ಟು ಸ್ತೋತ್ರ ಮಾಡುವದು ನಮ್ಮಿಂದ ಹೇಗಾದೀತು?" (3:9).

ಸತ್ಯ ದೇವರನ್ನು ಅನುಸರಿಸದಂಥ ಬಹಳಷ್ಟು ಜನರನ್ನೊಳಗೊಂಡ ಒಂದು ಪಟ್ಟಣದಲ್ಲಿದ್ದ ಈ ಹೊಸ ಕ್ರೈಸ್ತರ ಚಿಕ್ಕ ಗುಂಪಿನ ವಿಷಯದಲ್ಲಿ ಪೌಲನು ಬಹಳವಾಗಿ ಚಿಂತಿತನಾಗಿದ್ದನು. ಅಷ್ಟುಮಾತ್ರವಲ್ಲದೆ, ಪಟ್ಟಣದ ಅಂಗೀಕೃತ ಧರ್ಮವನ್ನು ತೊರೆದವರು ಅವರ ಕುಟುಂಬಗಳಿಂದ ಮತ್ತು ಸಮುದಾಯದ ಉಳಿದ ಜನರಿಂದ ಬಹಿಷ್ಕಾರಕ್ಕೊಳಗಾಗು ತ್ತಿದ್ದರು, ಹೀಗೆ ಅವರ ಧಾರ್ಮಿಕ ಆಯ್ಕೆಯು ಅವರ ಸ್ನೇಹಗಳ, ಉದ್ಯೋಗ, ಮತ್ತು ಪೌರತ್ವದ ಪ್ರಯೋಜನಗಳಿಗೆ ಹಾನಿಯನ್ನುಂಟು ಮಾಡಿತ್ತು. ಅವರು ಈಗಲೂ ನಂಬಿಗಸ್ತರಾಗಿದ್ದಾರೆಂಬುದನ್ನು ಕಂಡುಕೊಂಡಿದ್ದು ಪೌಲನಿಗೆ ಒಂದು ದೊಡ್ಡ ನಿಟ್ಟುಸಿರು ಬಿಡುವಂತೆ ಮಾಡಿತ್ತು. ದೇವರಿಗೆ ಅವರು ಹೊಂದಿದ್ದ ಸಮರ್ಪಣೆ, ಅವರ ನಂಬಿಕೆ, ಮತ್ತು ಪ್ರೀತಿಸುವ ಸಹೋದರರ ಪ್ರೋತ್ಸಾಹವು ಈ ಕ್ರೈಸ್ತರನ್ನು ಬಲಗೊಳಿಸಿತ್ತು.

ನಮ್ಮ ಜೀವಿತಗಳಲ್ಲಿ ಮತ್ತು ಬೇರೆಯವರ ಜೀವಿತಗಳಲ್ಲಿರುವ ಎಷ್ಟೋಂದು ಆಶೀರ್ವಾದಗಳಿಗೋಸ್ಕರ ನಾವು ಕೃತಜ್ಞತಾಸ್ತುತಿಯನ್ನು ಸಲ್ಲಿಸಬೇಕೆಂಬುದನ್ನು ಯೋಚಿಸುವಾಗ ಕೆಲವು ಸಾರಿ ನಮಗೆ ಮಾತುಗಳೇ ಹೊರಡುವದಿಲ್ಲ, ಆದರೆ ಹಾಗಿದ್ದರೂ ನಾವು ಪ್ರಾರ್ಥನೆಯನ್ನು ಮಾಡತಕ್ಕದ್ದು: "ಎಡೆಬಿಡದೆ ಪ್ರಾರ್ಥನೆ ಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ" (5:17, 18). ನಮ್ಮ ಜೀವಿತಗಳ ಮೂಲಕ ಕೃತಜ್ಞತಾಸ್ತುತಿಯುಳ್ಳ ಪ್ರಾರ್ಥನೆಗಳು ಹರಿದು ಬರಬೇಕೆಂದು ದೇವರು ಬಯಸುತ್ತಾನೆ!

*ಭವಿಷ್ಯದ ಬೆಳವಣಿಗೆಗಾಗಿ ಯೋಜನೆ ಮಾಡಿರಿ (3:10b).* ಪೌಲನ ಥೆಸಲೋನಿಕದವರ ಹಿಂದಿನ ನಂಬಿಗಸ್ತಿಕೆ, ಈಗಿನ ಯೋಗಕ್ಷೇಮಕ್ಕಾಗಿ ಪ್ರಾರ್ಥನೆ ಮಾಡುವದಕ್ಕೆ ಪೌಲನು ಸಂತೋಷಗೊಂಡಿದ್ದನು, ಆದರೆ ಆತನು ಅವರ ಭವಿಷ್ಯದ ಬೆಳವಣಿಗೆಯ ವಿಷಯದಲ್ಲಿ ಬಹಳಷ್ಟು ಗಾಢವಾದ ಆಸಕ್ತಿಯನ್ನು ಹೊಂದಿದ್ದನು. ಈ ಕಾರಣಕ್ಕಾಗಿಯೇ, ಆತನು ಅವರ ನಂಬಿಕೆಯಲ್ಲಿನ ಕೊರತೆಗಳನ್ನು "ನೀಗಿಸುವದಕ್ಕಾಗಿ" ಥೆಸಲೋನಿಕದಲ್ಲಿರುವ ಸಹೋದರರನ್ನು ಪುನಃ ಕೂಡಿಕೊಳ್ಳುವಂತಾಗಬೇಕೆಂದು ದಿನಾಲೂ ಪ್ರಾರ್ಥಿಸುತ್ತಿದ್ದನು (3:10b).

ನಮ್ಮಿಂದಲೂ ನಮ್ಮ ಸಹೋದರರಿಂದಲೂ ನಾವು ಆತ್ಮೀಕ ಬೆಳವಣಿಗೆಯನ್ನು ಅಪೇಕ್ಷಿಸತಕ್ಕದ್ದು. ನಾವು ಈಗಿನ ಗುಣಸ್ವಭಾವಗಳನ್ನು ಮತ್ತು ಸಾಮರ್ಥ್ಯಗಳನ್ನು ಮೌಲ್ಯಮಾಪನ ಮಾಡುವಾಗ, ಬೆಳವಣಿಗೆಯನ್ನುಂಟು ಮಾಡುವಂತೆ ದೇವರ ವಾಕ್ಯವನ್ನು ಹೇಗೆ ಅನ್ವಯಿಸಿಕೊಳ್ಳಬಹುದೆಂಬುದನ್ನು ನಿರ್ಧರಿಸಬಲ್ಲೆವು. ಈ ಪತ್ರಿಕೆಯನ್ನು ಬರೆಯುವ ವೇಳೆಯಲ್ಲಿ, ಒಂದು ವೈಯಕ್ತಿಕ ಭೇಟಿಯು ಅಸಾಧ್ಯವಾಗಿತ್ತು; ಅಂಥ ಒಂದು ಭೇಟಿಯು ಸಾಧ್ಯವಾಗುವ ತನಕ ಥೆಸಲೋನಿಕದ ಕ್ರೈಸ್ತರಿಗೆ ಸಹಾಯ ಮಾಡಬೇಕೆಂದರೆ ಪತ್ರಿಕೆಯನ್ನು ಬರೆಯುವದು ಒಂದು ದಾರಿಯಾಗಿತ್ತು. ಈ ಪತ್ರಿಕೆಯ ಉಳಿದ ಭಾಗವನ್ನು ಮತ್ತು 2 ಥೆಸಲೋನಿಕದವರಿಗೆ ಬರೆದ ಪತ್ರಿಕೆಯನ್ನು ನೋಡುವದರಿಂದ ಈ ಕ್ರೈಸ್ತರಲ್ಲಿ ಯಾವದು

ಕೊರತೆಯಾಗಿತ್ತೆಂಬುದು ತಿಳಿದು ಬರುತ್ತದೆ.

*ನಿಮ್ಮ ಜೀವಿತವನ್ನು ದೇವರ ಚಿತ್ತವು ಆಳ್ವಿಕೆ ಮಾಡಬೇಕು (3:11).* ಪೌಲನು ಈ ಸಹೋದರರ ಜೊತೆಯಲ್ಲಿರಬೇಕೆಂದು ಎಷ್ಟು ಬಯಕೆಯನ್ನು ಹೊಂದಿದ್ದನೋ, ಅಷ್ಟೇ ಆತನು ಅಲ್ಲಿಗೆ ಹೇಗೆ ಹೋಗುವನೆಂಬುದನ್ನು ನಿರ್ಧರಿಸುವಂತೆ ದೇವರಿಗೆ ಒಪ್ಪಿಸಲು ಸಿದ್ಧನಿದ್ದನು: "ನಮ್ಮ ತಂದೆಯಾದ ದೇವರೂ ನಮ್ಮ ಕರ್ತನಾದ ಯೇಸುವೂ ನಮಗೆ ನಿಮ್ಮ ಬಳಿಗೆ ಬರುವದಕ್ಕೆ ಮಾರ್ಗವನ್ನು ಸರಾಫಮಾಡಲಿ" (3:11). ದೇವರಿಗೆ ಸೇವೆ ಮಾಡುವಂತೆ ಸಿಕ್ಕಿರುವ ಬೇರೆ ಸಂದರ್ಭಗಳ ಕಾರಣದಿಂದ ಆತನಿಗೆ ಥೆಸಲೋನಿಕಕ್ಕೆ ಬರದಂತೆ ತಡೆಯಾಗಿದ್ದಿರಬಹುದು, ಆದರೆ ಆತನು ದೇವರ ಚಿತ್ತಕ್ಕನುಗುಣವಾಗಿ ನಡೆಯಲು ಮನಸ್ಸುಳ್ಳವನಾಗಿದ್ದನು.

ಅದೇ ರೀತಿಯಲ್ಲಿಯೇ, ನಮ್ಮ ಯೋಜನಗೆಳು ಕೇವಲ ನಮ್ಮ ಸ್ವಂತ ಉದ್ದೇಶಗಳನ್ನಷ್ಟೆ ಮನಸ್ಸಿನಲ್ಲಿಟ್ಟುಕೊಂಡು ಮಾಡಲ್ಪಡುವ ಬದಲಾಗಿ, ದೇವರ ಚಿತ್ತವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾಡಲ್ಪಡತಕ್ಕದ್ದು. ಯಾಕೋಬ 4:15ರ ಪ್ರಕಾರ, ನಾವು "ದೇವರ ಚಿತ್ತವಾದರೆ ನಾವು ಬದುಕಿ ಈ ಕೆಲಸವನ್ನಾಗಲಿ ಆ ಕೆಲಸವನ್ನಾಗಲಿ ಮಾಡುವೆವು" ಎಂದು ಹೇಳತಕ್ಕದ್ದು. ನಾವು ಯೋಚಿಸಬೇಕು, ಪ್ರಾರ್ಥಿಸಬೇಕು, ಮಾತಾಡಬೇಕು, ಮತ್ತು ಎಲ್ಲದರಲ್ಲಿಯೂ ದೇವರ ಚಿತ್ತವು ಮಾಡಲ್ಪಡಬೇಕೆಂದು ಬಯಸುತ್ತೇವೋ ಎಂಬಂತೆ ನಾವು ನಡೆದುಕೊಳ್ಳಬೇಕು.

*ಪ್ರೀತಿ, ಪ್ರೀತಿ, ಪ್ರೀತಿ (3:12).* ಅವರಲ್ಲಿ ಪ್ರೀತಿಯು ಇದೆ ಎಂಬದಾಗಿ ಈ ಕ್ರೈಸ್ತರಿಗೆ ಹೇಳಲಾಯಿತು. ಅವರು ಪ್ರೀತಿಯಿಂದ ತುಂಬಿಸಲ್ಪಡಬೇಕೆಂದು ಪೌಲನು ಪ್ರಾರ್ಥಿಸಿದನು ಮತ್ತು ಅವರ ಪ್ರೀತಿಯು ಉಕ್ಕಿ ಹರಿಯಬೇಕು ಎಂಬದಾಗಿ ಹಾರೈಸುತ್ತಾನೆಂದು ಅವರಿಗೆ ತಿಳಿಸಿದನು! ಅವರ ಪ್ರೀತಿಯ ಕುರಿತ ಶುಭವರ್ತಮಾನವು ತನಗೆ ಸಂತೋಷವನ್ನು ಮತ್ತು ಆದರಣೆಯನ್ನುಂಟು ಮಾಡಿತು ಎಂದು ಹೇಳಿದನು (3:6-9). ಅವರು ಒಬ್ಬರನ್ನೊಬ್ಬರು ಪ್ರೀತಿಸುವ ಮೂಲಕ ಉತ್ತಮವಾದ ಕೆಲಸ ಮಾಡುತ್ತಿದ್ದಾರೆಂದು ಹೇಳಿದನು (4:9, 10). ಹಾಗಿದ್ದರೂ, ಈ ಹೊಸ ಕ್ರೈಸ್ತರು ಪ್ರೀತಿಯಲ್ಲಿ ಅಭಿವೃದ್ಧಿಗೊಂಡು ಅತ್ಯಧಿಕವಾಗಲೆಂದು ಆತನು ಪ್ರಾರ್ಥಿಸುತ್ತಾನೆ (3:12). ಇದರರ್ಥವು ಪ್ರೀತಿ ಕ್ರೈಸ್ತರ ಜೀವಿತಕ್ಕೆ ಜೀವಧಾರಕವಾಗಿರುತ್ತದೆ ಎಂದಾಗತಕ್ಕದ್ದು! ಪ್ರೀತಿಗೆ ಬೇರೆ ಯಾವ ಪರ್ಯಾಯವೂ ಇರುವದಿಲ್ಲ!

ಹೊಸ ಒಡಂಬಡಿಕೆಯು ದೇವರ ಪ್ರೀತಿಯ ಬಗ್ಗೆ ಒತ್ತಿ ಹೇಳುತ್ತದೆ, ಮತ್ತು ದೇವಜನರು ದೇವರ ಪ್ರೀತಿಯನ್ನು ಪ್ರತಿಬಿಂಬಿಸಬೇಕೆಂದು ಅದು ಹೇಳುತ್ತದೆ. ಯೋಹಾನನು ಹೀಗೆ ಬರೆದನು, "ದೇವರೂ ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರು ವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ" (1 ಯೋಹಾನ 4:16b). ಕ್ರಿಸ್ತನಂಥ-ಪ್ರೀತಿಯು ತನ್ನ ಹಿಂಬಾಲಕರ ಗುರುತು ಆಗಿರುವದೆಂಬದಾಗಿ ಯೇಸು ಹೇಳಿದನು: "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬದೇ. ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ

ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು" (ಯೋಹಾನ 13:34, 35).

ದೇವರ ಪ್ರೀತಿ ಮತ್ತು ಕ್ರಿಸ್ತನ ಪ್ರಿತಿ ಮತ್ತು ದೇವಜನರ ಜೀವಿತಗಳಲ್ಲಿ ಈ ಪ್ರೀತಿ ಪ್ರತಿಫಲನ ಇವುಗಳು ನಾವು ಅಧ್ಯಯನ ಮಾಡಿ ಅನ್ವಯಿಸಿಕೊಳ್ಳಬೇಕಾದ ಭಾವನೆಗಳಾಗಿವೆ! ಈ ಭಾವನೆಗಳನ್ನು ಕ್ರೈಸ್ತ ಗುಣನಡತೆಯ ಭಾಗವಾಗಿದೆ ಎಂಬುದನ್ನು ಹೊಸ ಹಾಗೂ ಭಾವಿ ಕ್ರೈಸ್ತರಿಗೆ ಕಲಿಸಿ ಕೊಡತಕ್ಕದ್ದು.

*ಹೃದಯದಲ್ಲಿ ನಿರ್ಮಲರಾಗಿರಿ (3:13).* 13ನೇ ವಚನವು ಹಿಂದಿನ ವಚನದಲ್ಲಿನ ಉಕ್ಕಿ ಹರಿಯುವ ಪ್ರೀತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ. ಪ್ರೀತಿಯು ನನ್ನ ಹೃದಯಗಳನ್ನು ತುಂಬಿಕೊಳ್ಳುವದಾದರೆ, ನಮ್ಮ ಮೇಲೆ ಸುಳ್ಳು ಉದ್ದೇಶಗಳನ್ನು ಹೊಂದಿದವರು ಎಂಬ ಆರೋಪವೇ ಬರುವದಿಲ್ಲ, ಯಾಕೆಂದರೆ ಸ್ವತಃ ದೇವರ ಉದ್ದೇಶಗಳನ್ನೇ ತೋರ್ಪಡಿಸುವವರಾಗಿರುತ್ತೇವೆ. ದೇವರು "ನಮ್ಮ ಹೃದಯವನ್ನು ಪರಿಶೋಧಿಸುವನು" ಎಂಬುದು ಈ ಕ್ರೈಸ್ತರಿಗೆ ಮುಂಚೆಯೇ ಜ್ಞಾಪಿಸಲ್ಪಟ್ಟಿತ್ತು (2:4). ನಾವು ಅನೇಕ ಸಾರಿ ನಮಗೆ ಕ್ಷಮೆಯಾಗಬಹುದಾದ ತಪ್ಪುಗಳನ್ನು ಮಾಡುತ್ತೇವೆ, ಆದರೆ ನಮ್ಮ ಹೃದಯಗಳು ಪ್ರೀತಿಯಿಂದ ತುಂಬಬೇಕೆಂದು ದೇವರ ಬಯಕೆಯಾಗಿದೆ. ದೇವರು "ನಮ್ಮ ಹೃದಯಗಳನ್ನು ದೃಢಪಡಿಸಿ ತನ್ನ ಎಲ್ಲಾ ಪರಿಶುದ್ಧರ ಸಮೇತ [ಯೇಸು ಕ್ರಿಸ್ತನು] ಪ್ರತ್ಯಕ್ಷನಾದಾಗ [ತನ್ನ] ಸಮಕ್ಷಮದಲ್ಲಿ ನೀವು ಪರಿಶುದ್ಧರೂ ನಿರ್ದೋಷಿಗಳೂ ಆಗಿರುವಂತೆ" ಮಾಡುವದಕ್ಕೆ ಬಯಸುತ್ತಾನೆ.

ಯೇಸುವಿನ ಬರೋಣಕ್ಕಾಗಿ ಥೇಸಲೋನಿಕದವರು ಹೇಗೆ ಸಿದ್ಧಗೊಳ್ಳುತ್ತಿದ್ದರು? ಅದೊಂದು ಪ್ರಾಮುಖ್ಯವಾದ ಪ್ರಶ್ನೆ! ಯೇಸುವಿನ ಬರೋಣಕ್ಕಾಗಿ ಸಿದ್ಧಗೊಳ್ಳುವದು ಕ್ರೈಸ್ತನಾಗುವದರ ಒಂದು ಭಾಗವಾಗಿದೆ (1:10). ಅಲ್ಲದೆ ಅದು ಸಂತೋಷದಿಂದ ಎಂದುರು ನೋಡುವ ಕ್ರೈಸ್ತೀಯ ಪುನರ್ಮಿಲನದ ಒಂದು ಭಾಗ ಸಹ ಆಗಿರುತ್ತದೆ (2:19, 20).

ನಾವು ನಮ್ಮ ಸ್ವನೀತಿಯ ಕಾರಣದಿಂದ ಪರಿಶುದ್ಧಗೊಳಿಸಲ್ಪಟ್ಟಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ, ಯಾಕೆಂದರೆ "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ಅಲ್ಲದೆ ದೇವರು ಕೆಟ್ಟದ್ದರ ಸಂಗಡ ವಾಸಿಸಲಾರನು ಎಂಬುದನ್ನು ಸಹ ನಾವು ಬಲ್ಲೆವು: "ನೀನು ದುಷ್ಟತನದಲ್ಲಿ ಸಂತೋಷಿಸುವ ದೇವರಲ್ಲ; ಕೆಟ್ಟದ್ದು ನಿನ್ನ ಬಳಿಯಲ್ಲಿ ತಂಗಲಾರದು" (ಕೀರ್ತನೆ 5:4).

ಆತನ ಪರಿಶುದ್ಧತೆಯಲ್ಲಿ ಹಂಚಿಕೊಳ್ಳುವದು ನಮಗೆ ಸಾಧ್ಯವಾಗಬೇಕೆಂದರೆ ನಾವು ದೇವರಿಂದ ಅನುಗ್ರಹಿಸಲ್ಪಟ್ಟ ಯೇಸುವಿನ ಯಜ್ಞದ ಮೇಲೆ ಅವಲಂಭಿತರಾಗಬೇಕು: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪಸ್ವರೂಪಿಯಾಗ ಮಾಡಿದನು" (2 ಕೊರಿಂಥ 5:21). ಕ್ರಿಸ್ತನು ಹಿಂದಿರುಗುವ ಸಮಯದಲ್ಲಿ ಯೇಸುವಿನ ಮೂಲಕ ಮಾತ್ರವೇ ನಮ್ಮ ಹೃದಯಗಳು ದೇವರ ಪರಿಶುದ್ಧತೆಯಲ್ಲಿ ಪಾಲು ಹೊಂದುವವು. ಥೆಸಲೋನಿಕದಲ್ಲಿರುವ ಇವರ ರೀತಿಯಲ್ಲಿ, ನಮ್ಮ ಹೃದಯಗಳನ್ನು ಸ್ಥಿರಪಡಿಸುವಂತೆ ನಾವು ದೇವರ ಮೇಲೆಎ ಆಧಾರಗೊಂಡಿರಬೇಕು

*ಮುಕ್ತಾಯ.* ಇದಕ್ಕಿಂತಲೂ ಹೆಚ್ಚು ಭಾವನಾತ್ಮಕಗೊಳಿಸುವ ಬರಹದ ತುಂಡನ್ನು ಒಬ್ಬನು ಬೇರೆ ಎಲ್ಲಿಯೂ ಕಾಣಲಾರನು, ಇಲ್ಲಿ ಕ್ರೈಸ್ತ ಸ್ನೇಹಿತರು ಹಿಂದಿನ ಆಶೀರ್ವಾದಗಳಿಗಾಗಿ ಪ್ರಾರ್ಥಿಸಿದರು, ಅವರ ಪುನರ್ಮಿಲನವನ್ನು ಬಯಸಿದರು, ಮತ್ತು ತಾವು ಯಾರಿಂದ ಅಗಲಿದ್ದರೋ ಅವರಿಗೆ ಒಂದು ಆಶೀರ್ವಾದಕರ ಗಮ್ಯತೆಯುಂಟಾಗಬೇಕೆಂದು ಹಾರೈಸಿದರು! ನಾವು ಆಲೋಚನೆಗಳನ್ನು ಮನದಲ್ಲಿ ಸೆರೆ ಹಿಡಿದು ಅವುಗಳನ್ನು ಸಹೋದರರಿಗೆ ಅನ್ವಯಿಸುವದಾದರೆ, ಇದು ನಮಗೂ ಅವರಿಗೂ ದೊಡ್ಡ ಪ್ರಯೋಜನವನ್ನು ತರುವದು.

ನಾವು 3:9-13 ವಚನಗಳನ್ನು ಓದುವಾಗ, ಈ ಯೋಚನೆಗಳನ್ನು ನಮ್ಮ ಪ್ರಾರ್ಥನೆಗಳಲ್ಲಿ ನಿಯತಕ್ರಮವಾಗಿ ಅನ್ವಯಿಸಿಕೊಳ್ಳೋಣ ಮತ್ತು ಬಳಿಕ ನಾವು ಅವರಿಗಾಗಿ ಹೇಗೆ ಪ್ರಾರ್ಥಿಸುತ್ತಿದ್ದೇವೆಂಬುದನ್ನು ಸಹೋದರರಿಗೆ ಹೇಳೋಣ. ಇದು ಒಂದು ವ್ಯತ್ಯಾಸವನ್ನುಂಟು ಮಾಡುವದು! ಇದು ಹೃದಯಗಳನ್ನು ಕದಲುವಂತೆ ಮಾಡುವದು, ಇದು ಮನೋಭಾವಗಳನ್ನು ಮಾರ್ಪಡಿಸುವದು, ಇದು ಸತ್ಕಾರ್ಯಗಳನ್ನುಂಟು ಮಾಡುವದು, ಮತ್ತು ಇದು ಸಹೋದರರಿಗೆ ಬೆಳೆದು ನಂಬಿಗಸ್ತರಾಗಿ ನೆಲೆಗೊಳ್ಳುವಂತೆ ಸಹಾಯ ಮಾಡುವದು. TP

## ಒಬ್ಬರನ್ನೊಬ್ಬರು ಪ್ರಬೋಧಿಸುವದು (3:11-13)

ಈ ಎಳೆಸ ಸಭೆಯೊಂದಿಗೆ ಇರುವದಕ್ಕಾಗಿ ತಾನು ಥೆಸಲೋನಿಕಕ್ಕೆ ಹಿಂದಿರುಗುವ ಹಾಗೆ ತಂದೆಯಾದ ದೇವರು ಮತ್ತು ಕರ್ತನಾದ ಯೇಸು ದಾರಿಯನ್ನು ಸರಾಗ ಮಾಡುವರೆಂಬದಾಗಿ ಪೌಲನು ಬೇಡಿಕೊಳ್ಳುತ್ತಾನೆ. ಅದಾದ ಬಳಿಕ, ಆತನು ಅವರಿಗಾಗಿ ಹೊಂದಿರುವ ಹಾರೈಕೆಯ ಕುರಿತು ಇನ್ನಷ್ಟು ವಿವರವನ್ನು ಕೊಡುತ್ತಾನೆ. ಆತನ ವಿವರವಾದ ಹಾರೈಕೆಯಲ್ಲಿ, ಒಬ್ಬರೊಬ್ಬರಿಗೆ ನಮ್ಮ ಅತಿ ದೊಡ್ಡ ಹಾರೈಕೆ ಏನಾಗಿರಬೇಕೆಂಬುದನ್ನು ನೋಡುತ್ತೇವೆ.

*ಅವರು ಪ್ರೀತಿಯಲ್ಲಿ ಅಭಿವೃದ್ಧಿ ಹೊಂದಿ ಅತ್ಯಧಿಕವಾಗುವಂತೆ.* ಅವರು ತನ್ನ ಮೇಲೆ ಹೊಂದಿರುವ ಪ್ರೀತಿಯಲ್ಲಿ ಮಾತ್ರವಲ್ಲದೆ, ಎಲ್ಲಾ ಮನುಷ್ಯರ ಮೇಲಿನ ಪ್ರೀತಿಯಲ್ಲಿ ಅತ್ಯಧಿಕಗೊಳ್ಳಬೇಕೆಂಬುದು ಪೌಲನ ಬಯಕೆಯಾಗಿತ್ತು. ಕ್ರೈಸ್ತನು ಎಲ್ಲರನ್ನೂ ಪ್ರೀತಿಸುವ ವೈಶಿಷ್ಟ್ಯತೆಯನ್ನು ಹೊಂದಿರಬೇಕು, ಮತ್ತು ಈ ಕ್ಷೇತ್ರದಲ್ಲಿ ಬೆಳೆವಣಿಗೊಳ್ಳುವದು ಉಳಿದ ಎಲ್ಲಾ ಪ್ರಾಮುಖ್ಯವಾದ ಕ್ಷೇತ್ರಗಳಲ್ಲಿ ಬೆಳವಣಿಗೆ ಹೊಂದುವದಕ್ಕೆ ತಳಹದಿಯಾಗಿರುತ್ತದೆ.

*ಅವರು ಪರಿಶುದ್ಧತೆಯಲ್ಲಿ ನೆಲೆಗೊಳಿಸಲ್ಪಡುವಂತಾಗಲು.* ಪ್ರೀತಿಯಲ್ಲಿ ಬೆಳೆಯುವದು ಯೇಸುವಿನ ಬರೋಣದಲ್ಲಿ ನಮ್ಮ ಹೃದಯಗಳನ್ನು ದೇವರ ಸಮಕ್ಷಮದಲ್ಲಿ ಪರಿಶುದ್ಧತೆಯೊಳಗೆ ಸ್ಥಿರಪಡಿಸುವದು. ಕರ್ತನ ಸೇವೆಗಾಗಿ ನಮ್ಮ ಹೃದಯಗಳು ಪ್ರತ್ಯೇಕಿಸಡಲ್ಪಡಬೇಕು ಎಂಬದನ್ನು ಆತನು ಬಯಸುತ್ತಾನೆ.

*ಅವರು ಕರ್ತನ ಬರೋಣದಲ್ಲಿ ಆತನ ಮುಂದೆ ನಿರ್ದೋಷಿಗಳಾಗಿರುವಂತಾಗಬೇಕೆಂದು.* ಯೇಸುವಿನ ಬರೋಣಕ್ಕಾಗಿ ನಾವು ಹೇಗೆ ಸಿದ್ಧಗೊಳ್ಳುವೆವು? ನಾವು ದೇವರ ಸಮಕ್ಷಮದಲ್ಲಿ ಪರಿಶುದ್ಧತೆಯೊಳಗೆ ದೃಢೀಕರಿಸಲ್ಪಡುವಂತಾಗುವ ರೀತಿಯಲ್ಲಿ

ನಾವು ಎಲ್ಲಾ ಜನರನ್ನು ಪ್ರೀತಿಸುವವರಾಗುವ ಮೂಲಕ ಆ ಸಿದ್ಧತೆಯನ್ನು ಮಾಡಿಕೊಳ್ಳುತ್ತೇವೆಂಬುದನ್ನು ಪೌಲನು ಸೂಚ್ಯಾರ್ಥವಾಗಿ ಹೇಳಿದನು. ನಾವು ತಪ್ಪಿಲ್ಲದವರಾಗಿರುವದು ಅಸಾಧ್ಯವಾಗಿರಬಹುದು, ಆದರೆ ನಾವು ನಿರ್ದೋಷಿಗಳಾಗಿ ರಬಲ್ಲೆವು. ಒಬ್ಬನ ಹೃದಯವು ಯಥಾರ್ಥವಾದ ಉದ್ದೇಶದಿಂದ ತುಂಬಿದ್ದರೆ ಅವನು ನಿರ್ದೋಷಿಯಾಗಿರಬಲ್ಲನು.

ಪೌಲನು ಎಂಥ ಒಂದು ಹಾರೈಕೆಯನ್ನು ಮಾಡಿದನು! ಅದೊಂದು ಅರ್ಥಪೂರ್ಣವಾದ ಮತ್ತು ಸಮತೋಲನವುಳ್ಳ ಹಾರೈಕೆಯಾಗಿತ್ತು. ಅದು ಬೇರೆಯವರನ್ನು ಸೂಕ್ತವಾಗಿ ಪ್ರೀತಿಸುವದಕ್ಕೆ ಮತ್ತು ದೇವರನ್ನು ಪರಿಶುದ್ಧತೆಯೊಂದಿಗೆ ಆರಾಧಿಸುವದಕ್ಕೆ ಕರೆ ನೀಡಿದಂಥ ಹಾರೈಕೆಯಾಗಿತ್ತು. EC

**"ನಿಮ್ಮ ನಂಬಿಕೆ" (3:1-10)**

ರೋಮಾ 10:17 ಹೀಗೆ ಹೇಳುತ್ತದೆ, "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ." ಥೆಸಲೋನಿಕದ ಜನರು, ಪೌಲನು 1 ಕೊರಿಂಥ 15:3, 4ರಲ್ಲಿ ವರ್ಣಿಸಿದಂಥ ವಾರ್ತೆಯನ್ನು ಕೇಳಿದ್ದರು, ". . . ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು." ಈ ಥೆಸಲೋನಿಕದವರು ಕ್ರಿಸ್ತನ ವಾಕ್ಯದಿಂದ ಕ್ರಿಯೆಕ್ಕೆ ಕೊಳ್ಳಲ್ಪಟ್ಟಿದ್ದರು. ಈ ವಾಕ್ಯಭಾಗವು, 3:1-10 ವಚನಗಳು ಅವರ ನಂಬಿಕೆಯ ಗುಣಸ್ವಭಾವಗಳ ಮುಖ್ಯ ಅಂಶಗಳನ್ನು ಎತ್ತಿ ತೋರಿಸುತ್ತದೆ.

*ಒಂದು ವೈಯಕ್ತಿಕ ನಂಬಿಕೆ (3:1, 2).* ಮೊದಲನೆಯದಾಗಿ, ಅವರು ಒಂದು ವೈಯಕ್ತಿಕವಾದ ನಂಬಿಕೆಯನ್ನು ಹೊಂದಿದ್ದರು. ಪೌಲನು "ನಿಮ್ಮ ನಂಬಿಕೆ" ಎಂಬ ಪದಗುಚ್ಛವನ್ನು ಬಳಸುತ್ತಾನೆ (ವಚನಗಳು 2, 5, 6, 7, 10). ನಮ್ಮ ನಂಬಿಕೆಯು ಸಮರ್ಪಕವಾಗಿ ಸ್ಥಾಪಿಸಲ್ಪಡಬೇಕಾದರೆ, ಅದು ಒಬ್ಬ ವ್ಯಕ್ತಿಯ ಸುತ್ತ ಕೇಂದ್ರಿಕೃತವಾಗಿರತಕ್ಕದ್ದು. ಈ ನಂಬಿಕೆಯು ಕ್ರಿಸ್ತನ ಕಡೇ ಚಿತ್ತ ಮತ್ತು ಒಡಂಬಡಿಕೆಯಲ್ಲಿ ಪ್ರಕಟವಾಗಿರುವ ಸತ್ಯದ ಸಾಕಷ್ಟು ಪ್ರಮಾಣದ ಭಾಗವನ್ನೊಳಗೊಂಡಿರುತ್ತದೆ. ಅದೆಲ್ಲವೂ ಜೀವಧಾರಕ ಮತ್ತು ಪ್ರಾಮುಖ್ಯವಾದದ್ದು, ಆದರೆ ಅದರ ಹೃದಯಭಾಗದಲ್ಲಿರುವದು ಒಬ್ಬ ವ್ಯಕ್ತಿ, ಯೇಸು ಕ್ರಿಸ್ತನೇ ಆಗಿದ್ದಾನೆ. ಪೌಲನು 2 ತಿಮೊಥೆ 1:12ರಲ್ಲಿ ಹೀಗೆ ಬರೆದನು, "ನಾನು ನಂಬಿರುವಾತನನ್ನು ಬಲ್ಲೆನು. ಆತನು ನನ್ನ ವಶದಲ್ಲಿಟ್ಟಿರುವದನ್ನು ಆತನು ಆ ದಿನಕ್ಕಾಗಿ ಕಾಪಾಡುವದಕ್ಕೆ ಶಕ್ತನಾಗಿದ್ದಾನೆಂದು ದೃಢವಾಗಿ ನಂಬಿದ್ದೇನೆ."

ಥೆಸಲೋನಿಕದವರಿಗೆ ಬರೆದ ಈ ಪತ್ರಿಕೆಗಳಲ್ಲಿ ನಾವು ಆ ಎಳೆಯ ಕ್ರೈಸ್ತರಿಗೆ ಕಳುಹಿಸಲಾದ ಪತ್ರಿಕೆಗಳ ತಾಜಾತನ ಮತ್ತು ಶಕ್ತಿಯ ಯಾವದೋ ಒಂದು ಅನುಭವ ಹೊಂದುತ್ತೇವೆ. ಅವುಗಳು ಧ್ಯೇಯವನ್ನು ಆರಂಭಗೊಳಿಸುವ, ರಾಜ್ಯದ ಸ್ಥಾಪನೆಯನ್ನು ಜಾರಿಗೆ ತರುವ, ಮತ್ತು ನಂಬಿಕೆಯನ್ನು ಉಂಟು ಮಾಡುವಂಥ ಬೋಧನೆಯನ್ನು ನಮಗೆ ಜ್ಞಾಪಕಗೊಳಿಸುತ್ತದೆ.

ದೀಕ್ಷಾಸ್ನಾನದ ಉದ್ದೇಶ ಮತ್ತು ಕ್ರಿಯೆ ಪ್ರಾಮುಖ್ಯವಾದದ್ದೋ? ಅದು ಖಂಡಿತವಾಗಿಯೂ ಪ್ರಾಮುಖ್ಯವಾದದ್ದು. ನಾವು ಆತನ ಮರಣದಲ್ಲಿ ಪಾಲುಗಾರರಾಗುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತೇವೆಂಬುದನ್ನು ವಾಕ್ಯವು ಸ್ಪಷ್ಟಗೊಳಿಸುತ್ತದೆ (ರೋಮಾ 6:3). ನಾವು ಆರಾಧನೆಯನ್ನು ಮಾಡುವ ರೀತಿಯು ಪ್ರಾಮುಖ್ಯವಾದದ್ದೊ? ಅದು ಖಂಡಿತವಾಗಿಯೂ ಪ್ರಾಮುಖ್ಯವಾದದ್ದು. ದೇವರು ಆತ್ಮದಲ್ಲಿಯೂ ಸತ್ಯದಲ್ಲಿಯೂ ಆರಾಧಿಸುವಂತಹ ನಿಜವಾದ ಆರಾಧಕರನ್ನು ಹುಡುಕುತ್ತಾನೆ (ಯೋಹಾನ 4:24). ಆದಾಗ್ಯೂ, ಇದೆಲ್ಲವೂ ಯೇಸುವಿನ ಸುತ್ತ ಕೇಂದ್ರಿಕೃತವಾಗಿರತಕ್ಕದ್ದು. ವಾಕ್ಯವು ಯೇಸುವಿನ ಕರ್ತತ್ವದ ಕಾರಣದಿಂದ ಮತ್ತು ಅದು ಆತನ ಕಡೇ ಚಿತ್ತ ಹಾಗೂ ಒಡಂಬಡಿಕೆಯಾಗಿದೆ ಎಂಬ ಕಾರಣದಿಂದ ಅದರ ಬೋಧನೆಯು ಪ್ರಾಮುಖ್ಯವಾದದ್ದು.

ನನ್ನ ನಂಬಿಕೆಯನ್ನು ನಾನು ಹೇಗೆ ಅಭಿವೃದ್ಧಿಪಡಿಸಿಕೊಳ್ಳಬಲ್ಲೆವು? "ನಂಬಿಕೆಗೆ ವಾಕ್ಯವೇ ಆಧಾರ" ಎಂದು ರೋಮಾ 10:17 ಹೇಳುತ್ತದೆ. ನಮ್ಮ ನಂಬಿಕೆಯು ಆ ದಾರಿಯಲ್ಲಿ ಬರುವದು ಮಾತ್ರವಲ್ಲದೆ, ಅದು ಆ ದಾರಿಯಲ್ಲಿ ಬಲಗೊಳಿಸಲ್ಪಡುತ್ತದೆ. ನಿಮ್ಮ ನಂಬಿಕೆಯು ಒಂದು ರಕ್ತಹೀನತೆಯ ಸ್ಥಿತಿಗೊಳ್ಳಲ್ಪಟ್ಟದ್ದಾಗಬೇಕೆಂದು ಬಯಸುವದಾದರೆ, ಜೀವವುಳ್ಳ ವಾಕ್ಯದೊಂದಿಗೆ ಒಂದು ಸಂಪರ್ಕವನ್ನು-ಒಂಧು ಸಜೀವ, ಜೀವಧಾರಕವಾದ ಸಂಪರ್ಕ- ಕಾಪಾಡಿಕೊಳ್ಳುವದನ್ನು ನಿಲ್ಲಿಸಿ ಬಿಡಿರಿ. ನಿಮ್ಮ ನಂಬಿಕೆಯು ಬೆಳೆದು ಬಲಗೊಳ್ಳಬೇಕೆಂದರೆ, ಅನುದಿನವೂ ನಂಬಿಕೆಯ ಮೂಲಕ್ಕೆ ಹಿಂದಿರುಗಲು ಸಮಯವನ್ನು ತೆಗೆದುಕೊಳ್ಳಿರಿ. ಯೋಹಾನನ ಸುವಾರ್ತೆಯನ್ನು ಜಾಗರೂಕತೆಯಿಂದಲೂ ಪ್ರಾರ್ಥನಾ ಪೂರ್ವಕವಾಗಿಯೂ ಓದುವದನ್ನು ಶಿಫಾರಸ್ಸು ಮಾಡುವೆನು. ತಾನು ಏಕೆ ಬರೆಯುತ್ತಿದ್ದಾನೆಂಬುದನ್ನು ಯೋಹಾನನು ಬಹಳ ಸ್ಪಷ್ಟಪಡಿಸುತ್ತಾನೆ: "ಯೇಸು ಇನ್ನು ಬೇರೆ ಎಷ್ಟೋ ಅದ್ಭುತಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ಯೋಹಾನ 20:30, 31). ಆತನು ಮಾಡಿದ ಪ್ರತಿಯೊಂದು ಅದ್ಭುತವು ನಮಗೆ ತಿಳಿಸಲ್ಪಟ್ಟಿರುವದಿಲ್ಲ. ಯೋಹಾನನು ಅಲ್ಲಲ್ಲಿ ಆಯ್ದು ಬರೆದಿರುತ್ತಾನೆ. ಯೋಹಾನನು, ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಟ್ಟವನಾಗಿ, ನಂಬಿಕೆಯನ್ನು ವೃದ್ಧಿಪಡಿಸುವ ಸೂಚಕಕಾರ್ಯಗಳನ್ನು ಆಯ್ಕೆ ಮಾಡಿಕೊಂಡನು. ಆತನ ಉದ್ದೇಶವು ನಂಬುವಂತೆ ನಮ್ಮನ್ನು ನಡಿಸುವದೇ ಆಗಿತ್ತು.

*ಒಂದು ಸಾಭಿತುಗೊಳಿಸಲ್ಪಟ್ಟಿರುವ ನಂಬಿಕೆ (3:3-10).* ಎರಡನೆಯದಾಗಿ, ನಮ್ಮ ನಂಬಿಕೆಯು ಸಾಭಿತುಪಡಿಸಲ್ಪಡಬೇಕು ಎಂದು ಪೌಲನು ಹೇಳಿದನು. ಈ ವಾಕ್ಯಭಾಗದ ಬೆಳಕಿನಲ್ಲಿ, ನಂಬಿಕೆಯು ಸಾಭಿತುಗೊಳಿಸಲ್ಪಡಬೇಕಾದ, ಪರೀಕ್ಷಿಸಲ್ಪಡಬೇಕಾದ, ಮತ್ತು ಪರಿಶೋಧಿಸಲ್ಪಡಬೇಕಾದ ಒಂದು ಕಾರ್ಯವಾಗಿರುತ್ತದೆ. ಯಾಕೋಬ 1ರಲ್ಲಿ ASV ಯು "ನಿಮ್ಮ ನಂಬಿಕೆಯ ಸಾಭಿತುಗೊಳಿಸಲ್ಪಡುವಿಕೆ" ಎಂದು ಹೊಂದಿದ್ದರೆ, KJVಯು "ನಿಮ್ಮ ನಂಬಿಕೆಯ ಪರಿಶೋಧನೆಯು ತಾಳ್ಮೆಯನ್ನು ಉಂಟು ಮಾಡುತ್ತದೆ" ಎಂದು

ಹೊಂದಿರುತ್ತದೆ.

1 ಥೆಸಲೋನಿಕ 3ರಲ್ಲಿ ಪೌಲನು ಹೀಗೆ ಹೇಳಿದನು,

> ನಿಮ್ಮ ಮೇಲೆ ಬಂದಿರುವ ಸಂಕಟಗಳಲ್ಲಿ ಒಬ್ಬರೂ ಚಂಚಲರಾಗದಂತೆ . . . ಸಂಕಟಗಳನ್ನು ಅನುಭವಿಸುವದಕ್ಕಾಗಿ ನಾವು ನೇಮಿಸಲ್ಪಟ್ಟವರೆಂದು ನೀವೇ ಬಲ್ಲಿರಷ್ಟೆ. ನಾವು ನಿಮ್ಮ ಬಳಿಯಲ್ಲಿದ್ದಾಗ ಸಂಕಟವನ್ನು ಅನುಭವಿಸಲೇಬೇಕೆಂದು ಮುಂದಾಗಿ ಹೇಳಿದೆವಲ್ಲಾ; ಅದರಂತೆಯೇ ಆಯಿತು, ನಿಮ್ಮ ಅನುಭವಕ್ಕೂ ಬಂತು (ವಚನಗಳು 2a, 3, 4).

ಮುಂದಿನ ವಚನವು ಶೋಧಕನು ಅವರನ್ನು ಶೋಧನೆ ಮಾಡುವದನ್ನು ಬಣ್ಣಿಸುತ್ತದೆ. ಆದದರಿಂದ, ನಂಬಿಕೆಯು ಬಾಧೆ ಮತ್ತು ಸಂಕಟಗಳ ಮೂಲಕ ಸಾಭಿತುಪಡಿಸಲ್ಪಡಬಲ್ಲದು, ಮತ್ತು ಶೋಧಕನಿಂದ ಪರಿಶೋಧನೆ ಹಾಗೂ ಪರೀಕ್ಷೆಗೆ ಒಳಗಾಗಬಹುದು. ಈ ಪರೀಕ್ಷೆಯು ಒಂದು ಬಿಕ್ಕಟ್ಟಿನ ಸಮಯವಾಗಿರಬಹುದಾದರೂ, ಪರೀಕ್ಷೆಯನ್ನು ತೇರ್ಗಡೆ ಮಾಡುವದಾದರೆ ಅದೊಂದು ಇನ್ನಷ್ಟು ದೊಡ್ಡ ನಂಬಿಕೆಯ ಸಮಯ ಸಹ ಆಗಬಲ್ಲದು.

3ನೇ ವಚನವು ನಾವು ಸಂಕಟ ಅನುಭವಿಸುವದಕ್ಕೆ "ನೇಮಿಸಲ್ಪಟ್ಟವರು" ಎಂಬದರ ಬಗ್ಗೆ ಮಾತಾಡುತ್ತದೆ. ಸಂಕಟಗಳು ಬರುವಾಗ, ನಾವು ಒಂದು ಬಾಧೆಯ ಅಗ್ನಿಪರೀಕ್ಷೆ ಮತ್ತು ಸಂಕಟದ ಕುಲುಮೆಯಲ್ಲಿರುವಂತಾದಾಗ, ನಂಬಿಕೆಯನ್ನು ತ್ಯಜಿಸಿ ಬಿಡುವ ತಪ್ಪನ್ನು ಮಾಡದಿರೋಣ. ಆ ಸಂದರ್ಭದಲ್ಲಿಯೇ ನಮಗೆ ನಂಬಿಕೆ ಅಗತ್ಯವಾಗಿರುತ್ತದೆ, ಬಹುಶಃ ಹಿಂದೆಂದಿಗಿಂತಲೂ ಹೆಚ್ಚು ಅಧಿಕವಾಗಿ ಅಗತ್ಯವಿರುವದು.

ಹಾಗಾದರೆ, ನಂಬಿಕೆಯು ಸಾಭಿತುಗೊಳಿಸಲ್ಪಡಬೇಕು ಅಥವಾ ಪರೀಕ್ಷೆಗೊಳಪಡಬೇಕು. "ಓ ಕುಗ್ಗಿಸಲ್ಪಡದ ನಂಬಿಕೆಗಾಗಿ," ಎಂದು ನಾವು ಹಾಡುವೆವು. ಪರೀಕ್ಷಿಸುವ ಸಮಯಗಳು ಬರುವವಾದ್ದರಿಂದ ಎಲ್ಲವೂ ಸುಗಮವಾಗಿರುವ ದಿನಗಳನ್ನು ನಮ್ಮ ನಂಬಿಕೆಯನ್ನು ಭದ್ರಪಡಿಸಿಕೊಳ್ಳೋಣ ಮತ್ತು ಬಲಪಡಿಸಿಕೊಳ್ಳೋಣ. ಅವುಗಳು ಬರುವಾಗ, ನಾವು "ಆತನು ಇನ್ನು ಮೇಲೆ ನಮ್ಮನ್ನು ಪ್ರೀತಿಸುವದಿಲ್ಲ ಎಂದರ್ಥ" ಎಂಬದಾಗಿ ಹೇಳುವ ಮೂಲಕ ಪ್ರತಿಕ್ರಿಯೆಯನ್ನು ತೋರಿಸದಿರೋಣ.

*ಒಂದು ಸಾರಲ್ಪಟ್ಟ ನಂಬಿಕೆ (3:6).* ನಂಬಿಕೆಯು ಸಾರಲ್ಪಡುವಂತದ್ದು ಸಹ ಆಗಿದೆ. ಒಂದು ವೈಯಕ್ತಿಕವಾದ, ಸಾಭಿತುಗೊಳಿಸಲ್ಪಟ್ಟ ನಂಬಿಕೆಯನ್ನು ಹಂಚಿಕೊಳ್ಳತಕ್ಕದ್ದು. ಒಪ್ಪಿಕೊಂಡಿರುವಂತೆ, 1 ಥೆಸಲೋನಿಕ 3ನೇ ಅಧ್ಯಾಯದ ಈ ಹತ್ತು ವಚನಗಳು ಈ ಸತ್ಯದ ಕುರಿತು ಸ್ವಲ್ಪವಾಗಿ ತಿಳಿಸುತ್ತವೆ, ಆದರೆ ಇದಕ್ಕೆ ಮುಂಚೆ ಪೌಲನು, "ಕರ್ತನ ವಾಕ್ಯವು ನಿಮ್ಮಿಂದಲೇ . . . ಘೋಷಿತವಾದದ್ದಲ್ಲದೆ" ಎಂದು ಹೇಳಿದನು (1:8). ಪೌಲನು ಒಂದು ತುತ್ತೂರಿಯ ಅಥವಾ ಕಣಿಯಲ್ಲೆಲ್ಲಾ ಪ್ರತಿಧ್ವನಿಸುವ ಸಿಡಿಲಿನ ಅರ್ಭಟವನ್ನು ಬಣ್ಣಿಸಬಹುದಾದ ಒಂದು ಮಾತನ್ನು ಬಳಸುತ್ತಾನೆ. ವಾಕ್ಯವು "ಘೋಷಿಸಲ್ಪಟ್ಟಿತು." ಈ ವಾಕ್ಯಭಾಗ ಮತ್ತು ಹೊಸ ಒಡಂಬಡಿಕೆಯ ಇತರ ವಾಕ್ಯಭಾಗಗಳಿಂದ, ನಿಜವಾದ ನಂಬಿಕೆಯು ಸಾರಲ್ಪಡತಕ್ಕದ್ದು ಎಂಬ ಭರವಸೆ ನಮಗೆ ಸಿಕ್ಕುತ್ತದೆ.

ಕನಸುಗಳಿಗೆ ಅವುಗಳದ್ದೇ ಆದ ಸ್ಥಾನವಿದೆ, ಆದರೆ ಕನಸುಗಳ ಜೊತೆಗೆ ಎಚ್ಚರಿಕೆಯು

ಸಹ ಇರತಕ್ಕದ್ದು. ದರ್ಶನಕ್ಕೆ ತನ್ನದೇ ಆದ ಸ್ಥಾನವಿದೆ, ಆದರೆ ದರ್ಶನದ ಜೊತೆಗೆ ಶೌರ್ಯವಿರತಕ್ಕದ್ದು. ಕನಸುಗಳ ಜೊತೆಯಲ್ಲಿ ಕಾರ್ಯ ಮಾಡುವಿಕೆ ಸಹ ಇರತಕ್ಕದ್ದು. ನಿಜವಾದ ಮತ್ತು ಸಜೀವವಾದ ನಂಬಿಕೆಯು ಹಂಚಿಕೊಳ್ಳಲ್ಪಡುವದು. 2 ಕೊರಿಂಥ 4:13ರಲ್ಲಿ ಪೌಲನು ಹೀಗೆ ಬರೆದನು, "ನಂಬಿದೆನು, ಆದದರಿಂದ ಮಾತಾಡಿದೆನು ಎಂಬ ಶಾಸ್ತ್ರೋಕ್ತಿಯಲ್ಲಿ ಕಾಣುವ ನಂಬಿಕೆಯ ಭಾವವನ್ನೇ ಹೊಂದಿ ನಾವೂ ನಂಬಿದವರು, ಆದದರಿಂದ ಮಾತಾಡುತ್ತೇವೆ."

ಇಬ್ರಿಯ 12:1ರಲ್ಲಿನ "ಹತ್ತಿಕೊಳ್ಳುವ" ಪಾಪವು ಅಪನಂಬಿಕೆಯಾಗಿರುವ ಸಾಧ್ಯತೆಯು ಬಹಳಷ್ಟಿರುತ್ತದೆ. ಅದು ನಂಬಿಕೆಯ ಕುರಿತ ಶ್ರೇಷ್ಠವಾದ ಅಧ್ಯಾಯವಾದ ತಕ್ಷಣದಲ್ಲಿಯೇ ಬರುತ್ತದೆ. ನಾವು ಈ ಪ್ರಬೋಧನೆಯನ್ನು ಕೇಳಿಸಿಕೊಳ್ಳುತ್ತೇವೆ, "ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು . . . ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ." ನಾವು ಸಂಶಯ ಮತ್ತು ಅನಿಶ್ಚಿತತೆಯನ್ನು ತೆಗೆದು ಹಾಕೋಣ. ಬಹಳಷ್ಟು ವೈಯಕ್ತಿಕ ಸುವಾರ್ತಾಸೇವೆಯನ್ನು ನಿಲ್ಲಿಸುವಂತೆ ಮಾಡುವ ರಹಸ್ಯ ಸಂದೇಹತನವನ್ನು ಬಿಟ್ಟುಬಿಡೋಣ, ಜನರು ತಮ್ಮ ಸಂಶಯಗಳನ್ನು ನಂಬುತ್ತಿದ್ದಾರೆ ಮತ್ತು ನಂಬಿಕೆಗಳನ್ನು ಸಂಶಯಿಸುತ್ತಿದ್ದಾರೆ. ನಮ್ಮನ್ನು ಸುಲಭವಾಗಿ ದಾರಿ ತಪ್ಪಿಸುವ ಭಾರವನ್ನು ತೆಗೆದಿಡೋಣ. ನಮ್ಮ ಮುಂದೆ ನೇಮಕಗೊಳಿಸಲ್ಪಟ್ಟಿರುವ ಓಟವನ್ನು ತಾಳ್ಮೆಯಿಂದ ಓಡೋಣ, ಮತ್ತು ಪೌಲನೊಂದಿಗೆ ಕೂಡಿಕೊಂಡು "ನಂಬಿದೆನು, ಆದದರಿಂದ ಮಾತಾಡಿದೆನು" ಎಂದು ಹೇಳುವವರಾಗೋಣ.

*ಮುಕ್ತಾಯ.* ನಮ್ಮ ನಂಬಿಕೆಯು ವೈಯಕ್ತಿಕವಾಗಿರತಕ್ಕದ್ದು. ಅದು ಸಾಭಿತುಗೊಳಿಸಲ್ಪಡುವದು. ಅದು ಸಾರಲ್ಪಡತಕ್ಕದ್ದು. ನಿಮ್ಮ ನಂಬಿಕೆಯು ಏನಾಗಿದೆ? ಅದು ಬಲಿಷ್ಠ, ಜೀವಧಾರಕ, ಶೌರ್ಯವುಳ್ಳದ್ದು, ಮತ್ತು ದೇವರ ವಾಕ್ಯದ ಸತ್ಯತೆಗಳಲ್ಲಿ ದೃಢವಾಗಿ ಬೇರೂರಿರುವಂಥದ್ದು, ನಮ್ಮೆಲ್ಲರ ಮೇಲೆ ಬರಲಿರುವ ಆ ಬಿರುಗಾಳಿಗಳನ್ನು ಎದುರಿಸುವದಕ್ಕೆ ಸಿದ್ಧವಾದದ್ದು ಆಗಿದೆಯೋ? ಅದು ಹೆಚ್ಚು ವೈಯಕ್ತಿಕವಾಗಿ ನೆಲೆಗೊಂಡಿರಬೇಕಾದ ಅಗತ್ಯವಿರುವ ಒಂದು ನಂಬಿಕೆಯೋ? ಅದು ನಿಜವಾಗಿಯೂ ತನ್ನನ್ನು ಅಧೀನತೆಯಲ್ಲಿ ವ್ಯಕ್ತಪಡಿಸಿಕೊಂಡಿರದ ಒಂದು ನಂಬಿಕೆಯೋ? AM

---

**ಅಡಿಟಿಪ್ಪಣಿಗಳು**

[1]R. C. H. Lenski, *The Interpretation of St. Paul's Epistles to the Colossians, to the Thessalonians, to Timothy, to Titus and to Philemon* (Columbus, Ohio: Lutheran Book Concern, 1937; reprint, Minneapolis, Minn.: Augsburg Publishing House, 1961), 281. [2]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker (Chicago: University of Chicago Press, 2000), 520–21. [3]Bruce M. Metzger, *A Textual Commentary on the Greek New Testament: A Companion Volume to the United Bible Societies' Greek New Testament Third Edition* (New York: United Bible Societies, 1971), 631. [4]David J. Williams, *1 and 2 Thessalonians*, New International Biblical Commentary: New Testament Series, vol. 12

(Peabody, Mass.: Hendrickson Publishers, 1992), 58. [5]Bauer, 402. [6]Leon Morris, *The First and Second Epistles to the Thessalonians*, The New International Commentary on the New Testament (Grand Rapids, Mich.: Wm. B. Eerdmans Publishing Co., 1959), 101. [7]Georg Braumann, "Exhort," in *The New International Dictionary of New Testament Theology*, ed. Colin Brown (Grand Rapids, Mich.: Zondervan Publishing House, 1975), 1:570. [8]Morris, 106–7. [9]Williams, 63. [10]Ibid., 64.

[11]A. T. Robertson, *The Epistles of Paul*, vol. 4, *Word Pictures in the New Testament* (Nashville: Broadman Press, 1931), 26–27. [12]Ibid., 27. [13]Williams, 66. [14]Morris, 96–97. [15]Ibid., 115. [16]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati, Ohio: Standard Publishing Foundation, 1916), 14. [17]I. Howard Marshall, *1 and 2 Thessalonians*, The New Century Bible Commentary (Grand Rapids, Mich.: Wm. B. Eerdmans Publishing Co., 1983), 102. [18]Hal Lindsey, *The Late Great Planet Earth* (Grand Rapids, Mich.: Zondervan, 1970), 125–31, 159–65. [19]Williams, 68. For a full explanation of the various rapture positions (Pre-, Mid-, or Post-Tribulation), see R. Reiter, P. Feinberg, G. Archer, and D. Moo, *The Rapture* (Grand Rapids, Mich.: Academic, 1984). [20]The United Bible Societies text now places "Amen" at the end of verse 13 in brackets with a C rating. Sinaiticus, Alexandrinus, and Beza include it. Hugo McCord accepts it (*McCord's New Translation of the Everlasting Gospel*). See *The Greek New Testament*, 4th rev. ed., ed. Barbara Aland, Kurt Aland, Johannes Karavidopoulos, Carlo M. Martini, and Bruce M. Metzger (Stuttgart: United Bible Societies, 1998).

[21]Raymond C. Kelcy, *The Letters of Paul to the Thessalonians*, The Living Word Commentary, vol. 13 (Austin, Tex.: R. B. Sweet Co., 1968), 66.